ಜೂನ್ 8, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1988
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕ್ಷಮೆ ಕೇಳದ ‘ಮೊಂಡ’ ಕರ್ನಾಟಕಕ್ಕೆ ಕಾಲಿಡಬಾರದು!

# ಕಮಲ್ ಯಡವಟ್ ಶಿವಣ್ಣ ಟಾರ್ಗೆಟ್?!

ಹೈ ಕೋರ್ಟ್ ಛೀಮಾರಿ ಹಾಕಿತು!











## ಮಗಳು ಮನೆ ಬಿಟ್ಟಳು; ಹೆತ್ತವರು ಹೆಣವಾದರು!

## DLFನಿಂದ 1100 ಕೋಟಿ ಭೂ-ಸ್ವಾಹ?!



## ಡಂಬಲ್ಸ್‌ನಿಂದ ಪತ್ನಿ ತಲೆ ಜಜ್ಜಿ ತಾನೂ ಸೂಸೈಡ್ ಮಾಡ್ಕೊಂಡ!

## ಬೇಗೂರಿನಲ್ಲಿ ಭೂಗಳ್ಳರ ಅಟ್ಟಹಾಸಕ್ಕೆ ಮನೆ-ದೇವಾಲಯಗಳೇ ಸರ್ವನಾಶ!

# ಕನ್ನಡಕ್ಕೆ ಮೊಟ್ಟ ಮೊದಲ 'ಬೂಕರ್' ತಂದುಕೊಟ್ಟ ಬಾನು ಕನ್ನಡ ನಾಡಿನ ಹೆಮ್ಮೆ...

**ಭಾರತದ ಸಾಮಾಜಿಕ ವ್ಯವಸ್ಥೆಗೆ ಕುರುಡರಾಗಿರುವವರು ಮಾತ್ರ ಅವಕಾಶ ಮತ್ತು ಪ್ರಾತಿನಿಧ್ಯದ ಪಾತ್ರವನ್ನು ನಿರಾಕರಿಸಲು ಸಾಧ್ಯ. ಮುಸ್ಲಿಮ್ ಸಮುದಾಯದಲ್ಲಿ ಬರವಣಿಗೆಯ ಪ್ರಯತ್ನ ಮಾಡಿದ್ದ ಮಹಿಳೆಯರಲ್ಲಿ ಬಾನು ಮುಷ್ತಾಕ್ ಇಲ್ಲವೆ ಸಾರಾ ಅಬೂಬಕರ್ ಮೊದಲಿಗರಾಗಿರಲಿಕ್ಕಿಲ್ಲ, ಅವಕಾಶ ಇಲ್ಲದೆ ಇಂತಹ ಎಷ್ಟು ಪ್ರತಿಭೆಗಳು ಕಮರಿಹೋಗಿದೆಯೋ ಗೊತ್ತಿಲ್ಲ, ಚಂದ್ರಗಿರಿಯ ತೀರದಲ್ಲಿ ಕಾದಂಬರಿ ಧಾರವಾಹಿಯಾಗಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದಾಗ ಸಾರಾ ಅವರಿಗೆ 45 ವರ್ಷ ವಯಸ್ಸು, ಅದಕ್ಕಿಂತ ಮೊದಲು ಅವರ ಕೃತಿಗಳು ಯಾಕೆ ಪ್ರಕಟವಾಗಿಲ್ಲ ಎಂದರೆ ಅವಕಾಶ ಸಿಕ್ಕಿಲ್ಲ ಎಂದೇ ಅರ್ಥ....**

ಬೂಕರ್ ಪ್ರಶಸ್ತಿ ಪಡೆದ ನಂತರ ಬಾನು ಮುಷ್ತಾಕ್ ಅವರ ಜೊತೆ ಲಂಕೇಶ್ ಅವರನ್ನು ನೆನಪಿಸಿಕೊಂಡವರಲ್ಲಿ ನಾನೇ ಮೊದಲಿಗನಿರಬಹುದು. ಅದಕ್ಕೆ ಕೈ, ಕಾಲು, ಬಾಲ-ಕೋಡುಗಳೆಲ್ಲ ಮೂಡಿ ಚರ್ಚೆ ಎಲ್ಲಿಂದ ಎಲ್ಲೋ ಹೋಗಿ ಮುಟ್ಟಿದೆ. ನಾನು ಬಹಳ ಸರಳವಾಗಿ ''ಬಾನು ಮುಷ್ತಾಕ್ ಅವರನ್ನು ನಮ್ಮಂತವಹರಿಗೆ ಪರಿಚಯಿಸಿದ ಪಿ.ಲಂಕೇಶ್ ಅವರಿಗೂ ಅಭಿನಂದನೆಗಳು'' ಎಂದು ಬರೆದಿದ್ದೆ. ಅದರ ನಂತರ ಬಾನು ಅವರ ಪತಿ ಮುಷ್ತಾಕ್ ಅವರಿಗೂ ಅಭಿನಂದನೆಗಳು ಎಂದು ಬರೆದೆ. ಎರಡನೆಯ ಅಭಿನಂದನೆ ನಮ್ಮ ಕೆಲವು ಮಹಿಳಾ ಲೇಖಕಿಯರನ್ನು ಕೆರಳಿಸಿಬಿಟ್ಟಿತು. ನಾನು ಬಾನು ಮುಷ್ತಾಕ್ ಅವರನ್ನು ಅರ್ಥಮಾಡಿಕೊಂಡ ಹಾಗೆ ಅವರು ಕೂಡಾ ನನ್ನ ಈ ಎರಡು ಅಭಿಪ್ರಾಯಗಳನ್ನು ನಿರಾಕರಿಸಲಾರರು ಎಂದು ನಂಬಿದ್ದೇನೆ, ನೋಡೋಣ.

ಭಾರತದ ಸಾಮಾಜಿಕ ವ್ಯವಸ್ಥೆಗೆ ಕುರುಡರಾಗಿರುವವರು ಮಾತ್ರ ಅವಕಾಶ ಮತ್ತು ಪ್ರಾತಿನಿಧ್ಯದ ಪಾತ್ರವನ್ನು ನಿರಾಕರಿಸಲು ಸಾಧ್ಯ. ಮುಸ್ಲಿಮ್ ಸಮುದಾಯದಲ್ಲಿ ಬರವಣಿಗೆಯ ಪ್ರಯತ್ನ ಮಾಡಿದ್ದ ಮಹಿಳೆಯರಲ್ಲಿ ಬಾನು ಮುಷ್ತಾಕ್ ಇಲ್ಲವೆ ಸಾರಾ ಅಬೂಬರ್ಕ ಮೊದಲಿಗರಾಗಿರಲಿಕ್ಕಿಲ್ಲ, ಅವಕಾಶ ಇಲ್ಲದೆ ಇಂತಹ ಎಷ್ಟು ಪ್ರತಿಭೆಗಳು ಕಮರಿಹೋಗಿದೆಯೋ ಗೊತ್ತಿಲ್ಲ, ಚಂದ್ರಗಿರಿಯ ತೀರದಲ್ಲಿ ಕಾದಂಬರಿ ಧಾರವಾಹಿಯಾಗಿ ಲಂಕೇಶ್ ಪತ್ರಿಕೆಯಲ್ಲಿ ಪ್ರಕಟವಾದಾಗ ಸಾರಾ ಅವರಿಗೆ 45 ವರ್ಷ ವಯಸ್ಸು, ಅದಕ್ಕಿಂತ ಮೊದಲು ಅವರ ಕೃತಿಗಳು ಯಾಕೆ ಪ್ರಕಟವಾಗಿಲ್ಲ ಎಂದರೆ ಅವಕಾಶ ಸಿಕ್ಕಿಲ್ಲ ಎಂದೇ ಅರ್ಥ.

ಬರವಣಿಗೆ ಎನ್ನುವುದು ಗೋಡೆ ಬರಹ ಅಲ್ಲ, ಅದು ಓದುಗರನ್ನು ತಲುಪಬೇಕಾದರೆ ಪತ್ರಿಕೆ, ಪುಸ್ತಕ ಮೊದಲಾದ ಸಾಧನಗಳು ಬೇಕಾಗುತ್ತದೆ. ಅವಕಾಶವನ್ನು ನೀಡುವ ಸಂಪಾದಕರು, ಪ್ರಕಾಶಕರು ಬೇಕಾಗುತ್ತಾರೆ. ಇದು ಕೂಡಿ ಬರದೆ ಇದ್ದಾಗ ಪ್ರತಿಭೆಗಳು ಮನೆಯೊಳಗೆ ಹುಟ್ಟಿ ಹೊಸಿಲು ದಾಟಲಾಗದೆ ಮುರುಟಿಹೋಗುತ್ತವೆ. ನಮ್ಮ ಪತ್ರಿಕೆಗಳ ಸಂಪಾದಕರು ಮತ್ತು ಪುರವಣಿಗಗಳ ಸಂಪಾದಕರು ನಡೆಸಿರುವ ಮತ್ತು ಈಗಲೂ ನಡೆಸುತ್ತಿರುವ ಸಾಹಿತ್ಯದ ರಾಜಕೀಯದ ಬಗ್ಗೆ ಬರೆದರೆ ಅದೇ ಒಂದು ಕಾದಂಬರಿಯಾಗಬಹುದು.

ಈ ಕಟು ವಾಸ್ತವದ ಹಿನ್ನೆಲೆಯಲ್ಲಿ ಲೇಖಕ ಇಲ್ಲವೇ ಲೇಖಕಿಯ ಯಶಸ್ಸನ್ನು ಸಂಭ್ರಮಿಸುವಾಗ ಅವರಿಗೆ ಬೆಂಬಲವಾಗಿ ನಿಂತವರನ್ನು ನೆನಪು ಮಾಡಿಕೊಂಡ ಮಾತ್ರಕ್ಕೆ ಆ ಲೇಖಕ/ಲೇಖಕಿಯ ಮಹತ್ವವನ್ನು ಕಡೆಗಣಿಸಿದಂತಾಗುತ್ತದೆ ಎನ್ನುವುದು ಅತಿರೇಕದ ತೀರ್ಮಾನ.

ಅವಕಾಶ ಪಡೆದವರೆಲ್ಲರೂ ಅದನ್ನು ಸದುಪಯೋಗ ಮಾಡಿಕೊಳ್ಳುತ್ತಾರೆ ಎನ್ನುವ ಖಾತರಿ ಇಲ್ಲ ಎನ್ನುವುದೂ ನಿಜ. ಲಂಕೇಶ್ ಶಿಷ್ಯರೆಂದು ಹೇಳಿಕೊಳ್ಳುವ ಕೆಲವರು ನೈತಿಕವಾಗಿ ತಲುಪಿರುವ ಅಧೋಗತಿಯೇ ಇದಕ್ಕೆ ಉದಾಹರಣೆ. ಬಾನು ಮುಷ್ತಾಕ್, ಸಾರಾ ಅಬೂಬರ್ಕ ಮೊದಲಾದವರ ಬಗ್ಗೆ ನಮ್ಮ ಗೌರವ ಇಮ್ಮಡಿಯಾಗಲು ಇದೂ ಕಾರಣ.

ಬಾನು ಅವರ ಪತಿಯನ್ನು ನೆನಪು ಮಾಡಿಕೊಳ್ಳಲು ಕೂಡಾ ಕಾರಣ ಇದೆ. ಬಂಡಾಯಗಾರರು ಎಂದು ಹೇಳಿಕೊಳ್ಳುವ ನಮ್ಮ ಎಷ್ಟು ಮುಸ್ಲಿಮ್ ಲೇಖಕರು-ಪತ್ರಕರ್ತರು ತಮ್ಮಪತ್ನಿ ಮತ್ತು ಮಕ್ಕಳನ್ನು ಕನಿಷ್ಠ ಬುರ್ಕಾ ಹಾಕದೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಬಿಟ್ಟಿದ್ದಾರೆ? ಇಂತಹ ಸ್ಥಿತಿಯಲ್ಲಿ ಹಾಸನದಂತಹ ಸಣ್ಣ ನಗರದಲ್ಲಿ ಕನ್ನಡಕದ ವ್ಯಾಪಾರ ಮಾಡಿಕೊಂಡಿರುವ ಒಬ್ಬ ಸಾಮಾನ್ಯ ಮುಸ್ಲಿಮ್ ಪತಿ ತನ್ನ ಪತ್ನಿಯ ಪ್ರಗತಿ ಪರ ನಡೆ-ನುಡಿಗಳಿಂದ ಎಷ್ಟೊಂದು ಬಗೆಯ ಒತ್ತಡ-ಬೆದರಿಕೆಗಳನ್ನು ತಮ್ಮದೇ ಸಮುದಾಯದಿಂದ ಎದುರಿಸಿರಬಹುದು ಎಂದು ಯೋಚನೆ ಮಾಡಿದರೆ ಅವರ ಮಹತ್ವ ಗೊತ್ತಾಗುತ್ತದೆ. ಇಂತಹ ಸ್ಥಿತಿಯಲ್ಲಿ ಬಾನು ಮುಷ್ತಾಕ್ ಅವರ ಯಶಸ್ಸಿನ ಒಂದು ಸಣ್ಣಪಾಲನ್ನು ಮುಷ್ತಾಕ್ ಅವರಿಗೆ ನೀಡಿದರೆ ಬಾನು ಅವರ ತೂಕ ಕಡಿಮೆ ಮಾಡಿದಂತಾಗುತ್ತದೆಯೇ?

ನಾನು ಯಾವಾಗಲು ಹೇಳುತ್ತಾ ಇರುವುದನ್ನು ಹೇಳಿಬಿಡುತ್ತೇನೆ. ಕನ್ನಡದ ನೂರು ಪ್ರತಿಭಾವಂತ ಕವಿಗಳು, ಕತೆಗಾರರು, ಕಾದಂಬರಿಕಾರರ ಪಟ್ಟಿ ಮಾಡಿದರೆ ಅದರಲ್ಲಿ ಕನಿಷ್ಠ 50ರಷ್ಟು ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ. ಆದರೆ ನೂರು ಪತ್ರಕರ್ತರ ಪಟ್ಟಿ ಮಾಡಿದರೆ ಅದರಲ್ಲಿ ಹತ್ತು ಮಂದಿಯನ್ನು ಹುಡುಕಬೇಕಾದರೆ ದುರ್ಬೀನು ಹಿಡಿಯಬೇಕಾಗುತ್ತದೆ. ಪತ್ರಿಕಾ ವೃತ್ತಿ ಎನ್ನುವುದು ರಾಕೆಟ್ ಸಾಯನ್ಸ್ ಏನಲ್ಲ, ಹಾಗಿದ್ದರೂ ಯಾಕೆ ಪ್ರಾತಿನಿಧ್ಯ ಇಲ್ಲ,



ಯಾಕೆಂದರೆ ಕವಿಯೋ, ಕತೆಗಾರನೋ ಬರೆದುದನ್ನು ತಾನೇ ಪ್ರಕಟಿಸಿ ಪುಕ್ಕಟೆಯಾಗಿ ಹಂಚಿಯೂ ಕವಿಯೋ, ಕತೆಗಾರನೋ ಆಗಬಹುದು. ಆದರೆ ಪತ್ರಕರ್ತನೆನಿಸಿಕೊಳ್ಳಲು ಯಾವುದಾದರೂ ಪತ್ರಿಕೆಯಲ್ಲಿ ಉದ್ಯೋಗಿಯಾಗುವ ಅವಕಾಶ ಸಿಗಬೇಕು. ಯಾರು ಅವಕಾಶ ಕೊಡುತ್ತಾರೆ? ಓದುಗನೇ ಪತ್ರಕರ್ತನಾಗಿರುವ ಈಗಿನ ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ಅಭಿವ್ಯಕ್ತಿಗೆ ಹೊಸ ಮಾರ್ಗಗಳು ತೆರೆದುಕೊಂಡಿರುವುದರಿಂದ ಹಿಂದಿನದಕ್ಕಿಂತಲೂ ಹೆಚ್ಚು ಅವಕಾಶಗಳು ಇದೆ ಎನ್ನುವುದು ನಿಜ.

ಮನುಷ್ಯ ಮೂಲತ: ಪರಿಸರದ ಕೂಸು. ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆಯಲ್ಲಿ ಪರಿಸರದ ಪಾತ್ರ ಇದ್ದೇ ಇರುತ್ತದೆ. ಅದನ್ನು ನೆನಪು ಮಾಡಿಕೊಳ್ಳದೆ ಇರುವುದು ಆತ್ಮದ್ರೋಹವೇ ಸರಿ.

ನನ್ನಿಂದಲೇ ಶುರು ಮಾಡುತ್ತೇನೆ, ವಡ್ಡರ್ಸೆಯವರು ಅವಕಾಶ ನೀಡಿದ್ದು ಮಾತ್ರವಲ್ಲ ವೈಚಾರಿಕವಾದ ಸ್ಪಷ್ಟತೆಯೊಂದಿಗೆ ಬರವಣಿಗೆ ಮಾಡಲು ಪ್ರೇರೆಪಿಸದೆ ಇದ್ದಿದ್ದರೆ ನಾನು ಖಂಡಿತ ಪತ್ರಕರ್ತನಾಗುತ್ತಿರಲಿಲ್ಲ, ಬೀದಿಗೆ ಬೀಳುತ್ತಿರಲಿಲ್ಲ ನಿಜ, ಎಲ್ಲಿಯೋ ಬ್ಯಾಂಕಿನಲ್ಲಿಯೋ, ಇನ್ಸುರೆನ್ಸ್ ಕಂಪೆನಿಯಲ್ಲಿ ಕೆಲಸಮಾಡುತ್ತಾ ಅತೃಪ್ತಿ, ಅಸಮಾಧಾನ, ಸಿನಿಕತನದ ಮುದ್ದೆಯಾಗಿ ಬದುಕಿಯೂ ಸತ್ತವನ ಹಾಗೆ ಇರುತ್ತಿದ್ದೆ. ಮುಂಗಾರು ಪತ್ರಿಕೆಯಲ್ಲಿ ಎನ್.ಎಸ್. ಶಂಕರ್, ಕೆ.ಪುಟ್ಟಸ್ವಾಮಿ ಮೊದಲಾದವರ ಜೊತೆಯಲ್ಲಿ ನಾವಿದ್ದದ್ದೇ 3-4 ತಿಂಗಳು. ಆದರೆ ಇವರನ್ನೂ ನಾನು ಗುರುಗಳೆಂದೇ ತಿಳಿದುಕೊಂಡಿದ್ದೇನೆ.

ಮುಂಗಾರು ಮುಚ್ಚುವ ಸ್ಥಿತಿಯಲ್ಲಿದ್ದಾಗ ಕೆ.ಎನ್. ಹರಿಕುಮಾರ್ ಅವರು ಕರೆಸಿ ಕೆಲಸ ಕೊಡದೆ ಇದ್ದಿದ್ದರೆ ನಾನು ಈ ವೃತ್ತಿಯಲ್ಲಿ ಮುಂದುವರಿಯುತ್ತಿರಲಿಲ್ಲ, ಅವರು ನನ್ನನ್ನು ದೆಹಲಿಗೆ ಕಳಿಸದೆ ಇದ್ದಿದ್ದರೆ ನಾನು ವೃತ್ತಿಜೀವನ ಈಗಿನ ತಿರುವು ಪಡೆಯುತ್ತಿರಲಿಲ್ಲ, ದೆಹಲಿಯಿಂದ ನಾನು ಅಂಕಣ ಬರೆಯಲ ಹೊರಟಾಗ ದಂಡ-ಪಿಂಡ-ಪುಂಡರೆಲ್ಲ ಸೇರಿ ಅಡ್ಡಗಾಲು ಹಾಕುತ್ತಿದ್ದ ಸಂದರ್ಭದಲ್ಲಿ ಕೆ.ಎನ್. ಶಾಂತಕುಮಾರ್ ಬೆನ್ನಹಿಂದೆ ನಿಲ್ಲದೆ ಇದ್ದಿದ್ದರೆ ನಾನು ಅಂಕಣಕಾರನಾಗಿ ಮುಂದುವರಿಯಲು ಸಾಧ್ಯವಾಗುತ್ತಿರಲಿಲ್ಲ,

ನಾನು ಬಯಸಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರನಾಗಿದ್ದಲ್ಲ, ಮೊದಲ ಒಂದೆರಡು ವರ್ಷ ಪತ್ರಿಕಾ ವೃತ್ತಿ ಬಿಟ್ಟುಬಂದಿದ್ದಕ್ಕಾಗಿ ಅಪರಾಧಿ ಪ್ರಜ್ಞೆಯಿಂದ ನರಳುತ್ತಾ ಇದ್ದದ್ದು ಕೂಡಾ ನಿಜ. ಆದರೆ 2013ರ ನಂತರ ಬದಲಾದ ಮಾಧ್ಯಮ ಕ್ಷೇತ್ರದ ಸ್ಥಿತಿ ನೋಡಿದರೆ ನಾನು ಅಲ್ಲಿ ಮುಂದುವರಿದಿದ್ದರೂ ನಾನೂ ಗೋಧಿ ಮೀಡಿಯಾದ ಭಾಗವಾಗಿ ನರಳಾಡುತ್ತಾ ಬದುಕುತ್ತಿದ್ದೆ. ಅಂತಹ ಸ್ಥಿತಿಯಿಂದ ನನ್ನನ್ನು ಪಾರು ಮಾಡಿ ಸಿದ್ದರಾಮಯ್ಯನವರು ತನ್ನ ಬಳಿ ಕರೆಸಿಕೊಂಡು ಅವಕಾಶ ನೀಡದೆ ಇರುತ್ತಿದ್ದರೆ ನಾನು ಬಾಯಿ ಬಂದ್ ಮಾಡಿಕೊಂಡು ಮೂಲೆ ಸೇರಿ ಎಷ್ಟೋ ವರ್ಷಗಳಾಗಿರುತ್ತಿತ್ತು. ಹೀಗೆಲ್ಲ ಇರುವಾಗ ಅವಕಾಶ ಕೊಡಲು ಅವರೆಲ್ಲ ಯಾರ್ರಿ ?

''ನನ್ನಲ್ಲಿ ಪ್ರತಿಭೆ ಇತ್ತು ನಾನು ಬೆಳೆದೆ'' ಎಂದು ನಾನೇನಾದರೂ ಒದರಿದರೆ ನನಗಿಂತ ನೀಚ, ಅಧಮ, ಸ್ವಾರ್ಥಿ ಬೇರೆ ಯಾರೂ ಇಲ್ಲ.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಆಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

**ನಮ್ಮ ವಿಳಾಸ :**

8884452699 policenewsreporter@gmail.com 080-23588510

ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079



ಮೂವರು ಈ ಜಲಾಶಯದಲ್ಲೇ ಹಾರಿದ್ದು



ಶವಗಳನ್ನು ಹುಡುಕುತ್ತಿರುವುದು

# ಮಗಳು ಮನೆ ಬಿಟ್ಟಳು... ಹೆತ್ತವರು ಹೆಣವಾದರು..!

**ಹೆಣ್ಣಾಗಲೀ, ಗಂಡಾಗಲೀ ತಮ್ಮ ಮಕ್ಕಳನ್ನು ಹೆತ್ತವರು ಯಾವುದೇ ಕೊರತೆಯಾಗದಂತೆ ಸಾಕಿ ಸಲಹಿ, ಅವರು ಕೇಳಿದ್ದನೆಲ್ಲ ಕೊಡಿಸಿ ತಮ್ಮ ಹೆಸರನ್ನು ಉಳಿಸಿ ಬೆಳೆಸಲಿ ಎಂದು ಬಯಸುತ್ತಾರೆ. ಅಷ್ಟೇ ಅಲ್ಲದೆ, ಮಕ್ಕಳಿಗೊಂದು ಉದ್ಯೋಗ, ಮದುವೆ ಮಾಡಿಸಿ ಜವಬ್ದಾರಿ ಕಳೆದುಕೊಳ್ಳಬೇಕೆಂದು ಬಯಸುತ್ತಾರೆ. ಅದರಲ್ಲೂ ಹೆಣ್ಣು ಹೆತ್ತವರಂತು ತಮ್ಮ ಮಗಳ ಭವಿಷ್ಯದ ಬಗ್ಗೆ ತುಸು ಜಾಸ್ತಿಯೇ ಕಾಳಜಿ ವಹಿಸುತ್ತಾರೆ. ತನ್ನ ಮಗಳನ್ನು ಮದುವೆಯಾಗುವ ಅಳಿಯ ಚೆನ್ನಾಗಿರಬೇಕು, ಮಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕು ಹೀಗೆ ಹತ್ತಾರು ಕನಸುಗಳನ್ನು ಹೊತ್ತುಕೊಂಡು ಬದುಕುತ್ತಿರುತ್ತಾರೆ. ಆದರೆ ಕೆಲವೊಮ್ಮೆ ಮಕ್ಕಳು ದಾರಿ ತಪ್ಪಿದರೆ, ಹೆತ್ತವರು ಕಟ್ಟಿಕೊಂಡ ಆಶಾಗೋಪುರ ಕಳಚಿ ಬೀಳುತ್ತದೆ. ಈ ವೇಳೆ ನಡೆಯುವ ಘಟನೆಗಳು ಭಯಂಕರವಾಗಿರುತ್ತದೆ.**



ಆತ್ಮಹತ್ಯೆ ಮಾಡಿಕೊಂಡ ಮಹದೇವಸ್ವಾಮಿ, ಮಂಜುಳಾ ಹಾಗೂ ಹರ್ಷಿತಾ

**ಮೈಸೂರು**

✍ಬಿ.ಎಂ. ಲವಕುಮಾರ್

ಬಹಳಷ್ಟು ಸಲ ಹೆತ್ತವರಿಗೆ ತಮ್ಮ ಮಕ್ಕಳು ಮೋಸ ಮಾಡಲ್ಲ ನಾವು ಹೇಳಿದಂತೆ ನಡೆದುಕೊಳ್ಳುತ್ತಾರೆ ಎಂಬ ಆತ್ಮವಿಶ್ವಾಸಗಳಿರುತ್ತವೆ. ಆದರೆ ಕೆಲವೊಮ್ಮೆ ಹಾಗಿರುವುದಿಲ್ಲ. ಮಕ್ಕಳು ಹೆತ್ತವರ ಅಶೋತ್ತರಗಳಿಗ ವಿರುದ್ಧವಾದ ನಿರ್ಧಾರಗಳನ್ನು ಮಾಡಿಯಾಗಿರುತ್ತದೆ. ಕಾಲೇಜಿಗೆ ಹೋಗಿ ಓದುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಲವ್ವು, ಗಿವ್ವು ಅಂಥ ತಮ್ಮ ಬದುಕನ್ನೇ ಹಾಳು ಮಾಡಿಕೊಳ್ಳುತ್ತಾರೆ. ಒಂದು ವೇಳೆ ಒಳ್ಳೆ ಹುಡುಗನ ಪ್ರೀತಿಸಿದರೆ ತೊಂದರೆಯಿಲ್ಲ ಆದರೆ ದಾರಿ ತಪ್ಪಿದ ಅಬ್ಬೆಪಾರಿಗಳನ್ನು ಪ್ರೀತಿಸಿ ಬಿಡುತ್ತಾರೆ.

ಆತನೊಂದಿಗೆ ಓಡಾಡುತ್ತಾ ಖುಷಿಯಾಗಿರುತ್ತಾರೆ. ಅವರ ಪ್ರೀತಿ, ಪ್ರೇಮ, ಮಾತುಕತೆ ಅಷ್ಟೇ ಕಾಣಿಸುತ್ತದೆ. ಅದರಾಚೆಗೆ ಏನಾಗಬಹುದು ಎಂಬುದು ಗೊತ್ತೇ ಆಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಮನೆಯಲ್ಲಿ ಈ ವಿಚಾರ ಗೊತ್ತಾದಾಗ ರಾದ್ಧಾಂತವಾಗುತ್ತದೆ. ಹೆತ್ತವರು ಅವನು ಸರಿಯಿಲ್ಲ ಅವನ ಮರೆತು ಬಿಡು ಎಂದು ಬುದ್ಧಿ ಹೇಳಿದರೆ ಅದನ್ನು ಕೇಳುವ ಸ್ಥಿತಿಯಲ್ಲಿ ಹೆಣ್ಣು ಮಕ್ಕಳಿರುವುದಿಲ್ಲ. ಹೀಗಾಗಿ ಅವರು ಹೆತ್ತವರನ್ನು ಬಿಟ್ಟು ತಾನು ಪ್ರೀತಿಸಿದ ಹುಡುಗನೊಂದಿಗೆ ಮನೆ ಬಿಟ್ಟು ಓಡಿ ಹೋಗಲು ತಯಾರಿರುತ್ತಾರೆ. ಬಹಳಷ್ಟು ಪ್ರಕರಣಗಳಲ್ಲಿ ಎಲ್ಲರನ್ನು ಎದುರು ಹಾಕಿಕೊಂಡು ಮದುವೆಯಾದ ನಿದರ್ಶನಗಳಿವೆ. ಇಲ್ಲಿ ಹೆತ್ತವರಾಗಲೀ, ಮಗಳಾಗಲೀ ಸೋಲಲು ತಯಾರಿರುವುದಿಲ್ಲ. ಹೀಗಾಗಿ ಹಠಕ್ಕೆ ಬಿದ್ದು ಕೆಲವೊಮ್ಮೆ ಇಂತಹ ಲವ್ ಸ್ಟೋರಿಗಳು ದುರಂತದಲ್ಲಿ ಅಂತ್ಯಗೊಳ್ಳುತ್ತದೆ.



ಶವಗಳನ್ನು ಹೊರ ತೆಗೆದಿರುವುದು

ಒಂದಲ್ಲ ಒಂದು ಕಾರಣಕ್ಕೆ ಎಲ್ಲರೂ ದಾರಿ ತಪ್ಪುತ್ತಾರೆ. ಆದರೆ ಸರಿದಾರಿ ಹುಡುಕಿಕೊಂಡು ಮುನ್ನಡೆಯುವುದು ನಿಜವಾದ ಮನುಷ್ಯನ ಲಕ್ಷಣವಾಗಿದೆ. ಲವ್ ವಿಚಾರದಲ್ಲಿ ಮನೆಯವರು ಒಪ್ಪಿಗೆ ಸೂಚಿಸಿಲ್ಲ ಎಂದು ಬೇಸರಗೊಂಡು ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಸಾಮಾನ್ಯವಾಗಿದೆ. ಆದರೆ ತಮ್ಮ ಮಾತು ಕೇಳದೆ ಅನ್ಯ ಜಾತಿಯ ಮತ್ತು ಒಳ್ಳೆ ಸ್ವಭಾವದವನಲ್ಲದ ಹುಡುಗನನ್ನು ಪ್ರೀತಿಸಿ ಅವನೊಂದಿಗೆ ಮನೆ ಬಿಟ್ಟು ಓಡಿ ಹೋದಳೆಂದು ಬೇಸರಗೊಂಡು ಇಡೀ ಕುಟುಂಬವೇ ಆತ್ಮಹತ್ಯೆ ಮಾಡಿಕೊಂಡ ಅಪರೂಪದ ಮತ್ತು ಮನವಿದ್ರಾವಕ ಘಟನೆ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನ ಬೂದನೂರು ಗ್ರಾಮದಲ್ಲಿ ನಡೆದಿದೆ.

ಬೂದನೂರು ಗ್ರಾಮದ ನಿವಾಸಿ ಮಹದೇವಸ್ವಾಮಿ (55) ಮತ್ತು ಪತ್ನಿ ಮಂಜುಳಾ (42) ದಂಪತಿ. ಮಹದೇವಸ್ವಾಮಿ ರಿಯಲ್ ಎಸ್ಟೇಟ್ ನಡೆಸುತ್ತಿದ್ದರು. ಜತೆಗೆ ಜಮೀನು ಗುತ್ತಿಗೆ ಪಡೆದು ಕೃಷಿ ಮಾಡಿಕೊಂಡು ಬಂದಿದ್ದರು. ಇವರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್.ಡಿ. ಕೋಟೆಯಲ್ಲಿ ಮನೆ ಮಾಡಿಕೊಂಡಿದ್ದರು. ಇವರಿಗೆ ಅಪಿತಾ ಮತ್ತು ಹರ್ಷಿತಾ ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದರು. ಅರ್ಪಿತಾ ಮೈಸೂರಿನಲ್ಲಿ ಕಾನೂನು ಪದವಿ ಓದುತ್ತಿದ್ದಳು. ಎರಡನೇ ಮಗಳು ಬಿಸಿಎ ವ್ಯಾಸಂಗ ಮಾಡುತ್ತಿದ್ದಳು. ಇಬ್ಬರನ್ನು ಓದಿಸಿ ಒಳ್ಳೆಯ ಹುಡುಗನಿಗೆ ಮದುವೆ ಮಾಡಿಕೊಡಬೇಕೆಂದು ಕನಸು ಕಂಡಿದ್ದರು. ಅದರಂತೆ ಯಾವುದೇ ತೊಂದರೆ ಬಾರದಂತೆ ನೋಡಿಕೊಂಡಿದ್ದರು. ಆದರೆ ಎಲ್ಲವೂ ಸರಿಯಾಗಿಯೇ ಇತ್ತು.

ಹಿರಿ ಮಗಳು ಅರ್ಪಿತಾ ಕಾಲೇಜಿಗಷ್ಟೇ ಹೋಗಿ ಓದಿನ ಕಡೆಗಷ್ಟೇ ಗಮನ ನೀಡಿದ್ದರೆ ಇವತ್ತು ಮೂರು ಜನರು ಪ್ರಾಣ ಕಳೆದುಕೊಳ್ಳುತ್ತಿರಲಿಲ್ಲವೇನೋ? ಆದರೆ ಹದಿಹರೆಯದ ವಯಸ್ಸು ಕೆಲವೊಮ್ಮೆ ಯಾರ ಮಾತಿಗೂ ಬಗ್ಗದೆ ದಾರಿ ತಪ್ಪಿಸಿಬಿಡುತ್ತದೆ. ಇಲ್ಲಿ ಅರ್ಪಿತಾಳ ಬದುಕಿನಲ್ಲಿ ಅಂತಹದ್ದೇ ಘಟನೆಯೊಂದು ನಡೆದು ಹೋಗಿತ್ತು.

ಹಿರಿ ಮಗಳು ಇಡೀ ಮನೆಯ ಜವಾಬ್ದಾರಿ ವಹಿಸಿಕೊಳ್ಳುತ್ತಾಳೆ. ಅಷ್ಟೇ ಅಲ್ಲದೆ ಕುಟುಂಬಕ್ಕೂ ಕೀರ್ತಿ ತರುತ್ತಾಳೆ ಎಂದು ನಂಬಿದ್ದರು. ಆದರೆ ಅರ್ಪಿತಾ ಕಾಲೇಜಿಗೆ ಹೋಗುವ ವೇಳೆಯಲ್ಲಿಯೇ ಭರತ್ ಎಂಬ ಅನ್ಯ ಜಾತಿಯ ಯುವಕನನ್ನು ಲವ್ ಮಾಡಲು ಶುರು ಮಾಡಿದ್ದಳು. ಆದರೆ ಅದಾಗಲೇ ಆತ ಬೇರೊಂದು ಯುವತಿಯನ್ನು ಲವ್ ಮಾಡಿ ಅದು ಬ್ರೇಕಪ್ ಆಗಿತ್ತು. ಈ ವಿಚಾರ ಎಲ್ಲರಿಗೂ ಗೊತ್ತಿತ್ತು ಎನ್ನಲಾಗಿದೆ. ಆದರೆ ಅದೇನಾಯಿತೋ ಅರ್ಪಿತಾ ಮಾತ್ರ, ನಾನು ಮದುವೆಯಾಗುವುದಾದರೆ ಆತನನ್ನೇ ಮದುವೆಯಾಗುವುದಾಗಿ ಹಠಕ್ಕೆ ಬಿದ್ದಿದ್ದಳು. ಆತನಿಗೋಸ್ಕರ ಹೆತ್ತವರನ್ನೇ ಬಿಟ್ಟು ಹೋಗಲು ಆಕೆ ತಯಾರಾಗಿದ್ದಳು.

ಮಗಳು ಕಾಲೇಜಿಗಷ್ಟೇ ಹೋಗುತ್ತಿದ್ದಾಳೆ ಎಂದು ನಂಬಿದ ಹೆತ್ತವರಿಗೆ ಮಗಳು ಅನ್ಯ ಜಾತಿಯ ಯುವಕನೊಬ್ಬನನ್ನು ಲವ್ ಮಾಡುತ್ತಿದ್ದಾಳೆ ಎಂದು ತಿಳಿದಾಗ ಆಕಾಶವೇ ಕಳಚಿ ತಲೆ ಮೇಲೆ ಬಿದ್ದಂತಾಗಿತ್ತು. ಇದಕ್ಕೆ ಕಾರಣವೂ ಇತ್ತು. ಅದೇನೆಂದರೆ ತನ್ನದೇ ಕುಟುಂಬದ ಮಹಿಳೆಯೊಬ್ಬಳು ಗಂಡನ ಬಿಟ್ಟು ಕೇರಳದಿಂದ ಕೆಲಸಕ್ಕೆ ಬಂದಿದ್ದ ವ್ಯಕ್ತಿಯೊಂದಿಗೆ ಹೋಗಿ ಬಿಟ್ಟಿದ್ದಳು. ಅದು ಕುಟುಂಬಕ್ಕೆ ಕಳಂಕ ತಂದಿತ್ತು. ಇನ್ನು ತನ್ನ ಮಗಳು ಬೇರೆ ಹುಡುಗನ ಅದರಲ್ಲೂ ಕೆಲಸ ಕಾರ್ಯವಿಲ್ಲದೆ ಅಂಡಲೆಯುವ ಯುವಕನ ಮದುವೆಯಾದರೆ ಆಕೆ ಹೇಗೆ ಸುಖವಾಗಿರುತ್ತಾಳೆ ಎಂಬ ಭಯ ಕಾಡಲಾರಂಭಿಸಿತ್ತು.

ಮಗಳನ್ನು ಕೂರಿಸಿಕೊಂಡು ತಂದೆ ಮಹದೇವಸ್ವಾಮಿ ಮತ್ತು ತಾಯಿ ಮಂಜುಳಾ ಬುದ್ಧಿ ಹೇಳಿದ್ದರು. ನೋಡು ಇಲ್ಲಿಗೆ ಬಿಟ್ಟು ಬಿಡು ಈಗಾಗಲೇ ನಮ್ಮ ಮಾನ ಮರ್ಯಾದೆ ಹೋಗಿದೆ. ನೀನು ಕೂಡ ಕಳೆದು ಬಿಟ್ಟರೆ ನಾವು ಜೀವಂತವಾಗಿರಲ್ಲ. ನಿನ್ನಿಂದ ನಿನ್ನ ತಂಗಿ ಹರ್ಷಿತಾಳ ಬದುಕು ಹಾಳಾಗಿ ಬಿಡುತ್ತದೆ. ಅವನ ಸಹವಾಸ ಬಿಡು ನಿನಗೆ ಒಳ್ಳೆ ಕಡೆ ನೋಡಿ ಮದುವೆ ಮಾಡುತ್ತೇವೆ ಎಂದೆಲ್ಲ ಬುದ್ಧಿವಾದ ಹೇಳಿದ್ದಾರೆ. ಆದರೆ ಹೆತ್ತವರ ಯಾವ ಮಾತನ್ನೂ ಕೇಳದ ಸ್ಥಿತಿಗೆ ಅರ್ಪಿತಾ ಹೋಗಿದ್ದಳು. ಆಕೆಗೆ ಗೊತ್ತಾಗಿ ಹೋಗಿತ್ತು.

ಹೆತ್ತವರು ಯಾವುದೇ ಕಾರಣಕ್ಕೂ ಭರತ್ ಜೊತೆಗೆ ಮದುವೆ ಮಾಡಿಕೊಡುವುದಿಲ್ಲ. ಆದ್ದರಿಂದ ಮನೆ ಬಿಟ್ಟು ಆತನೊಂದಿಗೆ ಹೋಗಿ ಬಿಡುವುದೇ ಇದಕ್ಕಿರುವ ಪರಿಹಾರ ಎಂದು ನಿಶ್ಚಯ ಮಾಡಿಕೊಂಡಿದ್ದಳು. ಹೀಗಾಗಿ ಅರ್ಪಿತಾ ಮನೆಬಿಟ್ಟು ಪ್ರಿಯಕರ ಭರತ್ ಜತೆಗೆ ಹೋಗಿದ್ದಳು. ಈ ಘಟನೆ ಮಹದೇವಸ್ವಾಮಿ ಕುಟುಂಬಕ್ಕೆ ಬರ ಸಿಡಿಲು ಬಡಿದಂತಾಗಿತ್ತು. ಅವರಿಗೆ ಮಗಳು ಮಾಡಿದ ಅದೊಂದು ಕೆಲಸ ಬದುಕೇ ಸಾಕು ಎನಿಸುವಂತೆ ಮಾಡಿತ್ತು. ಮಗಳಿಂದಾಗಿ ಸಮಾಜದಲ್ಲಿ ತಲೆ ಎತ್ತಿ ನಡೆಯೋ ಹಾಗಿಲ್ಲ. ಸಾಕು ಇಲ್ಲಿಗೆ ಬದುಕನ್ನು ಮುಗಿಸಿ ಬಿಡೋಣ ಎಂಬ ಕಠಿಣ ನಿರ್ಧಾರವನ್ನು ಅವರು ಅಂದರೆ ಅರ್ಪಿತಾಳ ತಂದೆ ಮಹದೇವಸ್ವಾಮಿ, ತಾಯಿ ಮಂಜುಳಾ, ತಂಗಿ ಹರ್ಷಿತಾ ಮಾಡಿದ್ದರು.


ಹೀಗಾಗಿ ಮಗಳು ಅರ್ಪಿತಾ ಮನೆ ಬಿಟ್ಟು ಹೋದ ನಂತರ ಇಡೀ ಕುಟುಂಬ ಮಂಕಾಗಿ ಹೋಗಿತ್ತು. ಊರಿನವರ ಮುಂದೆ ಕಾಣಿಸಿಕೊಳ್ಳುತ್ತಿರಲಿಲ್ಲ. ಸದಾ ಕಣ್ಣೀರು ಹಾಕುತ್ತಾ ಮೌನಕ್ಕೆ ಜಾರಿ ಬಿಟ್ಟಿದ್ದರು. ಅವರಿಗೆ ಮಗಳು ತಮ್ಮ ಕುಟುಂಬದ ಮಾನ ಕಳೆದಿದ್ದಾಳೆ. ನಮ್ಮ ಮಾನ ಮರ್ಯಾದೆ ಹೋದ ಮೇಲೆ ಊರಲ್ಲಿ ತಲೆ ಎತ್ತಿ ನಡೆಯುವುದಾದರೂ ಹೇಗೆ? ನಾಳೆ ಇನ್ನೊಬ್ಬ ಮಗಳ ಭವಿಷ್ಯವೇನು? ಹೀಗೆ ತಲೆ ತುಂಬಾ ಗೊಂದಲಗಳನ್ನು ತುಂಬಿಕೊಂಡೇ ಓಡಾಡಿದ್ದಾರೆ. ತಮ್ಮ ಸಮಸ್ಯೆಗೆ ಸಾವೇ ಪರಿಹಾರ ಎಂಬ ನಿರ್ಧಾರಕ್ಕೂ ಬಂದಿದ್ದರು.

ಹಾಗಾಗಿ ಅವರು ತಾವು ಕೊಡಬೇಕಾಗಿದ್ದ ಹಣವನ್ನು ಗೂಗಲ್ ಪೇ, ಸೇರಿದಂತೆ ಇನ್ನಿತರ ಮೂಲಗಳ

☞ 6

# ಎನ್ನಡ ಕಮಲ್ ಯಡವಟ್! ಕನ್ನಡ ಶಿವಣ್ಣ ಟಾರ್ಗೆಟ್ ?!

**ಕನ್ನಡ ಚಿತ್ರರಂಗದ ಮೇರುನಟ ಡಾ. ರಾಜ್ ಕುಮಾರ್ ಭಾರತೀಯ ಚಲನ ಚಿತ್ರರಂಗದಲ್ಲಿನ ಎಲ್ಲಾ ಕಲಾವಿದರನ್ನು ಗೌರವಿಸುತ್ತಿದ್ದರು. ಆದರೆ, ನಾಡು-ನುಡಿಯ ವಿಚಾರ ಬಂದಾಗ ಎಲ್ಲವನ್ನೂ ಬದಿಗಿರಿಸಿ 'ಕನ್ನಡ ನಾಡು- ಕನ್ನಡ ನುಡಿ'ಯ ಪರ ನಿಂತು ಬಿಡುತ್ತಿದ್ದರು. ಅದರಲ್ಲೇನು ನಾಟಕೀಯತೆ ಇರಲಿಲ್ಲ. ಅಂತಾ ರಾಜಕುಮಾರರ ಮಗ ಶಿವರಾಜ್‌ಕುಮಾರ್‌ಗೆ ಅಪ್ಪನ ಗತ್ತು ಗೈರತ್ತು ಎರಡೂ ಬರಲಿಲ್ಲ! ಅಪ್ಪನ ಹಾಗೆಯೇ ಎಲ್ಲರನ್ನೂ ಗೌರವಿಸುತ್ತಾರೆ ನಿಜ, ಆದರೆ, ಅವರ ಮೇಲಿನ ಅತಿಯಾದ ಪ್ರೀತಿಯಿಂದ ಜೋಶ್‌ಗೆ ಬಿದ್ದು ಏನೇನೋ ಮಾತಾಡಿಬಿಡುತ್ತಾರೆ! ಕಮಲ್ ತಬ್ಕೊಂಡಿಂದಕ್ಕೆ ನಾನು ಮೂರು ದಿನ ಸ್ನಾನ ಮಾಡಿರಲಿಲ್ಲ ಅಂತಾರೆ ಶಿವಣ್ಣ! ಇದನ್ನು ನಂಬಬೇಕಾ? ಯಾರನ್ನೋ ಮೆಚ್ಚಿಸಲಿಕ್ಕೆ ಹೀಗೆಲ್ಲ ಡ್ರಾಮಾ ಆಡಬೇಕಾ? ಶಿವಣ್ಣ ಇನ್ನಾದರೂ ಬುದ್ಧಿ ಕಲಿತರೆ ಅವರಿಗೇ ಒಳ್ಳೆಯದು!!**



**ಕ**ಮಲ್ ಹಾಸನ್ ಶ್ರೇಷ್ಠ ನಟರೆ ಹೊರತು, ಶ್ರೇಷ್ಠ 'ವ್ಯಕ್ತಿ'ಯಲ್ಲ! ಅವರ ವೈಯಕ್ತಿಕ ಬದುಕೇ ಇದನ್ನು ಸಾರಿ ಹೇಳುತ್ತದೆ! ಪರಮ ನಾಸ್ತಿಕರಾದ ಅವರನ್ನು ಹಿಂದೂಸ್ಥಾನದ ಮುಕ್ಕಾಲು ಭಾಗದಷ್ಟು ಜನ ಅವರನ್ನು ದ್ವೇಷಿಸುತ್ತಾರೆ. ಆದರೆ,ಅದೇ ಜನ ಕಮಲ್ ಸಿನಿಮಾ ಬಂತೆಂದರೆ ಮುಗಿಬಿದ್ದು ನೋಡುತ್ತಾರೆ! ಇದು ಕಮಲ್ ಅವರ ನಟನಾ ವಿಶೇಷ! ಕಮಲ್ ತಮಿಳು ಸೂಪರ್ ಸ್ಟಾರ್ ಆದರೂ ಕನ್ನಡವೂ ಸೇರಿದಂತೆ ಎಲ್ಲಾ ಭಾಷೆಗಳಲ್ಲಿಯೂ ನಟಿಸಿ ವೈವಿಧ್ಯತೆ ಪ್ರದರ್ಶಿಸಿದ್ದಾರೆ. ಇದೆಲ್ಲಾ ಓಕೆ, ಆದರೆ ಕೆಲವು ಸಂದರ್ಭಗಳಲ್ಲಿ ಮಹಾ ಮೇಧಾವಿಯಂತೆ ವರ್ತಿಸಿ ಕಾಂಟ್ರೋವರ್ಸಿ ಕ್ರಿಯೇಟ್ ಮಾಡ್ತಾರಲ್ಲ ಯಾಕೆ?

ಈಗೇನಾಗಿದೆ ಅನ್ನೋದು ಗೊತ್ತಲ್ಲ... ಭರತ ಖಂಡದ ಭಾಷಾ ಪಂಡಿತರೂ ಪರ ಪರ ತಲೆ ಕೆರೆದುಕೊಳ್ಳುವಂತೆ, 'ತಮಿಳಿನಿಂದಲೇ ಕನ್ನಡ ಹುಟ್ಟಿತು' ಎಂದು ಹೇಳಿಬಿಟ್ಟಿದ್ದಾರೆ! ತಮ್ಮ ನಟನೆಯ 'ಥಗ್ ಲೈಫ್' ಚಿತ್ರದ ಪ್ರಮೋಶನ್ ವೇದಿಕೆಯಲ್ಲಿ, ಕರ್ನಾಟಕದಿಂದ ಅತಿಥಿಯಾಗಿ ಅಲ್ಲಿಗೆ ತೆರಳಿದ್ದ ಕನ್ನಡ ಕುವರ ಶಿವರಾಜ್ ಕುಮಾರ್ ಮುಂದೆಯೇ ಇಂಥ ಯಡವಟ್ಟು ಹೇಳಿಕೆಯನ್ನು ನೀಡಿ ಸಮಸ್ತ ಕನ್ನಡಿಗರನ್ನು ಕೆಣಕಿರುವ ನಟ ಕಮಲ್ ಹಾಸನ್ ಮೇಲೆ ಇದೀಗ ಭಾರಿ ಆಕ್ರೋಶ ವ್ಯಕ್ತವಾಗಿದೆ!



ಕನ್ನಡ ಪರ ಹೋರಾಟಗಾರರು ಕೆರಳಿ ಕೆಂಡವಾಗಿ, ಕಮಲ್ ತಮ್ಮ ಹೇಳಿಕೆಯನ್ನು ಹಿಂತೆಗೆದುಕೊಂಡು ಕನ್ನಡಿಗರ ಕ್ಷಮೆ ಕೇಳಬೇಕು. ಇಲ್ಲವಾದರೆ, ಅವರ ಸಿನಿಮಾಗಳು ಇಲ್ಲಿ ಬಿಡುಗಡೆ ಆಗಲು ಬಿಡುವುದಿಲ್ಲ ಎಂದು ಖಡಕ್ಕಾಗಿ ಎಚ್ಚರಿಸಿದ್ದಾರೆ! ಇಷ್ಟಾದರೂ ಕಮಲ್ ಕನ್ನಡಿಗರ ಕ್ಷಮೆ ಕೇಳದೆ, ನಾನು ತಪ್ಪು ಮಾಡಿಲ್ಲ, ಕ್ಷಮೆ ಕೇಳೋದಿಲ್ಲ, ಪ್ರೀತಿ ಇರೋ ಜಾಗದಲ್ಲಿ ಕ್ಷಮೆ ಕೇಳೋ ಅಗತ್ಯವಿಲ್ಲ... ಎಂದು ಹೇಳಿದ್ದಾರೆ!

ಇತ್ತ, ಕರ್ನಾಟಕದಲ್ಲಿ ಶಿವರಾಜ್‌ಕುಮಾರ್ ಮೇಲೆ ಒತ್ತಡ ಹೆಚ್ಚಾಗಿ ಇಡೀ ರಾಜ್ಯ ಶಿವಣ್ಣನ ನಡೆಯ ಮೇಲೆ ಸಂಶಯ ವ್ಯಕ್ತಪಡಿಸುತ್ತಿದ್ದರೂ, ಕಮಲ್ ಮಾತ್ರ ಬದಲಾಗದೆ... ಚಿತ್ರರಂಗದಿಂದ ಬ್ಯಾನ್ ಮಾಡಿದ್ರೂ ಸರಿ, ನಾನು ಮಾತ್ರ ಕ್ಷಮೆ ಕೇಳಲ್ಲ... ಎನ್ನುತ್ತಿದ್ದಾರೆ! ಈ ಹಿಂದೆಯೂ ನನಗೆ ಬೆದರಿಕೆಗಳನ್ನು ಒಡ್ಡಲಾಗಿತ್ತು. ಆದರೆ ನಾನು ಜಗ್ಗಲಿಲ್ಲ. ಹಿಂದೆ ಇಲ್ಲಿ ನನಗೆ ಕರ್ನಾಟಕ ಮೂಲದ ವ್ಯಕ್ತಿಯೊಬ್ಬರಿಂದಲೇ ತೊಂದರೆ ಉಂಟಾದಾಗ, ಕನ್ನಡಿಗರೇ ನನಗೆ ಧೈರ್ಯ ತುಂಬಿ, ಬೆಂಗಳೂರಿಗೆ ಬನ್ನಿ ಸರ್... ಎಂದು ಆಹ್ವಾನಿಸಿದ್ದರು ಎಂದು ತೇಪೆ ಹಾಕುತ್ತಿದ್ದಾರೆ!

ಇದು ಪ್ರಜಾಪ್ರಭುತ್ವ, ನಾನು ಕಾನೂನು ಮತ್ತು ನ್ಯಾಯಾಂಗದಲ್ಲಿ ನಂಬಿಕೆ ಇಟ್ಟವನು. ಕರ್ನಾಟಕ, ಆಂಧ್ರಪ್ರದೇಶ ಮತ್ತು ಕೇರಳದ ಮೇಲಿನ ನನ್ನ ಪ್ರೀತಿ ನಿಜ. ಕೆಲವು 'ಅಜೆಂಡ'ಗಳನ್ನು ಹೊಂದಿರುವವರನ್ನು ಬಿಟ್ಟು ಬೇರೆಯವರೆಲ್ಲ ನನ್ನ ಪ್ರೀತಿಯನ್ನು ಅವಮಾನಿಸುವುದಿಲ್ಲ ಮತ್ತು ಅನುಮಾನಿಸುವುದಿಲ್ಲ...ಎಂದು ನಿಷ್ಠುರವಾಗಿ ಹೇಳಿದ್ದಾರೆ!

ತಾನು ಪ್ರೀತಿಯಿಂದ ಆ ಮಾತನ್ನು ಹೇಳಿದ್ದೇನೆ ಹೊರತು ಬೇರಾವ ದುರುದ್ದೇಶದಿಂದಲ್ಲ ಎಂದು ಪದೇ ಪದೇ ಹೇಳುತ್ತಿದ್ದಾರೆ! ಆದರೆ, ಈ ಹೇಳಿಕೆಯಲ್ಲಿರುವ ಭಾರಿ ಯಡವಟ್ಟು ಅವರಿಗೆ ಅರ್ಥವಾಗುತ್ತಲೇ ಇಲ್ಲ! ಇದೆಲ್ಲಾ ಅಧಿಕ ಪ್ರಸಂಗ ಮಾಡುವ ತಮಿಳು ಭಾಷೆಯೇ ಕನ್ನಡ ಭಾಷೆಯ ತಾಯಿಯಾಗಿದ್ದರೆ, ಅದಕ್ಕೆ ಸಾಕ್ಷಿ ಪುರಾವೆ ನೀಡಬಹುದಲ್ಲವೇ? ಸಾಕ್ಷಿ ಇಲ್ಲಾ ಅಂತಾದರೆ ನವರಂಧ್ರಗಳನ್ನೂ ಮುಚ್ಚಿಕೊಂಡು ಕ್ಷಮೆ ಕೇಳಿ ಅಳಿದುಳಿದ ಮರ್ಯಾದೆಯನ್ನು ಉಳುಸಿಕೊಳ್ಳಬಹುದಲ್ಲವೇ?

ರಾಜಣ್ಣನ ಮಗ ಶಿವಣ್ಣನ ಮೇಲೆ ಅಷ್ಟು ಅಕ್ಕರೆ ಇದ್ದರೆ, ನಾವು ಸೋದರರು ಅಂದಿದ್ದರು ಸಾಕಿತ್ತು ಕಮಲ್. ಅದನ್ನು ಬಿಟ್ಟು ತಮಿಳ್ ತಾಯಿ ಮಗ ಕನ್ನಡ... ಅದಕ್ಕಾಗಿ ಅವರು (ಶಿವಣ್ಣ) ಇಲ್ಲಿಗೆ ಆಗಮಿಸಿದ್ದಾರೆ... ಎಂದರೆ ಹೇಗೆ?! ಶಿವಣ್ಣ ಅಂತೂ ಅರಿವುಗೇಡಿ. ತಲೆ ಆಡಿಸಿ ನಕ್ಕು ನಲಿದು ಸಂತಸ ವ್ಯಕ್ತಪಡಿಸಿದ್ದಾರೆ! ಮುಂದೇನಾಗಬಹುದು ಎಂಬುದರ ಅರಿವು ಅವರಿಗಾಗಿದ್ದರೆ ಅಂದೇ ಅದೇ ವೇದಿಕೆಯಲ್ಲಿ ಈ ಸಮಸ್ಯೆಯನ್ನು ಸರಿಪಡಿಸುತ್ತಿದ್ದರು!



ಇಲ್ಲಿ ಬೆಂಕಿ ಹತ್ತಿಕೊಂಡು ಉರಿಯತೊಡಗಿದ ಮೇಲಾದರೂ ಶಿವಣ್ಣ ಜವಾಬ್ದಾರಿ ಮೆರೆಯುತ್ತಾರೆ ಎಂದರೆ... ಅದೂ ಇಲ್ಲ! ಅವರು ದೊಡ್ಡವರು, ಏನೋ ಹೇಳಿದರು. ಆ ಗದ್ದಲದಲ್ಲಿ ಅದು ನನಗೆ ಅರ್ಥವಾಗಲಿಲ್ಲ, ಏನೋ ಪ್ರೀತಿಯಿಂದ ಹೇಳಿರಬಹುದು, ಅದನ್ನ್ಯಾಕೆ ಇಷ್ಟು ದೊಡ್ಡದು ಮಾಡ್ತೀರಿ? ಎಂದು ಸಿಲ್ಲಿ ಸಿಲ್ಲಿಯಾಗಿ ಮಾತಾಡುತ್ತಿದ್ದಾರೆ!

ಕಮಲ್ ಹಾಸನ್ ಎಂದರೆ ಇವರಿಗೆ ಚಿಕ್ಕಪ್ಪನೇ ಇರಬಹುದು ಆದರೆ, ಕನ್ನಡಿಗರಿಗಲ್ಲ! ವಿಷಾದನೀಯ ಸಂಗತಿ ಏನೆಂದರೆ, ರಾಜ್ ಕುಟುಂಬಕ್ಕಾಗಿ ಇಡೀ ಕನ್ನಡ ನಾಡುಮಿಡಿಯುತ್ತಿತ್ತು. ಅದರೀಗ ಶಿವಣ್ಣನ ನಡೆ ಕಂಡು ಕೆರಳಿ ಕುಂತಿದೆ! ಕನ್ನಡ

☞ 5

## ರಾಜ್ ಕುಟುಂಬ ಹಣಿಯುವ ಯತ್ನ?!

**ಕ**ಮಲ ಹಾಸನ್ ವಿರುದ್ಧ ಕನ್ನಡ ಹೋರಾಟಗಾರರು ದಂಗೆ ಎದ್ದಿದ್ದಾರೆ ನಿಜ. ಮೇಲ್ನೋಟಕ್ಕೆ ಇದು ಕನ್ನಡಿಗರ ಚಳುವಳಿಯಾದರೂ... ಬದುಕಿದ್ದಾಗ ಡಾ.ರಾಜ್‌ರಂತಹ ದೈತ್ಯರನ್ನೇ ಸೈಡಿಗೆ ತಳ್ಳಲು ಯತ್ನಿಸಿದ್ದ ಪುರೋಹಿತಶಾಹಿ ಯುಕ್ತಿಗಳು ಈಗ ಕಮಲ್ ನೆಪದಲ್ಲಿ ರಾಜ್ ಕುಟುಂಬವನ್ನು ಹಣಿಯಲು ಸಂಚು ರೂಪಿಸಿರುವ ಅನುಮಾನವಿದೆ! ಈ ಹಿಂದೆ ಅಣ್ಣಾವ್ರ ಹಣಿಯಲು ಏನೆಲ್ಲಾ ಸರ್ಕಸ್ ಮಾಡಿ ವಿಫಲವಾಗಿದ್ದ ಕುಯುಕ್ತಿಗಳಿಗೆ ಅಣ್ಣಾವ್ರ ಅಪ್ರತಿಮ ಕಲೆ, ದೈತ್ಯ ಪ್ರತಿಭೆ ಮತ್ತವರ ಅಪಾರ ಜನಪ್ರಿಯತೆಯ ಎದುರು ಈ ಜಾತಿವಂತರ ದೇಹದಾರಗಳೆಲ್ಲ ಅವರದೇ ಸಂಡಾಸಿನಲ್ಲಿ ಬಿದ್ದು ಹೂತು ಹೋಗಿದ್ದವು!



ಈ ಯುಕ್ತಿಗಳು ಅಣ್ಣಾವ್ರ ನಿಧನದ ನಂತರ ಅವರ ಕುಟುಂಬದ ಮೇಲೆ ಆಗಾಗ ಕ್ಯಾತೆ ತೆಗೆಯುತ್ತಿದ್ದವಾದರೂ, ಅದ್ಯಾವುದೂ ಬರಕತ್ತಾಗಿರಲಿಲ್ಲ, ಆದರೀಗ ಇವುಗಳಿಗೆ ಕಮಲ್ ಹಾಸನ್ ಎಂಬ ಪ್ರಗತಿಪರ ಚಿಂತನೆಗಳ ತಮಿಳು ಹುಂಬ, ಕನ್ನಡದ ಕುರಿತು ಆಡಿದ ಒಂದೇ ಒಂದು ಮಾತು ಬ್ರಹ್ಮಾಸ್ತ್ರದಂತೆ ಸಿಕ್ಕಿಬಿಟ್ಟಿದೆ!

ನೈಜ ಕನ್ನಡ ಹೋರಾಟಗಾರರ ಜೊತೆಗೆ ಸೇರಿಕೊಂಡು ತಾವೂ ಕನ್ನಡ ಪ್ರೇಮಿಗಳು ಎಂಬಂತೆ ನಟಿಸುತ್ತಾ ಮೊದಲು ಕಮಲ್ ಮೇಲೆ ಮುಗಿಬಿದ್ದ ಇವುಗಳು, ಈಗ ನಿಧಾನವಾಗಿ ತಮ್ಮ ಕೂರಂಬುಗಳನ್ನು ಶಿವಣ್ಣನ ವಿರುದ್ಧ ತಿರುಗಿಸಿವೆ! ಈ ಅನಾಹುತಕಾರಿ ಜಾತಿಯುಕ್ತಿಗಳ ಬಗ್ಗೆ ನಿಜವಾದ ಕನ್ನಡ ಪ್ರೇಮಿಗಳು ಎಚ್ಚರ ವಹಿಸಬೇಕಾಗಿರುವುದು ಈ ಕ್ಷಣದ ಜರೂರತ್ತು!

ಶಿವಣ್ಣ ಒಬ್ಬ ಒಳ್ಳೆ ಕಲಾವಿದ ಅನ್ನೋದಕ್ಕಿಂತ ಒಳ್ಳೆ ಮನುಷ್ಯ, ಯಾವುದೇ ಮೋಸ ಆಗ್ಲಿ ಅವ್ರ ಕಾಲದ ಹೀರೋಗಳ ಜೊತೆ ಯಾವತ್ತೂ ಜಗಳ ಮಾಡಿಲ್ಲ, ತನ್ನ ಫ್ಯಾನ್ಸ್ ನಾ ಎತ್ತಿ ಕಟ್ಟೋ ಕೆಲಸ ಮಾಡಿಲ್ಲ, ಶಿವಣ್ಣನ ಕನ್ನಡಾಭಿಮಾನ ಎಲ್ಲರಿಗೂ ಗೊತ್ತು. ಇದಕ್ಕಿಂತ, ಕನ್ನಡ ಚಿತ್ರರಂಗಕ್ಕೆ ದೊಡ್ಮನೆ ಕೊಡುಗೆ ಎಷ್ಟಿದೆ ಅಂತ ಇಡೀ ಕರ್ನಾಟಕಕ್ಕೆ ಗೊತ್ತು! ಆದ್ರೆ ಶಿವಣ್ಣನಿಗೆ ಸಾರ್ವಜನಿಕ ಸಭೆಗಳಲ್ಲಿ ಹೇಗೆ ಮಾತಾಡಬೇಕು ಅಂತ ಈಗಲೂ ಗೊತ್ತಿಲ್ಲದಿರುವುದೇ ದುರಂತ! ಮತ್ತೇ ಕೆಲವು ಸಲ ಯಾವುದೋ ಪ್ರಶ್ನೆಗೆ ಇನ್ಯಾವುದೋ ಉತ್ತರ ಕೊಟ್ಟುಬಿಡ್ತಾರೆ! ಅಣ್ಣಾವ್ರಿಗೆ ಇದ್ದ ಬುದ್ಧಿ ಆಗಲಿ ಆ ಲೀಡರ್‌ಪ್ ಕ್ವಾಲಿಟಿ ಆಗಲಿ ಇವರಿಗೆ ಯಾವತ್ತೂ ಬರಲೇಯಿಲ್ಲ! ಮೊನ್ನೆ ಕಮಲಹಾಸನ್ ಮಾತಾಡಿದ್ದು ಎಂತ ನಾನ್‌ಸೆನ್ಸ್ ಅನ್ನೋದು ಶಿವಣ್ಣನಿಗೆ ಗೊತ್ತೇ ಆಗಿಲ್ಲ! ಈಗಲೂ ಬೇಕಿದ್ರೆ ಪರ್ಸನಲ್ ಆಗಿ ಶಿವಣ್ಣನ ಕೇಳಿದ್ರೆ ಅವರ ಹತ್ತಿರ ಈ ಕ್ಷಣಕ್ಕೂ ಆನ್ಸರ್ ಇರಲ್ಲ!

ಕಮಲ್ ಹಾಸನ್ ವಿಚಾರದಲ್ಲಿ ಮೃದು ಧೋರಣೆ ಹೊಂದಿರುವ ಶಿವಣ್ಣನ ಮೇಲೆ ಕೋಪ ಮಾಡ್ಕೊಂಡಿರೋವ್ರಲ್ಲಿ ಶೇ. 20ರಷ್ಟು ಮಂದಿ ನಿಜವಾಗ್ಲೂ ಕನ್ನಡದ ಮೇಲೆ ಕಾಳಜಿ ಇರೋರು! ಇನ್ನುಳಿದ ಶೇ.80 ರಷ್ಟು ಜನ ಸಮಯಕ್ಕೆ ಕಾಯ್ತಾ ಇದ್ದವರು ಅನ್ನೋದ್ರಲ್ಲಿ ಡೌಟ್ ಇಲ್ಲಾ! ಈಗಲೂ ಶಿವಣ್ಣನ ಕಡೆಯಿಂದ ಕಮಲ್ ಮಾತಾಡಿದ್ದು ತಪ್ಪು.. ಇದನ್ನ ನಾವೆಲ್ಲ ಸೇರಿ ಖಂಡಿಸೋಣ... ಅವರ ತಪ್ಪನ್ನು ತಿದ್ದಿ ಸರಿಪಡಿಸೋಣ... ಎಂಬೊಂದು ವಾಖ್ಯ ಬರಲಿ ಸಾಕು, ಎಲ್ಲರೂ ಗಪ್‌ಚುಪ್ ಆಗುತ್ತಾರೆ!

ಇದನ್ನ ಶಿವಣ್ಣನಿಗೆ ಅರ್ಥ ಮಾಡಿಸೋರು ಯಾರು? ಅಣ್ಣಾವ್ರಿಗೆ ವರದಪ್ಪ ಅನ್ನೋ ವ್ಯಕ್ತಿ ನೆರಳಾಗಿ ನಿಂತಿದ್ರು. ಶಿವಣ್ಣನಿಗೆ ಗೀತಕ್ಕ ಬಿಟ್ರೆ ಇನ್ನಾರಿದ್ದಾರೆ? ಆಯಮ್ಮ ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರ ಮಾಡಿಸಿ ಗಂಡನಿಗೆ ಒಳಿತು ಬಯಸುತ್ತಾರೆ, ಅಷ್ಟೇ! ಶಿವಣ್ಣ ಈಗಲೂ ಕಾಲ ಮಿಂಚಿಲ್ಲ, ಸ್ವಲ್ಪ ತಿಳುವಳಿಕೆ ಇರೋರನ್ನ ನಿಮ್ಮ ಜೊತೆ ಇರಿಸಿಕೊಂಡ್ರೆ ಮುಂದೆ ಈ ತರ ಪರಿಸ್ಥಿತಿ ಬರಲ್ಲ ಅನ್ನೋದು ನಮ್ಮ ಭಾವನೆ. ಸ್ವಲ್ಪ ಯೋಚನೆ ಮಾಡಿ, ಯೋಚನೆ ಮಾಡಿ ಮಾತಾಡಿ... ಎಂಬುದು ರಾಜ್‌ಕುಮಾರ್ ಮತ್ತವರ ಮಕ್ಕಳನ್ನು ಪ್ರೀತಿಸುವ, ಆರಾಧಿಸುವ ಅಭಿಮಾನಿ ದೇವರುಗಳ ಕೋರಿಕೆ!

# ಕನ್ನಡಿಗರು 'ಕನ್ನಡ' ಮಾತ್ರ ಮಾತಾಡಿ....

**ಕ**ನ್ನಡವೆಂದರೆ ಕುಣಿದಾಡುವುದೆನ್ನದೆ... ಕನ್ನಡಿಗರೆಲ್ಲರು ಒಗ್ಗಟ್ಟಾಗಿದ್ದಾರೆ. ಕನ್ನಡ ಹೋರಾಟಗಾರರೆಲ್ಲರೂ ಒಮ್ಮತದಿಂದ ಕನ್ನಡ ಭಾಷೆಯ ಗೌರವವನ್ನು ಹೆಚ್ಚಿಸಲು ಪಣ ತೊಟ್ಟು ಹೋರಾಡುತ್ತಿದ್ದಾರೆ. ಬಹಳ ಸಂತೋಷವಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಏನಾಗಿದೆ ಎಂದರೆ, ಉತ್ತರ ಭಾರತೀಯರು ಮೇಲ್ವಿಚಾರಕರಾಗಿರುವ ಬ್ಯಾಂಕುಗಳು, ರೈಲ್ವೇ ಇಲಾಖೆಗಳು, ಹೋಟೇಲುಗಳಲ್ಲಿ ಕನ್ನಡ ವಿರೋಧಿ ಧೋರಣೆಗಳು ಹೆಚ್ಚುತ್ತಿವೆ! ಹಿಂದಿ ಗೊತ್ತಿಲ್ಲದ ಕನ್ನಡಿಗರು ಸ್ವಂತ ನೆಲದಲ್ಲಿಯೇ ಅನ್ಯರಂತೆ ವ್ಯಹಹರಿಸುವ ಕೆಟ್ಟ ಪರಿಸ್ಥಿತಿ ಉದ್ಭವವಾಗಿದೆ!

ನಮ್ಮವರು ಕಲಿಯಬೇಕಾದ ಮೊದಲ ಪಾಠ ಏನೆಂದರೆ, ಯಾರಾದರೂ ಪರಭಾಷೆಯಲ್ಲಿ ಏನಾದರೂ ಕೇಳಿದಾಗ, ನಾವು ಅವರ ಭಾಷೆ ಬಾರದಿದ್ದರೂ ಬಹಳ ಕಷ್ಟಪಟ್ಟು ಹೇಳಿ ಕೊಡುತ್ತೇವಲ್ಲ, ಅದನ್ನು ಬಿಡಬೇಕು! ಕನ್ನಡ ಮಾತಾಡಯ್ಯ ಎಂದು ಗತ್ತಾಗಿ ಗದರಬೇಕು. ಎಲ್ಲಿಯವರೆಗೆ ನಾವು ಈ ಕೆಲಸ ಮಾಡುವುದಿಲ್ಲವೋ, ಅಲ್ಲಿಯವರೆಗೂ ಕನ್ನಡದ ಕೊಲೆ ತಪ್ಪಲ್ಲ!

ಉದರ್ ಜಾವ್ ಇದರ್ ಜಾವ್, ಅಂಗೆ ಪೋ ಇಂಗೆ ಪೋ, ಅಕ್ಕಡ ಇಕ್ಕಡ.... ಎಂದು ನಾವು ಹೇಳಿಕೊಟ್ಟು ಇಲ್ಲಿಯವರೆಗೆ ಕೆಟ್ಟಿದ್ದೆ ಸಾಕು. ಬಂದ್ ಮಾಡಿ.... ಪರಭಾಷಿಕರು ಇಲ್ಲಿ ಬದುಕಬೇಕು ಅಂದ್ರೆ ಕನ್ನಡ ಕಲಿಯೋದು ಅನಿವಾರ್ಯ ಅನ್ನೋ ಪರಿಸ್ಥಿತಿ ಉದ್ಭವಿಸಬೇಕು. ಇದರಿಂದ ಅವರೂ ಕನ್ನಡ ಕಲಿತಂತೆ ಆಗುತ್ತದೆ. ಕನ್ನಡ ಭಾಷೆಯ ಬಳಕೆ, ಘನತೆಯೂ ಹೆಚ್ಚಾಗುತ್ತದೆ. ☯

4 ☞

ಹೋರಾಟಗಾರರು, ಹಿರಿಯ ನಟರು ಸಿಡಿದಿದ್ದು 'ದ್ರೋಹಿ' ಎನ್ನುತ್ತಿದ್ದಾರೆ! ಕಮಲ್ ಹಾಸನ್ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿರುವ ಕನ್ನಡಪರ ಹೋರಾಟಗಾರರು, ಚಲನಚಿತ್ರ ವಾಣಿಜ್ಯ ಮಂಡಳಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ, ಕನ್ನಡ ಭಾಷೆಗೆ ಅವಮಾನ ಮಾಡಿರುವ ಕಮಲ್ ಕ್ಷಮೆ ಕೇಳದೇ ಇದ್ದರೆ ಜೂ.5ರಂದು ಬಿಡುಗಡೆ ಸಜ್ಜಾಗಿರುವ ಅವರ 'ಥಗ್ ಲೈಫ್' ಸಿನಿಮಾವನ್ನು ರಾಜ್ಯದಲ್ಲಿ ನಿಷೇಧಿಸಬೇಕು ಎಂದು ವಾಣಿಜ್ಯ ಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿದ್ದಾರೆ. ಹೋರಾಟಗಾರರ ಮನವಿಯನ್ನು ಪುರಸ್ಕರಿಸಿರುವ ಮಂಡಳಿ, ಕರ್ನಾಟಕದಲ್ಲಿ ಕಮಲ್ ನಟನೆಯ 'ಥಗ್ ಲೈಫ್' ಚಿತ್ರ ಪ್ರದರ್ಶನವಾಗದಂತೆ ತಡೆಯಬೇಕು ಎಂದು ನಿರ್ಧಾರ ಕೈಗೊಂಡಿದ್ದೇವೆ. ಯಾರೂ









ಕೂಡ ಥಗ್ ಲೈಫ್ ರಿಲೀಸ್‌ಗೆ ಯಾವುದೇ ಸಹಕಾರವನ್ನು ಕೊಡಬಾರದು ಎಂದು ವಿತರಕರಿಗೆ ಹಾಗೂ ಪ್ರದರ್ಶಕರಿಗೆ ಖಡಕ್ ಎಚ್ಚರಿಕೆ ನೀಡಿದೆ!! ಆದಾಗ್ಯೂ, ಹಿರಿಯ ನಟ ಕಮಲ್ ಹಾಸನ್ ಮೇಲಿನ ಗೌರವಕ್ಕೋ ಏನೋ ಮಂಡಳಿ ಅಧ್ಯಕ್ಷ ನರಸಿಂಹಲು ಅವರು, ಕಮಲ್ ಕ್ಷಮೆ ಕೇಳಿದರೆ ಒಂದು ಅವಕಾಶ ಕೊಡೋಣ... ಎಂಬ ಮಾತನ್ನೂ ಆಡಿದ್ದಾರೆ!



ಮಂಡಳಿ ಅಧ್ಯಕ್ಷ ನರಸಿಂಹಲು

ಇದರ ನಡುವೆ, ಕಮಲ್ ಹಾಸನ್ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ 'ಹಂಸಲೇಖ' ಅವರು ನೀವು ತಮಿಳ್ ಹಾಸನ್ ಅಂತ ಹೆಸರನ್ನು ಬದಲಾಯಿಸಿಕೊಳ್ಳಿ... ನಮ್ಮ ಕಡೆ ಒಂದು ಗಾದೆ ಇದೆ, ಮಾತು ಮನೆ ಕೆಡಿಸ್ತು, ತೂತು ಒಲೆ ಕೆಡಿಸ್ತು ಅಂತ.... ನೀವು ಉತ್ತಮ ಮಾತುಗಳನ್ನಾಡಬೇಕು, ಯೋಚಿಸಿ ಮಾತನಾಡಬೇಕು. ತಮಿಳಿಗೆ ಲಿಪಿ ಕೊಟ್ಟಿದ್ದು ನಮ್ಮ ಕನ್ನಡ ಭಾಷೆ ಅಂತ ವಿಧ್ವಾಂಸರು ಹೇಳುತ್ತಾರೆ. ಅದರ ಬಗ್ಗೆ ಸ್ವಲ್ಪ ವಿಚಾರಿಸಿ ನೋಡಿ ಎಂದು ಕಮಲ್‌ಗೆ ಕಿವಿಮಾತು ಹೇಳಿದ್ದಾರೆ!

ಹಂಸ್ ಅಷ್ಟೇ ಅಲ್ಲದೇ, ಸಿಎಂ ಸಿದ್ದರಾಮಯ್ಯ ಸೇರಿದಂತೆ ವಿವಿಧ ಪಕ್ಷಗಳ ರಾಜಕೀಯ ಮುಖಂಡರು ಕೂಡ ಕಮಲ್ ಹಾಸನ್ ಹೇಳಿಕೆಯನ್ನು ಖಂಡಿಸಿದ್ದಾರೆ. ಕಮಲ್ ಹಾಸನ್ ದೊಡ್ಡ ಪರಿಣಿತರಲ್ಲ, ಭಾಷೆ ಬಗ್ಗೆ ಮಾತಾಡುವಾಗ ಹಿಡಿತವಿರಬೇಕು... ಎಂದು ಮಾತಿನ ಬಾಣದಲ್ಲಿ ತಿವಿದು, ಕಮಲ್ ತಮ್ಮ ವ್ಯಕ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ, ಮೊದಲು ಕನ್ನಡಿಗರ ಕ್ಷಮೆ ಯಾಚಿಸಬೇಕು... ಎಂದು ಖಂಡ ತುಂಡವಾಗಿ ನುಡಿದಿದ್ದಾರೆ! ಇವರೆಲ್ಲರ ಹೇಳಿಕೆಯಲ್ಲಿ ಕನ್ನಡ ತಾಯಿನುಡಿಯ ತುಡಿತವಿದೆ. ಕಮಲ್‌ಗೆ ಇದು ಅರ್ಥವಾಗುತ್ತಿಲ್ಲ, ಸಿನಿಮಾದಲ್ಲಿ ಡೈಲಾಗ್ ಹೊಡೆಯುವಂತೆ ಏನೇನೋ ವದರುತ್ತಿದ್ದಾರೆ.

ಅವರಿಗೆ ಅಂತಲ್ಲ... ನಮ್ಮ ತಾಯಿ ಭಾಷೆಯ ಬಗ್ಗೆ ಹಗುರವಾಗಿ ಮಾತನಾಡುವ ಎಲ್ಲರಿಗೂ ಬುದ್ಧಿ ಕಲಿಸಲು ಇದು ಸಕಾಲ! ಕಮಲ್ ಕೊಡುವ ಚಾಟಿ ಏಟು ಇತರರಿಗೂ ಎಚ್ಚರಿಕೆಯ ಗಂಟೆಯಾಗಬೇಕು. ಕನ್ನಡ ಹೋರಾಟಗಾರರು ತಮ್ಮ ಬಿಗಿ ಪಟ್ಟನ್ನು ಸಡಲಿಸದೆ... ಇದೇ ಪಟ್ಟಿನ ಮೇಲೆ ನಿಂತರೆ ಸಾಕು! ಕಮಲ್ ಅಲ್ಲ, ಅವರಪ್ಪನೂ ಕ್ಷಮೆ ಕೇಳುತ್ತಾನೆ! ಮೊಂಡ ಕಮಲ ಹಾಸನ್ ಒಂದು ವೇಳೆ ಕ್ಷಮೆ ಯಾಚಿಸದಿದ್ದರೆ, ಅವರನ್ನು ಮತ್ತು ಅವರ ಸಿನಿಮಾಗಳನ್ನು ಬಿಟ್ಹಾಕೋಣ...ಏನಂತೀರಿ....

**ದಿ ಲಾಸ್ಟ್ ಪಂಚ್**

ನಾಳೆ ಜೂನ್ 5ನೇ ತಾರೀಖು ಕಮಲ್ ನಿರ್ಮಾಣ ಮತ್ತು ಅಭಿನಯದ ಥಗ್ ಲೈಫ್ ಬಿಡುಗಡೆ ಆಗುತ್ತಿದೆ.

☞ 12




# ತಮಿಳ್ ಹಾಸನ್‌ಗೆ ಹೈ ಕೋರ್ಟ್ ಛೀಮಾರಿ!

**ಯಾ**ವುದೇ ಬಾಷೆಯ ಹುಟ್ಟಿನ ಗುಟ್ಟನ್ನು ಭಾವನಾತ್ಮಕವಾಗಿ ಅಲ್ಲ, ವೈಜ್ಞಾನಿಕವಾಗಿ ಅರ್ಥಮಾಡಿಕೊಳ್ಳಬೇಕು. ಇಂದಿಗೂ, ನಮ್ಮಲ್ಲಿ ಹೆಚ್ಚಿನವರು ಕನ್ನಡವು ಸಂಸ್ಕೃತ ದಿಂದ ಹುಟ್ಟಿಕೊಂಡಿದೆ ಎಂಬ ತಪ್ಪು ಕಲ್ಪನೆಯಲ್ಲಿದ್ದಾರೆ. ವಾಸ್ತವವಾಗಿ, ಈ ಎರಡೂ ನುಡಿಗಳು ಪ್ರಪಂಚದ ವಿಭಿನ್ನ ಮತ್ತು ವೈವಿಧ್ಯಮಯ ಭಾಷಾ ವರ್ಗೀಕರಣದಲ್ಲಿ ಸೇರಿವೆ.

ಪ್ರಪಂಚದ ದೊಡ್ಡ ಭಾಷಾ ವರ್ಗೀಕರಣ, ಇಂಡೋ -ಯೂರೋಪಿಯನ್. ಇದರಡಿಯಲ್ಲಿ ಇಂಡೋ-ಇರಾನಿಯನ್ ನುಡಿಗಳು ಬರ್ತವೆ. ಇಂಡೋ ಇರಾನಿಯನ್ ಕ್ಲಾಸಿಫಿಕೇಶನ್ ಅಡಿಯಲಿ ಬರೋದೆ ಇಂಡೋ-ಆರ್ಯನ್ ಭಾಷೆಗಳು. ಸಂಸ್ಕೃತವು ಇಂಡೋ ಆರ್ಯನ್ ಭಾಷಾ ವರ್ಗೀಕರಣಕ್ಕೆ ಸೇರಿದ್ದು, ಇದರ ಅಡಿಯಲ್ಲಿ ಸಂಸ್ಕೃತ ನುಡಿ, ಹೆಚ್ಚಿನ ಉತ್ತರ ಭಾರತೀಯ ಬಾಷೆಗಳು ಇವೆ. ಉಳಿದಂತೆ ಇಂಡೋ-ಯೂರೋಪಿಯನ್ ವಿಭಾಗದಲ್ಲಿ ಬಹುತೇಕ ಯುರೋಪಿಯನ್ ಮತ್ತು ಅರೇಬಿಕ್ ಭಾಷೆಗಳು ಸೇರಿವೆ. ದಕ್ಷಿಣ ಬಾರತದ ನುಡಿಗಳು ದ್ರಾವಿಡಿಯನ್ ಬಾಷಾ ವರ್ಗೀಕರಣಕ್ಕೆ ಸೇರುತ್ತವೆ. ಇದಕ್ಕೂ ಇಂಡೊ ಆರ್ಯನ್ ನುಡಿಗಳಿಗೂ ಸೈಂಟಿಫಿಕಲ್ಲಿ ಸಂಬಂಧವಿಲ್ಲ.





ದಕ್ಷಿಣ ಭಾರತೀಯ (ದ್ರಾವಿಡಿಯನ್) ನುಡಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಇವು ದ್ರಾವಿಡ ಭಾಷೆಗಳಿಂದ ಹುಟ್ಟಿಕೊಂಡಿವೆ. ಪ್ರೊಟೋ ದ್ರಾವಿಡವು ಎಲ್ಲಾ ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಆರಂಭಿಕ ರೂಪವಾಗಿದೆ. ಹರಪ್ಪ ಮತ್ತು ಮೊಹೆಂಜೊದಾರೋ (ಸಿಂಧೂ ಕಣಿವೆ) ನಾಗರಿಕತೆಯ ಸ್ಥಳಗಳ ಬಳಿ, ಕನ್ನಡವನ್ನು ಹೋಲುವ ಭಾಷೆಯನ್ನು ಮಾತನಾಡುತ್ತಾರೆ! ದಯವಿಟ್ಟು ಗಮನಿಸಿ, ಆ ಪ್ರದೇಶವು ಈಗ ಎಲ್ಲಾ ಕಡೆಗಳಲ್ಲಿ ಇಂಡೋ ಆರ್ಯನ್ ನುಡಿಗಳಿಂದ ಸುತ್ತುವರೆದಿದೆ. ಇದರಲ್ಲಿ ಪರ್ಷಿಯನ್, ಅರೇಬಿಕ್ ಮತ್ತು ಉರ್ದು ಕೂಡ ಸೇರಿವೆ.

ಕಮಲಹಾಸನ್ ಒಬ್ಬ ಸೂಕ್ಷ್ಮ ವ್ಯಕ್ತಿಯಾಗಿರುವುದರಿಂದ ಕನ್ನಡ ನುಡಿ ಹುಟ್ಟಿನ ಗುರುತುಗಳ ಬಗ್ಗೆ ಅರಿತು ಮಾತನಾಡಬೇಕಿತ್ತು.

ಈ ರೀತಿ ಬೆಂಕಿ ಹಚ್ಚೋ ಮಾತುಗಳು ಉತ್ತರ ಭಾರತೀಯರಿಗೆ ನಮ್ಮನಮ್ಮಲ್ಲಿ ತಂದುಹಾಕಲು ಒಳ್ಳೆ ಚಾನ್ಸ್ ಕೊಡುತ್ತೆ. ದಯವಿಟ್ಟು ನೆನಪಿಡಿ, ನಾಡು, ನುಡಿ, ನೀರು, ಗಡಿಗಾಗಿ ದಕ್ಷಿಣ ಭಾರತೀಯರು ಮಾತ್ರ ಹೋರಾಡುತ್ತಾರೆ. ಇದನ್ನು ಉತ್ತರ ಭಾರತದ ಕುತಂತ್ರಿ ಆಡಳಿತಗಾರರ ಹೊರತುಪಡಿಸಿ ಬೇರಾರೂ ಹಚ್ಚಲು ಸಾಧ್ಯವಾ?

ಪ್ರೊಟೋ ದ್ರಾವಿಡ ನುಡಿಯು ದ್ರಾವಿಡ ಭಾಷೆಗಳ ಆರಂಭಿಕ ರೂಪವಾಗಿದೆ ಮತ್ತು ಸಿಂಧೂ ಕಣಿವೆ ನಾಗರಿಕತೆಯ ಸ್ಥಳಗಳಲ್ಲಿ ಮಾತನಾಡುವ ಕನ್ನಡಕ್ಕೆ ಹೋಲುವ ಭಾಷೆ/ಉಪ ಭಾಷೆಯೊಂದಿಗೆ ಇದನ್ನು ತಾಳೆಹಾಕಿದರೆ, ಕನ್ನಡವು ತಮಿಳಿಗಿಂತ ಹಳೆಯ ನುಡಿ ಎಂದು ತೀರ್ಮಾನಿಸಬಹುದು. ಕನ್ನಡವು ತಮಿಳಿಗಿಂತ ಶ್ರೇಷ್ಠವಾಗಿದೆ ಎಂದೋ - ಇಲ್ಲವೇ ತಮಿಳು ಕನ್ನಡದಿಂದ ಹುಟ್ಟಿಕೊಂಡಿದೆ ಎಂದೋ ನಾವಿಲ್ಲಿ ಸಾಬೀತುಪಡಿಸಲು ಯತ್ನಿಸುತ್ತಿಲ್ಲ. ಎರಡು ದ್ರಾವಿಡ ನುಡಿಗಳು ಹೆಚ್ಚುಕಡಿಮೆ ಒಂದೇ ಕಾಲಗಟ್ಟದಲ್ಲಿ ಹುಟ್ಟಿದ ಬೇರೆ ಬೇರೆ ಭಾಷೆಗಳು.

ಹೃದಯಹೀನ ಉತ್ತರ ಭಾರತೀಯರು ದಕ್ಷಿಣ ಭಾರತೀಯರನ್ನು ನಿರ್ದಯವಾಗಿ ದಮನಿಸುವ ಕಷ್ಟದ ಸಮಯದಲ್ಲಿ, ನಾವುಗಳು ಶ್ರೇಷ್ಠತೆಗಾಗಿ ಹೋರಾಡುವ ಬದಲು, ಒಗ್ಗಟ್ಟಿನ ಹೋರಾಟವನ್ನು ಹಿಂದಿ ಹೇರಿಕೆ ವಿರುದ್ಧ ನೀಡಬೇಕಾಗಿತ್ತು. ಗುಲಾಮನಾಗಲೂ ಗುಲಾಮರು ಪರಸ್ಪರ ಕಚ್ಚಾಡುವಂತಿದೆ, ಕನ್ನಡ ತಮಿಳರ ಹೋರಾಟ.

ಅದೇನೇ ಇರಲಿ, ಕಮಲ್ ಹಾಸನ್ ಕ್ಷಮೆಯಾಚಿಸಬೇಕು. ನಿಮ್ಮಂತಹ ಅರಿವಿರುವವರೇ ದಕ್ಷಿಣ ಭಾರತೀಯರ ಏಕತೆಯನ್ನು ಮುರಿಯುತ್ತಿದ್ದರೆ ನಮಗೆ ತಡೆದುಕೊಳ್ಳಲು ಆಗುತ್ತಿಲ್ಲ, ಅದಿರಲಿ, ನಿಮಗೆ ಕಾಮನ್‌ಸೆನ್ಸ್ ಇದ್ದಿದ್ರೆ, ನೀವು ಆಡಿದ ಮಾತಿಗೆ ಕನ್ನಡಿಗರಿಂದ ಆಕ್ಷೇಪ ವ್ಯಕ್ತವಾದ ಕೂಡಲೇ ಕ್ಷಮೆ ಕೇಳಿರುತ್ತಿದ್ರಿ. ಈವಾಗ ಇಷ್ಟೊಂದು ಪ್ರೀತಿ ಪ್ರೇಮದ ಉದ್ದುದ್ದ ಡೈಲಾಗ್ ಬಿಡುತ್ತಿದ್ದೀರಲ್ಲ, ಇದನ್ನ ಆವಾಗಲೇ ಬಿಟ್ಟು ಪರಿಸ್ಥಿತಿ ತಿಳಿಗಿಳಿಸುತ್ತಿದ್ರಿ. ಕಾನೂನು ಹೋರಾಟ ಅಂದ್ಕೊಂಡು ಹೈಕೋರ್ಟ್‌ಗೆ ಹೋದ್ರಿ... ಏನಾಯ್ತು? ಮಾನ್ಯ ನ್ಯಾಯಾಲಯ ನಿಮಗೆ ಸರಿಯಾಗಿ ಛೀಮಾರಿ ಹಾಕಿತು! ☯

## ಸೈಟ್ ಮಾರಾಟಕ್ಕೆ ಕಿರಿಕ್!

# ಡಂಬಲ್‌ನಿಂದ ಪತ್ನಿಯ ತಲೆ ಜಜ್ಜಿದ ಗಂಡ ಪಾಪ ಪ್ರಜ್ಞೆಯಿಂದ ತಾನೂ ಆತ್ಮಹತ್ಯೆಗೆ ಶರಣಾದ!



**ಸೈಟ್ ಮಾರುವ ವಿಚಾರಕ್ಕೆ ಶುರುವಾದ ದಂಪತಿ ಜಗಳ ಬಳಿಕ ಭೀಕರ ಕೊಲೆ ಹಾಗೂ ನೇಣಿನಲ್ಲಿ ಅಂತ್ಯವಾಗಿರುವ ದಾರುಣ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನ ವಿಜಯಪುರ ಪಟ್ಟಣದಲ್ಲಿ ನಡೆದಿದೆ! ಅನ್ಯಾಯವಾಗಿ ಪತ್ನಿಯನ್ನು ಕೊಂದ ಗಂಡ ನಂತರ ಪತ್ನಿಯ ಕೊಂದ ಪಾಪಪ್ರಜ್ಞೆಯಿಂದ ನರಳಿ ಡೆತ್ ನೋಟ್ ಬರೆದಿಟ್ಟು ತಾನೂ ನೇಣು ಜೀರಿಕೊಂಡು ಸುಸೈಡ್ ಮಾಡಿಕೊಂಡಿದ್ದಾನೆ!**



ಕುಟುಂಬ ಕಳೆದ ಇಪ್ಪತ್ತು ವರ್ಷಗಳ ಹಿಂದೆ ಹಾಸನದಿಂದ ಬೆಂಗಳೂರಿನ ಹೊರವಲಯದಲ್ಲಿರುವ ದೇವನಹಳ್ಳಿ ತಾಲೂಕಿನ ವಿಜಯಪುರಕ್ಕೆ ವಲಸೆ ಬಂದಿದ್ದು, ಒಂದು ವೆಲ್ಡಿಂಗ್ ಶಾಪ್ ಹಾಗೂ ಒಂದು ದಿನಸಿ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತ ನೆಮ್ಮದಿಯಾಗಿತ್ತು. ಬ್ಯುಸಿನೆಸ್ ಚೆನ್ನಾಗಿಯೇ ನಡೆದು, ಗಂಡ ಹೆಂಡತಿ ಇಬ್ಬರೂ ದುಡಿದು ಸ್ವಂತ ಮನೆ, ಕಾರ್, ವಡವೆ, ಸೈಟ್ ಎಲ್ಲಾ ಮಾಡಿಕೊಂಡಿದ್ದರು. ಆದರೆ ಈ ನಡುವೆ ಸೈಟ್ ವೊಂದನ್ನು ಮಾರುವ ವಿಚಾರಕ್ಕೆ ಗಂಡ-ಹೆಂಡತಿ ನಡುವೆ ಕಲಹ ಶುರುವಾಗಿದೆ. ಸಣ್ಣ ವಿಚಾರಕ್ಕೆ ಶುರುವಾದ ಜಗಳ ಪತ್ನಿಯ ಮೊಂಡು ವಾದದಿಂದ ಹಾಗೂ ಅವಿವೇಕಿ ಗಂಡನ ಮುಂಗೋಪದಿಂದ ದುರಂತ ಅಂತ್ಯ ಕಾಣೋ ಮೂಲಕ ದಿ ಎಂಡ್ ಆಗಿದೆ!

ಹಾಸನ ಮೂಲದ ಬಸವಾಚಾರಿ ಮತ್ತು ಸುಮಾ ಈ ದುರಂತ ಘಟನೆಯ ಹೀರೋ ಹೀರೋಯಿನ್! ಈ ದಂಪತಿಗೆ ಈಗ್ಗೆ ಹದಿನಾರು ವರ್ಷಗಳ ಹಿಂದೆ ಮದುವೆಯಾಗಿತ್ತು. ಎರಡು ಮುದ್ದಾದ ಮಕ್ಕಳಿದ್ದವು. ಮಕ್ಕಳನ್ನು ಶಾಲೆಗೆ ಸೇರಿಸಿ ತಾವು ವ್ಯಾಪಾರ ಮಾಡಿಕೊಂಡು ಆರಾಮವಾಗಿದ್ದರು. ಎಲ್ಲವೂ ಚೆನ್ನಾಗೆ ನಡೆದುಕೊಂಡು ಬರುತ್ತಿತ್ತು. ಹೀಗಿರುವಾಗ, ಬಸವಾಚಾರಿಗೆ ಏನೋ ಸಮಸ್ಯೆಯಾಗಿ, ಒಂದು ಸೈಟ್ ಅನ್ನು ಮಾರಲು ನಿರ್ಧರಿಸಿದ್ದ. ಇದಕ್ಕೆ ಪತ್ನಿ ಸುಮಾ ಒಪ್ಪಿರಲಿಲ್ಲ.



ಎಸ್ಪಿ ಸಿ.ಕೆ. ಬಾಬಾ

ದಿನಾಂಕ 02/06/2025 ರಂದು ಬೆಳಿಗ್ಗೆ ಮಕ್ಕಳನ್ನ ಶಾಲೆಗೆ ಕಳಿಸಿದ್ದಾರೆ. ನಂತರ ಸೈಟ್ ಮಾರುವ ವಿಚಾರಕ್ಕೆ ಗಂಡ-ಹೆಂಡತಿ ನಡುವೆ ಜಗಳ ಶುರುವಾಗಿದೆ. ಜಗಳ ನೋಡ ನೋಡುತ್ತಿದ್ದಂತೆ ವಿಕೋಪಕ್ಕೆ ತೆರಳಿ ಪರಸ್ಪರ ಹೊಡೆದಾಡಿಕೊಳ್ಳುವ ಹಂತಕ್ಕೆ ಮುಟ್ಟಿದೆ! ಈ ವೇಳೆ ಗಂಡ ಬಸವಾಚಾರಿ ಕೋಪ ನಿಗ್ರಹಿಸಲಾರದೇ ಮನೆಯಲ್ಲಿದ್ದ ಜಿಮ್ ಮಾಡೋ ಡಂಬಲ್‌ನಿಂದ ಪತ್ನಿಯ ತಲೆಗೆ ಹೊಡೆದಿದ್ದು, ಆಕೆ ಸ್ಥಳದಲ್ಲೇ ಕುಸಿದು ಬಿದ್ದು ತೀವ್ರ ರಕ್ತಸ್ರಾವವಾಗಿ ಸಾವನ್ನಪಿದ್ದಾಳೆ.



ಅ॥ ಎಸ್ಪಿ ವೆಂಕಟೇಶ್‌ಪ್ರಸನ್ನ

ಯಾವಾಗ ಪತ್ನಿ ಸಾವನ್ನಪ್ಪುತ್ತಿದಳೋ, ಅವನಿಗೆ ನಡುಕ ಶುರುವಾಗಿದೆ. ಅಯ್ಯಯ್ಯೋ... ಕೋಪದಲ್ಲಿ ಕೈಹಿಡಿದ ಪತ್ನಿಯನ್ನು ಕೊಂದು ಬಿಟ್ಟೆನಲ್ಲಾ... ಎಂಬ ಪಾಪಪ್ರಜ್ಞೆ ಕಾಡಿದೆ. ಶಾಲೆಗೆ ಹೋಗಿರುವ ಮಕ್ಕಳು ಮನೆಗೆ ಬಂದು ಅಮ್ಮನಿಗೇನಾಯ್ತು, ಅಮ್ಮ ಎಲ್ಲಿ ಅಂದ್ರೆ ಏನು ಹೇಳಲಿ... ಹೀಗೆ, ನೂರಾರು ಪ್ರಶ್ನೆಗಳು ಆತನ ತಲೆ ಹೊಕ್ಕಿ ಭೂತ ನರ್ತನಗೈದಿವೆ. ಪಾಪಿ ಗಂಡ ಬಸವಾಚಾರಿ ಅದೇ ಆತಂಕದಲ್ಲಿ ತಾನು ಸಹ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ! ಸಾಯುವ ಮುನ್ನ ನಡೆದ ದುರಂತದ ಬಗ್ಗೆ ವಿವರವಾಗಿ ಬರೆದಿಟ್ಟೇ ಸತ್ತಿದ್ದಾನೆ!

ಇನ್ನು, ಈ ದುರಂತ ಘಟನೆ ಬೆಳಕಿಗೆ ಬಂದದ್ದೇಗೆಂದರೆ, ಶಾಲೆಗೆ ಹೋಗಿದ್ದ ಮಕ್ಕಳು ಮನೆಗೆ ಬಂದು ಬಾಗಿಲು ತೆಗೆಯುತ್ತಿದ್ದಂತೆ ತಾಯಿ ಬೆಡ್ ಮೇಲೆ ರಕ್ತದ ಮಡುವಿನಲ್ಲಿ

ಬಿದ್ದಿದ್ದ ಭೀಕರ ದೃಶ್ಯ! ತಂದೆ ನೇಣಿನ ಕುಣಿಕೆಯಲ್ಲಿ ನೇತಾಡುತ್ತಿರುವ ದೃಶ್ಯ!! ನೋಡಿ ಕಿರುಚಾಡಿರುವ ಮಕ್ಕಳು ಕೂಡಲೇ ತಮ್ಮ ದೊಡ್ಡಪ್ಪನಿಗೆ ಕರೆ ಮಾಡಿ ವಿಚಾರ ತಿಳಿಸಿದ್ದವು.

ವಿಚಾರ ತಿಳಿಯುತ್ತಿದ್ದಂತೆ ದೊಡ್ಡಪ್ಪ, ಇತರೆ ಸಂಬಂಧಿಕರು ವಿಜಯಪುರಕ್ಕೆ ಧಾವಿಸಿ ಬಂದಿದ್ದಾರೆ. ಅಷ್ಟರಲ್ಲಿ ಮಾಹಿತಿ ತಿಳಿದು ಪೊಲೀಸರು ಸಹ ಸ್ಥಳಕ್ಕೆ ದೌಡಾಯಿಸಿದ್ದು, ಆ ಮನೆಯಲ್ಲಿ ಪರಿಶೀಲನೆ ನಡೆಸಿದಾಗ ಡೆತ್ ನೋಟ್ ಸಿಕ್ಕಿದೆ. ಅದರಲ್ಲಿ ಸೈಟ್ ಮಾರಿದ ವಿಚಾರ, ಅದರಿಂದ 26 ಲಕ್ಷ ರೂ ಹಣ ಬರಲಿದ್ದು, ಆ ಹಣವನ್ನ ತಮ್ಮ ಮಕ್ಕಳ ಹೆಸರಿನಲ್ಲಿ ಅಕೌಂಟ್‌ಗೆ ಹಾಕಿ ಎಂತಲೂ, ನಮ್ಮ ಸಾವಿಗೆ ನಾವೇ ಹೊಣೆ ಅಂತಲೂ ಬರೆದಿದ್ದಾರೆ ಬಸವಾಚಾರಿ! ಆಚಾರಿ ಕುಟುಂಬ ಮೂಲದಿಂದ ತಿಳಿದು ಬಂದ ವಿಚಾರವೇನೆಂದರೆ...

ಬಸವಾಚಾರಿ ಕುಟುಂಬ ಇನ್ನೆರಡು ತಿಂಗಳಲ್ಲಿ ಹಾಸನಕ್ಕೆ ಕುಟುಂಬ ಶಿಫ್ಟ್ ಆಗುವ ಪ್ಲ್ಯಾನ್ ಮಾಡಿದ್ದರಂತೆ. ಆದರೆ ಅಷ್ಟರಲ್ಲೇ ಈ ರೀತಿಯಾಗಿ ಹೋಗಿದೆ ಎಂದು ಹೇಳುತ್ತಾ ಸಂಬಂಧಿಕರು ಕಂಬನಿ ಮಿಡಿದಿದ್ದಾರೆ. ಇರುವುದಕ್ಕೆ ಒಂದು ಮನೆ ಇತ್ತು. ಸಂಪಾದನೆಗೆ ಒಂದು ಅಂಗಡಿ ಇತ್ತು. ಖುಷಿ ಪಡುವುದಕ್ಕೆ ಎರಡು ಮುದ್ದಾದ ಮಕ್ಕಳಿದ್ದವು. ಇನ್ನೇನು ಬೇಕು?! ಹೀಗೆ, ಎಲ್ಲವೂ ಚೆನ್ನಾಗಿದ್ದರೂ ಸಣ್ಣ ಹಣಕಾಸಿನ ವಿಚಾರ ದಂಪತಿಗಳ ಜೀವವನ್ನು ಬಲಿ ತೆಗೆದುಕೊಂಡಿದ್ದು, ಅನ್ಯಾಯವಾಗಿ ಎರಡು ಮಕ್ಕಳು ಅನಾಥವಾದದ್ದು ದುರ್ವಿಧಿ ಅಲ್ಲದೆ ಮತ್ತೇನು?!


☯

# ಮಗಳು ಮನೆ ಬಿಟ್ಟಳು... ಹೆತ್ತವರು ಹೆಣವಾದರು..!

3 ☞

ಮೂಲಕ ಯಾರಿಗೆಲ್ಲ ಕೊಡಬೇಕಾಗಿತ್ತೋ ಅವರಿಗೆಲ್ಲ ಕೊಟ್ಟಿದ್ದಾರೆ. ಇದಾದ ಬಳಿಕ ತಾವೇಕೆ ಸಾಯುತ್ತಿದ್ದೇವೆ? ಎಂಬುದರ ಕುರಿತಂತೆ ಮಗಳು ಹರ್ಷಿತಾಳ ಕೈನಲ್ಲಿ ನಾಲ್ಕು ಪುಟಗಳಷ್ಟು ಡೆತ್ ನೋಟ್ ಬರೆಸಿದ್ದಾರೆ. ಅದರಲ್ಲಿ ಹತ್ತಾರು ವಿಚಾರಗಳನ್ನು ಪ್ರಸ್ತಾಪಿಸಿದ್ದು, ಮುಖ್ಯವಾಗಿ ಆಸ್ತಿ, ಹಣ ಅವಳಿಗೆ ಹಿರಿಯ ಮಗಳು ಅರ್ಪಿತಾಗೆ ಸಿಗಬಾರದು. ನಮ್ಮನ್ನ ಹೂಳಬೇಡಿ, ಅಗ್ನಿ ಸ್ಪರ್ಶ ಮಾಡಿ. ನಮ್ಮ ಸಾವಿಗೆ ನಾವೇ ಕಾರಣ. ಬೆಳಗಿನ ಜಾವ 4 ಗಂಟೆಗೆ ನಿದ್ದೆ ಬರಲಾರದೆ ಒದ್ದಾಡಿ ಬರೆದಿದ್ದೇವೆ.

ಮಾನಕ್ಕೆ ಅಂಜಿ ಹೀಗೆ ಮಾಡಿಕೊಳ್ಳುತ್ತಿದ್ದೇವೆ. ನನ್ನ ಮಗಳು ನಮಗೆಲ್ಲ ಮೋಸ ಮಾಡಿದಳು. ನಮ್ಮ ಪರಿಸ್ಥಿತಿ ಜಗತ್ತಿನಲ್ಲಿ ಯಾರಿಗೂ ಬರಬಾರದು. ನಮ್ಮ ಆಸ್ತಿ ಒಂದು ರೂಪಾಯಿಯೂ ಅವಳಿಗೆ ಸಿಗಬಾರದು. ಎಲ್ಲಾ ಆಸ್ತಿಯನ್ನ ಚಿಕ್ಕಪ್ಪನಿಗೆ ನೀಡಿ. ಮನೆ, ಸೆಟ್, ಮನೆಯಲ್ಲಿರುವ ಎರಡೂವರೆ ಲಕ್ಷ ಹಣ ಯಾವುದು ಅವಳಿಗೆ ಸಿಗಬಾರದು. ಚಿಕ್ಕಪ್ಪನ ಹೆಂಡತಿ ಸೌಮ್ಯಗೂ ಸಿಗಬಾರದು ಎಂಬ ವಿಚಾರಗಳನ್ನು ಅದರಲ್ಲಿ ಉಲ್ಲೇಖಿಸಿದ್ದಾರೆ. ಇದಾದ ನಂತರ ಮೇ 24ರ ಶನಿವಾರ ಬೆಳಗ್ಗಿನ ಜಾವ ಬೆಳಕು ಹರಿಯುವ ಮುನ್ನವೇ ಮೊದಲೇ ಮಾಡಿಕೊಂಡ ತೀರ್ಮಾನದಂತೆ ಬೈಕ್‌ನಲ್ಲಿ ಮೂವರು ಹೆಬ್ಬಾಳ ಜಲಾಶಯದತ್ತ ತೆರಳಿದ್ದಾರೆ.



ಘಟನಾ ಸ್ಥಳದಲ್ಲಿ ನೆರೆದಿರುವ ಜನಸ್ತೋಮ

ಆ ನಂತರ ಜಲಾಶಯದ ದಡದಲ್ಲಿ ಮೂವರು ತಮ್ಮ ಚಪ್ಪಲಿಗಳನ್ನು ಬಿಚ್ಚಿಟ್ಟು, ತಮ್ಮ ಕಾಲಿಗೆ ಹಗ್ಗಗಳನ್ನು ಕಟ್ಟಿಕೊಂಡು ನೀರಿಗೆ ಹಾರಿದ್ದಾರೆ. ಅಷ್ಟೇ ಅಲ್ಲಿಗೆ ಒಂದು ಇಡೀ ಕುಟುಂಬ ಜಲ ಸಮಾಧಿಯಾಗಿದೆ. ಅದಕ್ಕೂ ಹಿಂದಿನ ದಿನ ಎಲ್ಲರಿಗೂ ಮಗಳು ಹರ್ಷಿತಾ ಮೂಲಕ ಫೋನ್ ಮಾಡಿಸಿ ನಾಳೆ ಮನೆಗೆ ಬರುವಂತೆ ಹೇಳಿಸಿದ್ದರು. ಅದರಂತೆ ಕೆಲವರು ಮನೆಗೆ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ, ಅಲ್ಲಿಯೇ ಸಿಕ್ಕಿದ ಡೆತ್ ನೋಟ್ ಅವರ ಸಾವಿನ ಕಥೆ ಹೇಳಿದೆ. ಅವರನ್ನು ಹುಡುಕಿಕೊಂಡು ಹೋದವರಿಗೆ ಜಲಾಶಯದ ದಡದಲ್ಲಿ ಚಪ್ಪಲಿಗಳು ಸಿಕ್ಕಿವೆ. ಆ ಮೂಲಕ ಅವರು ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದು ದೃಢವಾಗಿದೆ.

ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ ಹಿನ್ನಲೆಯಲ್ಲಿ ಹೆಚ್.ಡಿ. ಕೋಟೆ ಪೊಲೀಸ್ ಇನ್‌ಸ್ಪೆಕ್ಟರ್ ಗಂಗಾಧರ್, ಎಸ್‌ಐ ಚಿಕ್ಕನಾಯಕ, ಸುರೇಶ್ ಹಾಗೂ ಸಿಬ್ಬಂದಿ ಆಗಮಿಸಿದ್ದು ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ ಮೇರೆಗೆ ಹೆಚ್.ಡಿ. ಕೋಟೆ ಅಗ್ನಿಶಾಮಕ ಠಾಣಾಧಿಕಾರಿ ಸೋಮಣ್ಣ, ಹುಣಸೂರು ಸಹಾಯಕ ಅಗ್ನಿಶಾಮ ಠಾಣಾಧಿಕಾರಿ ಕೆ.ಸಿ. ಸತೀಶ್, ರವಿ, ಪ್ರಸಾದ್, ರಂಜಿತ್, ದಿನೇಶ್, ಸಂಗಮೇಶ್ ರಾಹುಲ್, ಬಾಲಕೃಷ್ಣ, ವಿನಯ್‌ಕುಮಾರ್, ಗಣೇಶ್, ಅಶೋಕ್, ವಿಶಾಲ್ ಮಂಜು ಮೊದಲಾದವರು ಆಗಮಿಸಿ ಜಲಾಶಯದಲ್ಲಿ ಶವವನ್ನು ಶೋಧಿಸಿ ಹೊರ ತೆಗೆದಿದ್ದಾರೆ. ಆ ನಂತರ ಅಂತ್ಯಕ್ರಿಯೆ ನಡೆಸಲಾಗಿದೆ. ಆದರೆ ಮನೆ ಬಿಟ್ಟು ಹೋದ ಮಗಳು ಮಾತ್ರ ಅಂತ್ಯಕ್ರಿಯೆಗೂ ಬರಲಿಲ್ಲ ಎನ್ನುವುದೇ ಬೇಸರದ ಸಂಗತಿ.

☯

# ಬೇಗೂರಿನಲ್ಲಿ ಭೂಗಳ್ಳರ ಅಟ್ಟಹಾಸ....
# ರಾತ್ರೋ ರಾತ್ರಿ ಯಲ್ಲಮ್ಮನ ದೇವಸ್ಥಾನ, ಮನೆ ಸರ್ವನಾಶ!

## 500 ಗೂಂಡಾಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಬಿಸಿಪಿ ಹೊಸ ಇತಿಹಾಸ!


ಭೂಗಳ್ಳ ರವಿಚಂದ್ರ ಅಲಿಯಾಸ್ ರವಿರೆಡ್ಡಿ

**ಬೆಂಗಳೂರಿನಲ್ಲಿ ಉತ್ತರದ ಬಿಲ್ಡರ್ಸ್ ಆರ್ಭಟ ಅತಿಯಾಗಿದೆ! ಅವರಿಗೆ ಇಲ್ಲಿನ ಭೂಗಳ್ಳರ ಸಪೋರ್ಟ್, ಬಿಬಿಎಂಪಿ ಅಧಿಕಾರಿಗಳ ಬೆಂಬಲ ಕೂಡ ಬಹಳ ಚೆನ್ನಾಗಿಯೇ ಇದೆ! ಎಲ್ಲಿ ನೋಡಿದರು ಡಿಎಲ್‌ಎಫ್ ಸಿಟಿ! ಮುಗಿಲೆತ್ತರದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ಸ್! ರಾತ್ರೋ ರಾತ್ರಿ ಬಡ ಬಗ್ಗರ ಹೊಲ ಮನೆಗಳೇ ಮಾಯ! ಪಾಪಿಗಳು ದೇವಸ್ಥಾನ ಗಳನ್ನೂ ಬಿಡದೆ ನೆಲಸಮ ಮಾಡುತ್ತಿದ್ದಾರೆ! ಇದೀಗ ಬೇಗೂರು ಗ್ರಾಮದಲ್ಲಿ ಮುನಿಸ್ವಾಮಿ ಎಂಬ ದಲಿತರ ಕುಟುಂಬ ಮನೆ ಮಠ ಕಳೆದುಕೊಂಡು ಬೀದಿಗೆ ಬಿದ್ದಿದೆ! ಪ್ರಭಾವಿಗಳ ಮುಂದೆ ಕೋರ್ಟ್‌ನಲ್ಲಿ ಬಡಿದಾಡುವ ಶಕ್ತಿ ಬಡ ಬಗ್ಗರಿಗೆ ಎಲ್ಲಿರುತ್ತೆ ಹೇಳಿ? ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಬ್ಲಾಂಕ್ ಚೆಕ್‌ನಂತೆ ಬಳಸಿಕೊಳ್ಳುವ ಸೋಕಾಲ್ಡ್ ದಲಿತ ನಾಯಕರುಗಳೇ ಎಲ್ಲಿದ್ದೀರಿ... ಬೇಗೂರಿನ ದಲಿತ ಕುಟುಂಬ ಬೀದಿಗೆ ಬಿದ್ದಿದೆ ನೋಡಿ...!!**

ಬೆಂಗಳೂರಿನಲ್ಲಿ ಉತ್ತರದ ಬಿಲ್ಡರ್ಸ್ ಆರ್ಭಟ ಅತಿಯಾಗಿದೆ! ಅವರಿಗೆ ಇಲ್ಲಿನ ಭೂಗಳ್ಳರ ಸಪೋರ್ಟ್,


ನಾಶವಾದ ಯಲ್ಲಮ್ಮ-ಮುನೇಶ್ವರ ದೇವಸ್ಥಾನ

ಬಿಬಿಎಂಪಿ ಅಧಿಕಾರಿಗಳ ಬೆಂಬಲ ಕೂಡ ಬಹಳ ಚೆನ್ನಾಗಿಯೇ ಇದೆ! ಎಲ್ಲಿ ನೋಡಿದರು ಡಿಎಲ್‌ಎಫ್ ಸಿಟಿ! ಮುಗಿಲೆತ್ತರದ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ಸ್! ರಾತ್ರೋ ರಾತ್ರಿ ಬಡ ಬಗ್ಗರ ಹೊಲ ಮನೆಗಳೇ ಮಾಯ! ಪಾಪಿಗಳು ದೇವಸ್ಥಾನಗಳನ್ನೂ ಬಿಡದೆ ನೆಲಸಮ ಮಾಡುತ್ತಿದ್ದಾರೆ! ಇದೀಗ ಬೇಗೂರು ಗ್ರಾಮದಲ್ಲಿ ಮುನಿಸ್ವಾಮಿ ಎಂಬ ದಲಿತರ ಕುಟುಂಬ ಮನೆಮಠ ಕಳೆದುಕೊಂಡು ಬೀದಿಗೆ ಬಿದ್ದಿದೆ! ಪ್ರಭಾವಿಗಳ ಮುಂದೆ ಕೋರ್ಟ್‌ನಲ್ಲಿ ಬಡಿದಾಡುವ ಶಕ್ತಿ ಬಡ ಬಗ್ಗರಿಗೆ ಎಲ್ಲಿರುತ್ತೆ ಹೇಳಿ? ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನು ಬ್ಲಾಂಕ್ ಚೆಕ್‌ನಂತೆ ಬಳಸಿಕೊಳ್ಳುವ ಸೋ ಕಾಲ್ಡ್ ದಲಿತ ನಾಯಕರುಗಳೇ ಎಲ್ಲಿದ್ದೀರಿ... ಬೇಗೂರಿನ ದಲಿತ ಕುಟುಂಬ ಬೀದಿಗೆ ಬಿದ್ದಿದೆ ನೋಡಿ...!!

ಇಸವಿ 1960ರಲ್ಲಿ ದಲಿತ ದೊಣ್ಣೆ ಮುನಿಗನ ಕುಟುಂಬ ಸರ್ವೆ ನಂಬರ್ 352 ಮತ್ತು 362ರಲ್ಲಿ ಬೇಗೂರು ಭೂಮಿಯನ್ನು ಕೊಂಡುಕೊಂಡಿತ್ತಂತೆ. ಆಗಿನ ಕಾಲದ ದಲಿತರ ದುಸ್ಥಿತಿ ಹೇಗಿತ್ತು ಅಂತ ಗೊತ್ತಲ್ಲ, ಎಲ್ಲರಿಗೂ ಸಿರಿವಂತರ ಮನೆ ಜೀತವೇ ಗತಿ!ಬೇಗೂರು ಮಾಜಿ ಕಾರ್ಪೋರೇಟರ್ ಶ್ರೀನಿವಾಸ್ ಗೌಡನ ಮನೆಲಿ ಈಗ ಸ್ವಾದೀನದಲ್ಲಿರುವ ದಲಿತ ಮುನಿರಾಜನ ತಾತ ದೊಣ್ಣೆ ಮುನಿಗಾ ಎಂಬಾತ ಕೆಲಸಕ್ಕಿದ್ದವನು ಕಷ್ಟ ಅಂಥ ಈ ಮುಕ್ಕಾಲು ಎಕರೆ ಜಮೀನನ್ನು 1800 ರೂ.ಗೆ ಅಡಮಾನ ಇಟ್ಟಿದ್ದನಂತೆ. ನಂತರ ಆ ಹಣ ವಾಪಸ್ಸು ಕೊಟ್ಟು ಜಮೀನು ಬಿಡಿಸಿಕೊಂಡು ಗೌಡರ ಫ್ಯಾಮಿಲಿಯಿಂದ ಅಡಮಾನ ಮುಕ್ತಿ ಪತ್ರ ಬರೆಸಿಕೊಂಡಿದ್ದಾನೆ.


ಮುನಿಗನ ಮಗ ಮುನಿಸ್ವಾಮಿ ಹಾಗೂ ಮಕ್ಕಳು

ಆದರ, ಐನಾತಿ ಗೌಡರು ಒಳಗೊಳಗೇ ತಮ್ಮ ಹೆಸರಿಗೆ ನಕಲಿ ದಾಖಲೆ ಮಾಡಿಕೊಂಡು ಬೇಗೂರಿನ ಮಾಜಿ ಕಾರ್ಪೊರೇಟರ್ ಶ್ರೀನಿವಾಸ್ ಹೆಸರಿಗೆ ಪ್ರಸೆಂಟ್ ಆರ್‌ಟಿಸಿ ಮಾಡಿಸಿಕೊಂಡು ಬೇಗೂರಿನ ದಲಿತರಿಗೆ ಮೋಸ ಮಾಡಿಬಿಟ್ಟಿದ್ದಾರೆ! ಸದರಿ ದೊಣ್ಣೆ ಮುನಿಗನ ಮಕ್ಕಳು, ಮೊಮ್ಮಕ್ಕಳು ನಾವು ಯಾರಿಗೂ ಮಾರಿಲ್ಲ.. ಅನ್ನುತ್ತಿದ್ದಾರೆ. ಇನ್ನೂ ಹದಿಮೂರು ದಲಿತ ಕುಟುಂಬಗಳು ಹೊಲ ಮನೆ ಕಳೆದುಕೊಂಡು ಬಾಯಿ ಬಾಯಿ ಬಡುಕೋತ್ತಿದ್ದಾರೆ! ಇವರ ಗೋಳು ಕೇಳಲು ಯಾವ ದಲಿತ ನಾಯಕರು ಬರುತ್ತಿಲ್ಲ, ಜನಾಧಿಕಾರ ಸಂಘರ್ಷ ಪರಿಷತ್‌ನ ವಕೀಲ ಪ್ರಕಾಶ್ ಬಾಬು ಒಬ್ಬರು ಮಾತ್ರ ಈ ಬಡ ದಲಿತರ ಬೆನ್ನಿಗೆ ನಿಂತು ಮಾನ್ಯ ನ್ಯಾಯಾಲಯದಲ್ಲಿ ಹೋರಾಡುತ್ತಿದ್ದಾರೆ!


ಜಾಯಿಂಟ್ ಕಮೀಷನರ್ ರಮೇಶ್ ಬಾನೂತ್


ಡಿಸಿಪಿ ಸಾರಾ ಫಾತಿಮಾ

ಬೇಗೂರಿನ ದಲಿತರ ಪರವಾಗಿ ಕೋರ್ಟ್‌ನಲ್ಲಿ ಕೇವಿಯಟ್ ಹಾಕಿದ್ದಾರೆ. ಬೇಗೂರು ಭಾಗದ ರವಿಚಂದ್ರ ಅಲಿಯಾಸ್ ರವಿ ರೆಡ್ಡಿ ಎಂಬ ಭೂಗಳ್ಳ ಮಾಜಿ ಕಾರ್ಪೊರೇಟರ್ ಶ್ರೀನಿವಾಸ್ ಗೌಡ ಮತ್ತು ಆತನ ಸಹೋದರ ಬೇಗೂರು ಚಡ್ಡಿ ನಾಗರಾಜ್ ಬಳಿಯಿಂದ ಈ ಒಂದು ಎಕರೆ ದಲಿತರ ಭೂಮಿ ರಿಜಿಸ್ಟರ್ ಜಿಪಿಎ ಮಾಡಿಸಿಕೊಂಡು, ಪ್ರೆಸ್ಟೀಜ್ ಬಿಲ್ಡರ್‌ಗಳಿಗೆ ಕೊಟ್ಟಿದ್ದಾನೆ! ರವಿ ರೆಡ್ಡಿ ಮತ್ತು ಪ್ರೆಸ್ಟೀಜ್‌ನವರು ಕೋರ್ಟ್‌ನಲ್ಲಿ ಈ ಜಾಗ ಖಾಲಿ ಇದೆ ನಾವೇ ಸ್ವಾದೀನದಲ್ಲಿದೀವಿ ಎಂದು ಸುಳ್ಳು ದಾಖಲೆ ಸಲ್ಲಿಸಿದ್ದಾರೆ! ಈಗ ಕೋರ್ಟ್‌ನಲ್ಲಿ ಎವಿಡೆನ್ಸ್ ಇರುವುದರಿಂದ ರಾತ್ರೋರಾತ್ರಿ ಐನೂರಕ್ಕೂ ಹೆಚ್ಚು ಗೂಂಡಾಗಳನ್ನು ನಾಲ್ಕು ಜೆಸಿಬಿ ಯಂತ್ರಗಳೊಂದಿಗೆ ನುಗ್ಗಿಸಿ ಅಲ್ಲಿದ್ದ ಒಂದು ವಾಸದ ಮನೆ, ಮುನೇಶ್ವರ ಹಾಗೂ ಯಲ್ಲಮ್ಮ ದೇವಾಲಯುಗಳನ್ನು ಸಂಪೂರ್ಣ ನೆಲಸಮ ಮಾಡಿದ್ದಾರೆ! ಈ ದಾಳಿಗೆ ಪುಡಿರೌಡಿಗಳ ಜೊತೆಗೆ ಮಂಗಳಮುಖಿಯರನ್ನು ಹಾಗೂ ಕೂಲಿ ಹುಡುಗರನ್ನು ದುಡ್ಡು ಕೊಟ್ಟು ಕರೆತಂದು ಬಳಸಿಕೊಳ್ಳಲಾಗಿದೆ!

ಈಗಾಗಲೇ ಕೋರ್ಟ್‌ನಲ್ಲಿ ಈ ಜಮೀನಿನ ಮೇಲೆ ಕೇಸು ನಡೆಯುತ್ತಿದ್ದರೂ ಸಹ ಬಿಡಿಎ ಕಮೀಷನರ್ ಪ್ಲಾನ್ ಅಪ್ರೂವಲ್ ಕನ್ವರ್ಷನ್ ಎನ್‌ಓಸಿ ಕೊಟ್ಟಿದ್ದಾರೆ! ಬಿಬಿಎಂಪಿ ಕಮೀಷನರ್ ತುಷಾರ್ ಗಿರಿನಾಥ್ ಪ್ಲಾನ್ ಅಪ್ರೂವಲ್ ನೀಡಿದ್ದಾರೆ! ಓಸಿ, ಸಿಸಿ ನೀಡಿದ್ದಾರೆ! ಈಗ ಈ ಇಬ್ಬರು ಅಧಿಕಾರಿಗಳ ಮೇಲೂ ಲೋಕಾಯುಕ್ತದಲ್ಲಿ ಕೇಸು ದಾಖಲಾಗಿದೆ!! ಕೋಟ್ಯಂತರ ರೂಪಾಯಿ ಭ್ರಷ್ಟ ಅಧಿಕಾರಿಗಳ ಜೇಬು ಸೇರಿದೆ! ರಾತ್ರೋ ರಾತ್ರಿ ದಲಿತರ ಸುಮಾರು ಮುಕ್ಕಾಲು ಎಕರೆ ಭೂಮಿ ಕಳೆದುಕೊಂಡು ಬೀದಿಪಾಲಾಗಿದ್ದಾರೆ! ಐನೂರು ಮಂದಿ ಗೂಂಡಾ ಗಳೊಂದಿಗೆ ಮಧ್ಯ ರಾತ್ರಿ ದಾಳಿಯಿಟ್ಟಿರುವ ರವಿಚಂದ್ರ ರೆಡ್ಡಿ ಆಲಿಯಾಸ್ ರವಿರೆಡ್ಡಿ ಗ್ಯಾಂಗ್ ಅಲ್ಲೊಂದು ಮನೆ ಇತ್ತು, ಎರಡು ದೇವಸ್ಥಾನ ಇದ್ದವು ಎಂಬುದರ ಗುರುತೂ ಕಾಣದಂತೆ ನೆಲಸಮ ಮಾಡಿಸಿ ಗುಡಿಸಿ ಗುಂಡಾಂತರ ಮಾಡಿಬಿಟ್ಟಿದ್ದಾನೆ!

ಬೇಗೂರು ಪೊಲೀಸರ ಎದುರಲ್ಲೇ ಇದೆಲ್ಲಾ ನಡೆದಿದೆ ಎಂಬುದು ಬ್ರೇಕಿಂಗ್ ನ್ಯೂಸ್! ಈಗ ನಡೆಯುತ್ತಿರೋ ಲ್ಯಾಂಡ್ ಡೀಲಿಂಗ್‌ಗಳಲ್ಲಿ ಬೆಂಗಳೂರಿನ ಮಂಗಳಮುಖಿಯರ ಗೂಂಡಾ ಗ್ಯಾಂಗ್ಸ್ ಭೂಗಳ್ಳರಿಗೆ ಕೈ ಜೋಡಿಸಿರುವುದು ಬೆಂಗಳೂರಿಗರಿಗೆ ತೀರಾ ಅಪಾಯಕಾರಿ ಬೆಳವಣಿಗೆ! ಸ್ಥಳದಲ್ಲೇ ಮಚ್ಚು, ಲಾಂಗ್ ಇತರೆ ಹತ್ಯಾರ್‌ಗಳು ಪತ್ತೆಯಾಗಿದೆ! ಜನಾಧಿಕಾರ ಸಂಘರ್ಷ ಪರಿಷತ್ ವಕೀಲ ಪ್ರಕಾಶ್‌ಬಾಬು ಈಗ ದಲಿತರ ಹಾಗೂ ರೈತರ ಜೊತೆಗೆ ನಿಂತಿದ್ದಾರೆ.


ಜನಾಧಿಕಾರ ಸಂಘರ್ಷ ಪರಿಷತ್ ವಕೀಲ ಪ್ರಕಾಶ್‌ಬಾಬು

ರಾತ್ರೋ ರಾತ್ರಿ, ದಲಿತರನ್ನು ಓಡಿಸಿ, ಕೆಲವರನ್ನು ಕಿಡ್ನಾಪ್ ಮಾಡಿಸಿ ಮನೆ ಹಾಗೂ ದೇವಸ್ಥಾನಗಳನ್ನು ಡೆಮಾಲಿಶ್ ಮಾಡಿರುವ ಭೂಗಳ್ಳ ರವಿಚಂದ್ರ, ರೆಡ್ಡಿ ಹಾಗೂ ಐನೂರು ಮಂದಿ ಗೂಂಡಾಗಳ ವಿರುದ್ಧ ಬೇಗೂರು

☞ 14

### ದಲಿತರ ಭೂಮಿ ಕದಿಯಲು ದಲಿತ ಲೀಡರ್‌ದೇ ಸಪೋರ್ಟ್?!

ಬೇಗೂರು ದಲಿತರ ಭೂಮಿ ಕದಿಯಲಿಕ್ಕೆ ಭೂಗಳ್ಳ ರವಿರೆಡ್ಡಿಗೆ ಆನೇಕಲ್ ಎಮ್ಮೆಲ್ಲೆ ಕ್ಯಾಂಡಿಡೇಟ್ ಆಗಿದ್ದ ದಲಿತ ಲೀಡರ್ ಒಬ್ಬನ ಸಹಕಾರವಿತ್ತು ಎಂಬ ಕಾರ್ಕೋಟಕ ಸುದ್ದಿ ಹಬ್ಬಿದೆ! ಆತನ ಸಪೋರ್ಟ್ ಇದ್ದಿದ್ದರಿಂದಲೇ ಅಷ್ಟು ಗೂಂಡಾಗಳನ್ನು ಬಳಸಿಕೊಂಡು ಬಡ ದಲಿತರನ್ನು ರಾತ್ರೋರಾತ್ರಿ ಒಕ್ಕಲೆಬ್ಬಿಸಲು ಸಾದ್ಯವಾಗಿದ್ದು ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ! ಆನೇಕಲ್ ಮೀಸಲು ಕ್ಷೇತ್ರದಲ್ಲಿ ದಲಿತರ ಮನೆ ಕಾಯುತ್ತೇನೆ... ಎಂದು ಭಾಷಣ ಮಾಡಿಕೊಂಡು ರಾಜಕೀಯಕ್ಕೆ ಬಂದಿರುವ ಒಂದು ಕಾಲದ ಮರಳು ಫಿಲ್ಟರ್ ಮಾಫಿಯಾ ಪುಡಾರಿ,ಈಗ ಭೂಗಳ್ಳರು, ರೌಡಿ ಶೀಟರ್‌ಗಳೊಂದಿಗೆ ಸೇರಿಕೊಂಡು ದಲಿತರದೇ ಭೂಮಿ ಕಿತ್ತುಕೊಂಡು ಕೋಟ್ಯಾಂತರ ದುಡ್ಡು ಮಾಡುತ್ತಿದ್ದಾನೆ ಎಂಬ ರೂಮರ್ಸ್ ಇದೆ! ಇಂತವನು ಶಾಸಕನಾದರೆ ಆನೇಕಲ್ ದಲಿತರ ಗತಿ ಅಧೋಗತಿ ಅಷ್ಟೇ...!! ☯


ಡಿಎಲ್‌ಎಫ್ ಕ್ಲಬ್ ಹೌಸ್ ಹಿಂದಿನ ಜಾಗ!




ಮನೆ-ದೇವಾಲಯದ ಅವಶೇಷ

# ಕೋಮು ದ್ವೇಷಕ್ಕೆ ಬಲಿಯಾದ ಪಿಕ್‌ಅಪ್ ಚಾಲಕ ಅಬ್ದುಲ್!


ಕೊಲೆಯಾದ ಅಬ್ದುಲ್ ರಹಿಮಾನ್

**ಕ**ರಾವಳಿ ನಗರಿ ದಕ್ಷಿಣ ಕನ್ನಡ ಜಿಲ್ಲೆ ಕೊತ ಕೊತ ಕುದಿಯುತ್ತಿದೆ. ಬೆನ್ನು ಬೆನ್ನಿಗೆ ನಡೆದಂತಹ ಎರಡು ಬರ್ಬರ ಹತ್ಯೆಗಳು ಕರಾವಳಿಗರ ನೆಮ್ಮದಿಯನ್ನು ಕೆಡಿಸಿದೆ. ಕೇವಲ ಜನಸಾಮಾನ್ಯರಲ್ಲಿ ಮಾತ್ರ ಈ ದುಗುಡ ಅಲ್ಲ, ಬದಲಾಗಿ ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕಾದಂತಹ ಪೊಲೀಸ್ ವ್ಯವಸ್ಥೆಯೊಳಗೂ ದುಗುಡ ಆವರಿಸಿದೆ.

**ಮಂಗಳೂರು**
✍ ಮೋಹನ್ ಬೋಳಂಗಡಿ

ಬಂಟ್ವಾಳ ತಾಲೂಕಿನ ಬಡಬೆಳ್ಳೂರು ಗ್ರಾಮದ ಕಾಂಬೋಡಿ ಇರಾಕೋಡಿ ಎಂಬಲ್ಲಿ ಮಧ್ಯಾಹ್ನದ ವೇಳೆ ನಡೆದಿದ್ದ ಪಿಕ್ ಅಪ್ ಚಾಲಕನ ಬರ್ಬರ ಹತ್ಯೆ ಮತ್ತು ಆತನ ಜೊತೆಗಿದ್ದ ಕೂಲಿ ಕಾರ್ಮಿಕನ ಕೊಲೆಯತ್ನ ಪ್ರಕರಣ ಇಬ್ಬರು ಹಿರಿಯ ಐಪಿಎಸ್ ಅಧಿಕಾರಿಗಳ ತಲೆದಂಡಕ್ಕೆ ಕಾರಣವಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿ ಆಗಿದ್ದ ಎನ್. ಯತೀಶ್ ಮತ್ತು ಮಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಅನುಪಮ್ ಅಗರ್‌ವಾಲ್ ಅವರನ್ನು ಸರಕಾರ ದಿಢೀರನೆ ವರ್ಗಾಯಿಸಿ ಅವರ ಜಾಗಕ್ಕೆ ಈ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿಯಾಗಿದ್ದು ಸರಕಾರದ ಅವಕೃಪೆಗೆ ತುತ್ತಾಗಿ ಅವಧಿ ಪೂರ್ವ ವರ್ಗಾವಣೆಗೊಂಡಿದ್ದ ಸುಧೀರ್ ಕುಮಾರ್ ರೆಡ್ಡಿ ಅವರನ್ನು ನಿಯೋಜಿಸಲಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲಾ ಎಸ್‌ಪಿಯಾಗಿ ಉಡುಪಿ ಎಸ್‌ಪಿಯಾಗಿದ್ದ ಕೆ. ಅರುಣ್ ಅವರನ್ನು ನಿಯುಕ್ತಿಗೊಳಿಸಲಾಗಿದೆ. ಅವರಿಬ್ಬರೂ ಸರಕಾರಿ ಆದೇಶ ಬಂದ ದಿನವೇ ಮಂಗಳೂರಿಗೆ ಬಂದು ಕರ್ತವ್ಯಕ್ಕೆ ಹಾಜರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಪರಿಸ್ಥಿತಿ ಶಾಂತವಾಗಿದೆ. ಆದರೂ ಸಾರ್ವಜನಿಕವಾಗಿ ಹರಡುತ್ತಿರುವಂತಹ ವದಂತಿಗಳಿಂದಾಗಿ ಆತಂಕಿತ ವಾತಾವರಣ ಸೃಷ್ಟಿಯಾಗಿದೆ. ಈ ಮಧ್ಯೆ ಪಿಕ್‌ಅಪ್ ಚಾಲಕನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಐವರು ಆರೋಪಿಗಳನ್ನು ಬಂಧಿಸಲಾಗಿದೆ. ಅವರ ಪೈಕಿ ಮೂವರು ಆರೋಪಿಗಳನ್ನು ಪೊಲೀಸ್ ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಈ ಪ್ರಕರಣದಲ್ಲಿ ನೇರವಾಗಿ ಭಾಗಿಯಾದ ಮೂವರು ಆರೋಪಿಗಳು ಪೊಲೀಸರ ಬಲೆಗೆ ಬಿದ್ದಿದ್ದಾರೆ. ಆದರೆ ಪ್ರಕರಣಕ್ಕೆ ಪರೋಕ್ಷವಾಗಿ ಕುಮ್ಮಕ್ಕು ನೀಡಿದಂತಹ ಕೆಲವು ಆರೋಪಿಗಳು ಭೂಗತರಾಗಿದ್ದಾರೆ. ಒಟ್ಟಾರೆಯಾಗಿ ಈ ಪ್ರಕರಣ ಈ ಹಿಂದೆ ಬಜ್ಪೆಯಲ್ಲಿ ನಡೆದಿದ್ದಂತಹ ಹಿಂದೂಪರ ಸಂಘಟನೆಯ ಕಾರ್ಯಕರ್ತ ಸುಹಾಸ್ ಶೆಟ್ಟಿಯ ಹತ್ಯಾಪ್ರಕರಣಕ್ಕೆ ಪ್ರತೀಕಾರ ಎಂಬ ಭಾವನೆ ಗಟ್ಟಿಯಾಗತೊಡಗಿದೆ. ಈ ಪ್ರಕರಣದಲ್ಲಿ ಒಳಗೊಂಡಿರುವಂತಹ ಆರೋಪಿಗಳು ಹಿಂದೂಪರ ಸಂಘಟನೆಗಳಲ್ಲಿ ಪರೋಕ್ಷವಾಗಿ ಗುರುತಿಸಿಕೊಂಡಿರುವುದರಿಂದ ಇದು ಪ್ರತೀಕಾರದ ಹತ್ಯೆ ಎನ್ನುವುದು ಸ್ಪಷ್ಟವಾಗಿದೆ.

### ಹತ್ಯೆಗೀಡಾದದ್ದು ಯಾರು?

ಬಂಟ್ವಾಳ ತಾಲೂಕಿನ ಗ್ರಾಮಾಂತರ ಪ್ರದೇಶ ಬಡಗಬೆಳ್ಳೂರು ಗ್ರಾಮ. ಜಿಲ್ಲೆಯ ಪುರಾಣ ಪ್ರಸಿದ್ಧ ಧಾರ್ಮಿಕ ಕೇಂದ್ರ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದಿಂದ ಕೇವಲ 3 ಕಿಲೋ ಮೀಟರ್ ದೂರವಿರುವಂತಹ


ಅಬ್ದುಲ್ ರಹಿಮಾನ್‌ನ ಮೃತದೇಹ

ಸ್ಥಳ. ಅಕ್ಕಪಕ್ಕದಲ್ಲಿಯೇ ಗುರುತಿಸುವಂತಹ ಹಲವು ಸ್ಥಳಗಳಿವೆ. ಅವುಗಳಲ್ಲಿ ಒಂದಾದದ್ದು ಕೊಳತ್ತಮಜಲು ಎಂಬ ಪ್ರದೇಶ. ಫಲ್ಗುಣಿ ನದಿಯ ತಪ್ಪಲಲ್ಲಿದೆ. ಮುಸ್ಲಿಂ ಮತ್ತು ಹಿಂದೂ ಬಾಂಧವರು ಸರಿಸಂಖ್ಯೆಯಲ್ಲಿ ಇರುವಂತಹ ಸೌಹಾರ್ದತೆ ಇದ್ದಂತಹ ಊರು. ಬಂಟ್ವಾಳ ವಿಧಾನ ಸಭಾ ಕ್ಷೇತ್ರಕ್ಕೆ ಈ ಗ್ರಾಮ ಒಳಪಡುತ್ತಿದೆ. ಇಂತಹ ಕೊಳತ್ತಮಜಲುವಿನ ಮಸೀದಿಯ ಆಡಳಿತ ಮಂಡಳಿಯ ಕಾರ್ಯದರ್ಶಿಯಾಗಿದ್ದವರು ಅಬ್ದುಲ್ ರಹೀಮಾನ್. ವಯಸ್ಸು 32. ಮದುವೆಯಾಗಿ ಎರಡು ಮಕ್ಕಳ ತಂದೆ. ಮನೆಯಲ್ಲಿ ವೃದ್ಧ ತಂದೆತಾಯಿ ಸಹೋದರ ಹನೀಫ್‌ರೊಂದಿಗೆ ಕೂಡು ಕುಟುಂಬ. ಹೊಸತಾಗಿ ಮನೆ ನಿರ್ಮಾಣಕ್ಕೆ ತೊಡಗಿದ್ದರು. 2-3 ಪಿಕ್‌ಅಪ್ ವಾಹನಗಳನ್ನು ಹೊಂದಿದ್ದು ಫಲ್ಗುಣಿ ನದಿಯಿಂದ ಯಾವುದೇ ರೀತಿಯ ಪರವಾನಗಿ ಇಲ್ಲದೆ ಮರಳನ್ನು ತೆಗೆದು ಅಗತ್ಯ ಇದ್ದವರಿಗೆ ಮಾರಾಟ ಮಾಡುವಂತಹ ವ್ಯವಹಾರ ನಡೆಸುತ್ತಿದ್ದರು. ಮಸೀದಿಯ ಎಸ್‌ಕೆಎಸ್‌ಎಸ್‌ಎಫ್ ಎಂಬ ಸಂಘಟನೆಯಲ್ಲಿ ಸಕ್ರಿಯರಾಗಿದ್ದರು. ಯಾರೊಂದಿಗೂ ವೈರತ್ವವನ್ನು ಬೆಳೆಸಿದವರಲ್ಲ, ಎಲ್ಲರಿಗೂ ಒಂದಲ್ಲ ಒಂದು ಕಾರಣದಿಂದ ಉಪಕಾರ ಮಾಡಿದಂತಹ ಯುವಕ. ಇಂತಹ ಹಿನ್ನಲೆಯ ಅಬ್ದುಲ್ ರಹಿಮಾನ್‌ರವನ್ನು ಮೇ 27ರಂದು ಸಂಜೆ ಸುಮಾರು 3 ಗಂಟೆಯ ವೇಳೆಗೆ ದೂರವಾಣಿ ಕರೆ ಮಾಡಿ ಅರ್ಜೆಂಟಾಗಿ ತನ್ನ ಮನೆಯ ಕಾಮಗಾರಿಗೆ ಒಂದು ಲೋಡ್ ಮರಳು ಬೇಕು ಎಂದು ಬೇಡಿಕೆ ಇಟ್ಟದ್ದು ಕಾಂಬೋಡಿಯ ಇರಾಕೋಡಿಯ ರಾಜೀವಿ ಎಂಬವರ ಮಗ ದೀಪಕ್. ಆ ಮನೆಗೆ ಈ ಹಿಂದೆಯೂ ಅಬ್ದುಲ್ ರಹಿಮಾನ್ ಹಲವು ಲೋಡ್ ಮರಳನ್ನು ಹಾಕಿದ್ದರು. ಹಣ ಪಡೆದುಕೊಂಡೂ ಇದ್ದರು. ಆ ಮನೆಯವರೊಂದಿಗೆ ಅಬ್ದುಲ್ ರಹಿಮಾನ್‌ರವರಿಗೆ ಅವಿನಾಭಾವ ಸಂಬಂಧ ಇತ್ತು. ದೀಪಕ್ ಅವರ ತಂದೆ ವಿದ್ಯುತ್ ಆಘಾತಕ್ಕೆ ಒಳಪಟ್ಟು ಆಸ್ಪತ್ರೆಯಲ್ಲಿದ್ದಂತಹ ಸಂದರ್ಭದಲ್ಲಿ ತುರ್ತಾಗಿ ಅವಶ್ಯಕತೆ ಇದ್ದ ರಕ್ತವನ್ನು ಅಬ್ದುಲ್ ರಹಿಮಾನ್ ದಾನ ಮಾಡಿದ್ದರು ಅಲ್ಲದೆ ಇತರ ತನ್ನ ಸ್ನೇಹಿತರಿಂದಲೂ ರಕ್ತ ಕೊಡಿಸಿದ್ದರು. ಆದ್ದರಿಂದ ಅಬ್ದುಲ್ ರಹಿಮಾನ್‌ರವರು ತನ್ನ ಮನೆಯ ಕಾಮಗಾರಿಗೆ ತಂದಿರಿಸಲಾಗಿದ್ದಂತಹ ಮರಳನ್ನು ತನ್ನದೇ ಪಿಕ್‌ಅಪ್‌ಗೆ ತುಂಬಿಸಿ ಚಾಲಕನಾಗಿಯೂ, ಕೂಲಿಕಾರ್ಮಿಕಾಗಿಯು ಕೆಲಸ ಮಾಡುತ್ತಿದ್ದ, ಮಹಮ್ಮದ್ ಶಾಫಿ ಎಂಬಾತನನ್ನು ಕರೆದುಕೊಂಡು ಇರಾಕೋಡಿಗೆ ಹೋಗಿದ್ದರು. ರಾಜೀವಿ ಅವರ ಮನೆಯ ಅಂಗಳದಲ್ಲಿ ಪಿಕ್‌ಅಪ್ ನಿಲ್ಲಿಸಿ ಮರಳನ್ನು ಅನ್‌ಲೋಡ್ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಅಬ್ದುರ್ರಹಿಮಾನ್ ಪಿಕ್‌ಅಪ್‌ನ ಚಾಲಕನ ಸೀಟ್‌ನಲ್ಲಿ ಕುಳಿತ್ತಿದ್ದರು. ಮಹಮ್ಮದ್‌ಶಾಫಿ ಹಿಂಬದಿಯಲ್ಲಿ ನಿಂತಿದ್ದರು. ಈ ಸಂದರ್ಭದಲ್ಲಿ ಬೈಕ್‌ನಲ್ಲಿ ಇಬ್ಬರು ಯುವಕರು ಬಂದಿದ್ದರು. ಅವರು ಬರುತ್ತಿದ್ದಂತೆಯೇ ಮನೆಯಲ್ಲಿದ್ದ ದೀಪಕ್ ಪಿಕ್‌ಅಪ್‌ನ ಹತ್ತಿರಕ್ಕೆ ಬಂದು ಅಬ್ದುಲ್ ರಹಿಮಾನ್‌ರೊಂದಿಗೆ ತಗಾದೆ ತೆಗೆದಿದ್ದ. ಆ ಸಂದರ್ಭದಲ್ಲಿ ಬೈಕ್‌ನಲ್ಲಿ ಬಂದ


ಗಾಯಗೊಂಡಿರುವ ಶಾಫಿ

ಯುವಕರಿಬ್ಬರು ತಾವು ತಂದಿದ್ದ ಮಾರಕಾಸ್ತ್ರಗಳಿಂದ ಅಬ್ದುಲ್ ರಹಿಮಾನ್‌ರವರಿಗೆ ಯದ್ವಾತದ್ವಾ ಕಡಿದರು. ಅವರು ಸ್ಥಳದಲ್ಲಿಯೇ ಮೃತಪಟ್ಟರು. ಈ ಘಟನೆಯನ್ನು ಕಣ್ಣಾರೆ ಕಂಡಂತಹ ಮಹಮ್ಮದ್ ಶಾಫಿ ಹಲ್ಲೆಯನ್ನು ತಪ್ಪಿಸಲು ಬಂದ ಸಂದರ್ಭದಲ್ಲಿ ಅವರ ಮೇಲೂ ಗಂಭೀರವಾಗಿ ಹಲ್ಲೆ ನಡೆಸಲಾಯಿತು. ಈ ಸಂದರ್ಭದಲ್ಲಿ ಅಲ್ಲಿಗೆ ಅಕ್ಕಪಕ್ಕದವರು ಬಂದು ಸೇರಿದಾಗ ಬೈಕಿನಲ್ಲಿ ಬಂದ ಹಂತಕರಿಬ್ಬರು ದೀಪಕ್‌ನೊಂದಿಗೆ ಮಾರಕಾಯುಧಗಳ ಸಹಿತ ಪರಾರಿಯಾದರು. ಸ್ವಲ್ಪ ಸಮಯದ ಬಳಿಕ ಮಾಹಿತಿ ತಿಳಿದ ನಿಸಾರ್ ಎಂಬವರು ಸ್ಥಳಕ್ಕೆ ಬಂದು ಮಹಮ್ಮದ್ ಶಾಫಿಯನ್ನು ಆ ರಸ್ತೆಯಾಗಿ ಬರುತ್ತಿದ್ದಂತಹ ಕಾರೊಂದನ್ನು ತಡೆದು ನಿಲ್ಲಿಸಿ ಆಸ್ಪತ್ರೆಗೆ ಕೊಂಡೊಯ್ಯುತ್ತಿರುವಾಗ ಆಂಬುಲೆನ್ಸ್ ಬಂದಿದ್ದು ಅದರಲ್ಲಿ ಅವರನ್ನು ಮಂಗಳೂರಿನ ಐಲ್ಯಾಂಡ್ ಆಸ್ಪತ್ರೆಗೆ ದಾಖಲಿಸಲಾಯಿತು. ಅವರು ಸದ್ಯಕ್ಕೆ ಚೇತರಿಸುತ್ತಿದ್ದಾರೆ. ಜೀವ ಕಳೆದುಕೊಂಡು ಪಿಕ್ ಅಪ್ ವಾಹನದ ಬಳಿಯೇ ಬಿದ್ದಿದ್ದಂತಹ ಅಬ್ದುಲ್ ರಹಿಮಾನ್ ಅವರನ್ನು ಮಂಗಳೂರಿನ ದೇರಳಕಟ್ಟೆಯ ಯೆನಪೋಯ ಆಸ್ಪತ್ರೆಗೆ ಕೊಂಡೊಯ್ಯಲಾಯಿತು. ಅದೇ ದಿನ ರಾತ್ರಿ ಅವರ ಮರಣೋತ್ತರ ಶಸ್ತ್ರಚಿಕಿತ್ಸೆ ನಡೆಸಿ ಮರುದಿನ ಬೆಳಿಗ್ಗೆ ಮನೆಯವರಿಗೆ ಹಸ್ತಾಂತರಿಸಲಾಯಿತು. ಕುತ್ತಾರಿನ ಮದನಿ ನಗರದ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ನೂರಾರು ವಾಹನಗಳ ಮೆರವಣಿಗೆಯೊಂದಿಗೆ ಕೊಳತ್ತಮಜಲುವಿನ ಮನೆಗೆ ಮೃತದೇಹವನ್ನು ಕೊಂಡೊಯ್ದು ಅಲ್ಲಿನ ಮಸೀದಿಯಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

### 5 ತಂಡ ರಚನೆ

ಅಬ್ದುಲ್ ರಹಿಮಾನ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಮ್ಮದ್ ಶಾಫಿಯನ್ನು ಆಸ್ಪತ್ರೆಗೆ ಕೊಂಡೊಯ್ದ ನಿಸಾರ್ ಎಂಬವರು ನೀಡಿದ ದೂರಿನಂತೆ ದೀಪಕ್, ಸುಮಿತ್ ಮತ್ತು ಇತರ ಹದಿಮೂರು ಮಂದಿಯ ಮೇಲೆ ಹತ್ಯಾ ಪ್ರಕರಣವನ್ನು ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ದಾಖಲಿಸಲಾಯಿತು. ಜಿಲ್ಲಾ ಎಸ್ಪಿ ಯತೀಶ್ ಅವರು ಪ್ರಕರಣದ ತನಿಖೆಗಾಗಿ ಬಂಟ್ವಾಳ ಡಿವೈಎಸ್ಪಿ ವಿಜಯ ಪ್ರಸಾದ್ ನೇತೃತ್ವದಲ್ಲಿ 5 ತಂಡಗಳನ್ನು ರಚಿಸಲಾಗಿದೆ. ಈ ತಂಡಗಳು ವ್ಯಾಪಕವಾಗಿ ಕಾರ್ಯಾಚರಣೆ ನಡೆಸಿ ಕೇವಲ ಎರಡನೇ ದಿನಗಳಲ್ಲಿ ನೇರ ಆರೋಪಿಗಳಾದ ಇರಾಕೋಡಿಯ ಯೋಗೀಶ್ ಪೂಜಾರಿ ಎಂಬವರ ಮಗನಾದ ದೀಪಕ್ (21), ಅಮ್ಮುಂಜೆ ಗ್ರಾಮದ ಶಿವಾಜಿ ನಗರ ಪ್ರಮೋದ್ ರಾಜ್ ಜೋಗಿ ಎಂಬವರ ಮಗ


ಅಬ್ದುಲ್ ರಹಿಮಾನ್

ಪೃಥ್ವಿರಾಜ್ (21), ಶಿವಾಜಿ ನಗರದ ಅಮ್ಮುಂಜೆ ಗ್ರಾಮ ಇಲ್ಲಿನ ಸುರೇಶ ಬೆಳ್ಚಡ ಎಂಬವರ ಮಗ ಚಿಂತನ್ (19), ಎಂಬವರನ್ನು ಬಂಧಿಸಿದ್ದಾರೆ. ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದ್ದು 11 ದಿನಗಳ ಪೊಲೀಸ್ ಕಸ್ಟಡಿ ಪಡೆಯಲಾಗಿದೆ. ತದನಂತರದ ಕಾರ್ಯಾಚರಣೆಯಲ್ಲಿ ತೆಂಕ ಬೆಳ್ಳೂರಿನ ಸುಮಿತ್ ಆಚಾರ್ಯ (27) ಮತ್ತು ಬಡಗಬೆಳ್ಳೂರಿನ ರವಿರಾಜ್ (23) ಎಂಬವರಿಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಒಟ್ಟಾರೆಯಾಗಿ ಈ ಪ್ರಕರಣ ಸ್ಥಳೀಯವಾಗಿ ಸಾಕಷ್ಟು ಭಯದ ವಾತಾವರಣವನ್ನು ನಿರ್ಮಿಸಿದೆ. ಪೊಲೀಸರು ಬಂಧಿಸಿರುವಂತಹ ಆರೋಪಿಗಳು ಸ್ಥಳೀಯರೇ ಆಗಿದ್ದು ಅಬ್ದುಲ್ ರಹಿಮಾನ್‌ರವರ ನಿಕಟ ಪರಿಚಯ ಇದ್ದವರೇ ಆಗಿದ್ದಾರೆ. ಇವರು ವಯಕ್ತಿಕ ಕಾರಣಗಳಿಂದ ಪ್ರಿಪ್ಲಾನ್ ಮಾಡಿ ಈ ಹತ್ಯೆ ಮಾಡಿರುವುದು ಖಚಿತವಾಗಿದೆ. 2 ತಿಂಗಳ ಹಿಂದೆ ಕೊಳತ್ತಮಜಲು ಮಸೀದಿಯ ಎದುರು ಬೈಕಿನಲ್ಲಿ ಬರುತ್ತಿದ್ದಂತಹ ಯುವಕರ ಮೇಲೆ ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ದ್ವೇಷ ಬೆಳೆಸಿಕೊಂಡು ಈ ಕೃತ್ಯ ನಡೆಸಲಾಗಿದೆ ಎಂಬ ಮಾಹಿತಿಗಳು ಇದೆ. ಇನ್ನೊಂದು ಮೂಲಗಳ ಪ್ರಕಾರ ಮರಳು ಮಾಫಿಯಾದ ಹಿನ್ನೆಲೆಯಲ್ಲಿ ಈ ಹತ್ಯೆ ನಡೆದಿರಬಹುದಾದ ಸಾಧ್ಯತೆಗಳಿವೆ. ಕೆಲವು ದಿನಗಳ ಹಿಂದೆ ಬಜ್ಪೆ ಪೊಲೀಸ್ ಠಾಣಾ ವ್ಯಾಪ್ತಿಯ ಕಿನ್ನಿಪದವು ಎಂಬಲ್ಲಿ ಭಜರಂಗ ದಳದ ಪ್ರಮುಖರಾಗಿದ್ದಂತಹ ಸುಹಾಸ್ ಶೆಟ್ಟಿಯನ್ನು ಸಿನಿಮೀಯ ಶೈಲಿಯಲ್ಲಿ ದುಷ್ಕರ್ಮಿಗಳ ತಂಡ ಹತ್ಯೆ ಮಾಡಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಈ ಹಿಂದೆ ಪಿಎಫ್‌ಐ ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದ ಕೆಲವರನ್ನು ಸೇರಿದಂತೆ ಒಟ್ಟು 11 ಮಂದಿಯನ್ನು ಬಂಧಿಸಲಾಗಿದೆ. ಈ ಹತ್ಯೆಗೆ ಪ್ರತೀಕಾರವಾಗಿ ಹಳೆಯ ದ್ವೇಷವನ್ನು ಇಟ್ಟುಕೊಂಡು ಅಬ್ದುಲ್ ರಹಿಮಾನ್‌ರವರನ್ನು ಕೊಲೆಗೈಯ್ಯಲಾಗಿದೆ ಎಂಬಂತಹ ಮಾಹಿತಿಗಳು ಲಭ್ಯವಾಗಿದೆ. ಒಟ್ಟಾರೆಯಾಗಿ ಈ ಪ್ರಕರಣ ಕರಾವಳಿ ಜಿಲ್ಲೆಯಲ್ಲಿ ಒಂದು ರೀತಿಯ ದುಗುಡವನ್ನು ಸೃಷ್ಟಿಸಿದೆ.

## ಕಮಿಷನರ್ ಆಗಿ ಸುಧೀರ್ ರೆಡ್ಡಿ, ಎಸ್ಪಿಯಾಗಿ ಕೆ. ಅರುಣ್

**ಮಂ**ಗಳೂರು ಪೊಲೀಸ್ ಆಯುಕ್ತರಾಗಿ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರು ಅನುಪಮ್ ಅಗರ್‌ವಾಲ್. ಈ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿದ್ದಂತಹ ಮಾದಕ ವಸ್ತು ಜಾಲವನ್ನು ಬುಡ ಸಮೇತ ಕಿತ್ತು ಹಾಕಲು ಶಕ್ತಿಮೀರಿ ಪ್ರಯತ್ನಿಸಿದವರು. ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡದವರು. ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಗಂಭೀರ ಪ್ರಕರಣಗಳು ಸಂಭವಿಸಿದ್ದರೂ ಅದನ್ನು ಪತ್ತೆ ಹಚ್ಚಿದಂತಹ ಕೀರ್ತಿ ಅವರದ್ದು. ಇತ್ತೀಚೆಗೆ ಅವರ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿಗಳ ಪದಕ ಘೋಷಣೆಯಾಗಿತ್ತು. ಅನುಮತಿ ಇಲ್ಲದೆ


ಹಿಂದಿನ ಕಮೀಷನರ್ ಅನುಪಮ್ ಅಗರ್‌ವಾಲ್


ಎಸ್ಪಿ ಯತೀಶ್

ಪ್ರತಿಭಟನೆ ನಡೆಸಿದ ಕಾರಣಕ್ಕಾಗಿ ಡಿವೈಎಫ್‌ಐ ಮುಖಂಡರ ಮೇಲೆ ಕೇಸು ದಾಖಲಿಸಲಾಗಿತ್ತು. ಆದ್ದರಿಂದ ಆ ಸಂಘಟನೆಯವರು ಪೊಲೀಸ್ ಆಯುಕ್ತರ ವಿರುದ್ಧ ವಿವಿಧ ಆರೋಪಗಳನ್ನು ಮಾಡಿ ದೂರು ಸಲ್ಲಿಸಿದ್ದರು. ಬಜ್ಪೆಯಲ್ಲಿ ನಡೆದ ಸುಹಾಸ್ ಶೆಟ್ಟಿ ಹತ್ಯೆಯ ಹಿನ್ನಲೆಯಲ್ಲಿ ಪೊಲೀಸರ ಕೈವಾಡ ಇದೆ ಎಂಬ ಆರೋಪ ಕೇಳಿಬಂದಿತ್ತು. ಮತ್ತು ಪ್ರತಿಭಟನೆಯಾಗಿ ಬಜ್ಪೆಯಲ್ಲಿ ನಡೆದಿದ್ದಂತಹ ಸಭೆಯಲ್ಲಿ ಉದ್ರೇಕಕಾರಿ ಭಾಷಣಗಳನ್ನು ಮಾಡಿದ್ದರೂ ಕ್ರಮ ಕೈಗೊಳ್ಳಲಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಸರಕಾರ ವರ್ಗಾಯಿಸಿದೆ. ಅವರ ಸ್ಥಾನಕ್ಕೆ 8 ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿ ಕರ್ತವ್ಯ ನಿರ್ವಹಿಸಿದ್ದ ಸುಧೀರ್ ಕುಮಾರ್ ರೆಡ್ಡಿಯವರನ್ನು ನಿಯೋಜಿಸಿದೆ. ಖಡಕ್ ಪೊಲೀಸ್ ಅಧಿಕಾರಿ ಎಂಬ ಅಭಿದಾನ ಇವರಿಗೆ ಇದೆ. ಇವರು ಎಸ್ಪಿಯಾಗಿದ್ದ ಸಂದರ್ಭದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತ ಶರತ್ ಮಡಿವಾಳನ ಹತ್ಯೆ ನಡೆದಿತ್ತು. ಬಿ.ಸಿ. ರೋಡ್ ಮುಖ್ಯ ರಸ್ತೆಯಲ್ಲಿಯೇ ಆ ಹತ್ಯೆ ನಡೆಸಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿಗಳನ್ನು ಬಂಧಿಸಿ ಹೆಡೆಮುರಿ ಕಟ್ಟಿದ್ದರು. ಚಾಮರಾಜನಗರದ ಪಿಎಫ್‌ಐ ಕಾರ್ಯಕರ್ತರು ಈ ಹತ್ಯೆಯನ್ನು ಮಾಡಿದ್ದರು. ಸ್ಥಳೀಯನೇ ಆಗಿದ್ದ ಬಂಟ್ವಾಳ ತಾಲೂಕಿನ ಕಾರಾಜೆಯ ಕಲಂಧರ್ ಎಂಬಾತ ಪಿಎಫ್‌ಐ ಕಾರ್ಯಕರ್ತರನ್ನು ಕರೆಸಿ ಶರತ್ ಮಡಿವಾಳನನ್ನು ಕೊಲೆ ಮಾಡಿಸಿದ್ದ.


ಕಮೀಷನರ್ ಸುಧೀರ್‌ಕುಮಾರ್ ರೆಡ್ಡಿ


ಎಸ್ಪಿ ಅರುಣ್

ಕಲಂಧರ್‌ನ ಬಂಧನಕ್ಕೆ ಪೊಲೀಸರು ಪ್ರಯತ್ನ ನಡೆಸುತ್ತಿರುವಾಗಲೇ ಎಸ್ಪಿ ಸುಧೀರ್ ಕುಮಾರ್ ರೆಡ್ಡಿಯವರನ್ನು ಹಠಾತ್ತನೆ ವರ್ಗಾಯಿಸಲಾಗಿತ್ತು. ಕಲಂಧರ್ ಬಂಧನಕ್ಕೆ ಒಳಗಾದರೆ ಶರತ್ ಮಡಿವಾಳನ ಹತ್ಯೆಗೆ ನೈಜ ಕಾರಣವೇನು ಮತ್ತು ಯಾರು ಹತ್ಯೆ ಮಾಡಿಸಿದ್ದಾರೆ ಎಂಬ ಸತ್ಯ ಬಯಲಾಗುತ್ತದೆ ಎಂಬ ಕಾರಣಕ್ಕಾಗಿ ಎಸ್ಪಿಯವರನ್ನು ವರ್ಗಾಯಿಸಲಾಗಿತ್ತು. ಇದೀಗ ಡಿಐಜಿಯಾಗಿ ಪದೋನ್ನತಿ ಹೊಂದಿರುವ ಅವರನ್ನು ಮಂಗಳೂರು ಪೊಲೀಸ್ ಕಮಿಷನರ್ ಆಗಿ ನಿಯೋಜಿಸಲಾಗಿದೆ. ಇದೇ ವೇಳೆ ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿ ಚುರುಕಿನಿಂದ ಕರ್ತವ್ಯ ನಿರ್ವಹಿಸುತ್ತಿದ್ದ ಮತ್ತು ಯಾವುದೇ ವಿವಾದಕ್ಕೆ ಸಿಲುಕದೆ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಯಶಸ್ವಿಯಾಗಿದ್ದಂತಹ ಎಸ್ಪಿ ಯತೀಶ್ ಅವರನ್ನೂ ಅಬ್ದುಲ್ ರಹಿಮಾನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ವರ್ಗಾವಣೆಗೊಳಿಸಲಾಗಿದೆ. ಇದು ಒಂದು ಸಮುದಾಯವನ್ನು ಸಂಪ್ರೀತಗೊಳಿಸಲು ರಾಜ್ಯಸರಕಾರ ಕೈಗೊಂಡ ನಿರ್ಧಾರ ಎಂಬ ಭಾವನೆ ಇದೆ. ಉಡುಪಿಯಲ್ಲಿ ಎಸ್ಪಿಯಾಗಿ 2 ವರ್ಷ ಯಶಸ್ವಿ ಕರ್ತವ್ಯ ನಿರ್ವಹಿಸಿರುವ ಅರುಣ್ ಅವರನ್ನು ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿಯಾಗಿ ನಿಯೋಜಿಸಲಾಗಿದೆ. ಉಡುಪಿ ಎಸ್ಪಿಯಾಗಿ ಈ ಹಿಂದೆ ಕುಂದಾಪುರ ಎಎಸ್ಪಿಯಾಗಿದ್ದ, ಮಂಗಳೂರು ನಗರ ಡಿಸಿಪಿಯಾಗಿದ್ದ, ಹಾಸನ ಎಸ್ಪಿಯಾಗಿದ್ದ ಹರಿರಾಮ್ ಶಂಕರ್ ಅವರನ್ನು ನಿಯೋಜಿಸಲಾಗಿದ್ದು ಅಧಿಕಾರ ಸ್ವೀಕರಿಸಿದ್ದಾರೆ.

## ಶರಣ್ ಪಂಪ್‌ವೆಲ್ ಬಂಧನ, ಬಿಡುಗಡೆ

**ಬ**ಡಗಬೆಳ್ಳೂರು ಗ್ರಾಮದ ಇರಾ ಕೋಡಿಯ ಕಾಂಬೋಡಿ ಎಂಬಲ್ಲಿ ಅಬ್ದುಲ್ ರಹಿಮಾನ್ ಎಂಬ ಯುವಕನನ್ನು ಬರ್ಬರ ರೀತಿಯಲ್ಲಿ ಕೊಚ್ಚಿ ಕೊಲೆಗೈದ ಘಟನೆಯ ಬೆನ್ನಲ್ಲೇ ಮಂಗಳೂರಿನ ಕದ್ರಿ ಠಾಣಾ ಪೊಲೀಸರು ವಿಶ್ವಹಿಂದೂ ಪರಿಷತ್ತಿನ ಪ್ರಾಂತ ಸಹ ಸಂಚಾಲಕ ಶರಣ್ ಪಂಪ್‌ವೆಲ್ ಅವರನ್ನು ವಶಕ್ಕೆ ತೆಗೆದುಕೊಂಡಿದ್ದರು. ಆ ಸಂದರ್ಭದಲ್ಲಿ ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂಬ ವದಂತಿಗಳು



ಶರಣ್ ಪಂಪ್‌ವೆಲ್

ಹರಿದಾಡತೊಡಗಿತ್ತು. ಕದ್ರಿ ಪೊಲೀಸ್ ಠಾಣೆಯ ಮುಂಭಾಗದಲ್ಲಿ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಜಮಾಯಿಸತೊಡಗಿದ್ದರು. ಪೊಲೀಸ್ ಅಧಿಕಾರಿಗಳನ್ನು ವಿಚಾರಿಸಿದಾಗ ಹಳೆಯ ಪ್ರಕರಣ ಒಂದಕ್ಕೆ ಸಂಬಂಧಿಸಿದಂತೆ ವಶಕ್ಕೆ ತೆಗೆದುಕೊಂಡಿರುವುದಾಗಿ ಮಾಹಿತಿ ನೀಡಿದ್ದರು. ಬಜ್ಪೆಯಲ್ಲಿ ಸುಹಾಸ್ ಶೆಟ್ಟಿ ಹತ್ಯೆಯಾದ ಬೆನ್ನಲ್ಲೇ ಮೃತ ದೇಹ ಇರಿಸಲಾಗಿದ್ದ ಎ.ಜೆ. ಆಸ್ಪತ್ರೆಯ ಶವಾಗಾರದ ಎದುರು ಶರಣ್ ಪಂಪ್‌ವೆಲ್ ಅವರು ದಕ್ಷಿಣ ಕನ್ನಡ ಜಿಲ್ಲಾ ಬಂದ್‌ಗೆ ಕರೆ ನೀಡಿದ್ದರು. ಈ ಕರೆಗೆ ಸ್ಪಂದಿಸಿ ಜಿಲ್ಲೆ ಬಂದ್ ಆಗಿತ್ತು. ಇದಕ್ಕೆ ಸಂಬಂಧಿಸಿದಂತೆ ಕದ್ರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಅವರಿಗೆ ಠಾಣೆಗೆ ಹಾಜರಾಗುವಂತೆ 2 ಬಾರಿ ನೋಟೀಸು ನೀಡಲಾಗಿತ್ತು. ಆದರೆ ಅವರು ಠಾಣೆಗೆ ಹಾಜರಾಗದೆ ಆ ಪ್ರಕರಣವನ್ನು ರದ್ದುಗೊಳಿಸಬೇಕೆಂದು ಹೈಕೋರ್ಟಿನ ಮೆಟ್ಟಿಲು ಹತ್ತಿದ್ದರು. ಅಬ್ದುಲ್ ರಹಿಮಾನ್ ಹತ್ಯೆಯಾದ ಸಂದರ್ಭವನ್ನು ಬಳಸಿಕೊಂಡು ಸೃಷ್ಟಿಯಾಗಬಹುದಾದ ಉದ್ವಿಗ್ನತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಪೊಲೀಸರು ವಿಹಿಂಪ ಮುಖಂಡ ಶರಣ್ ಪಂಪ್‌ವೆಲ್‌ರವರನ್ನು ವಶಕ್ಕೆ ಪಡೆದು ನ್ಯಾಯಾಧೀಶರ ಮನೆಗೆ ಹಾಜರು ಪಡಿಸಿರುವಂತಹ ಸಂದರ್ಭದಲ್ಲಿ ಅವರು ಮಧ್ಯಂತರ ಜಾಮೀನು ನೀಡಿ ಬಿಡುಗಡೆಗೊಳಿಸಿದ್ದಾರೆ. ತದನಂತರ ನ್ಯಾಯಾಲಯವು ಅವರಿಗೆ ನಿಯಮಿತ ಜಾಮೀನು ನೀಡಿದೆ. ಪೊಲೀಸರು ಮಾಡಿದಂತಹ ಈ ಎಡವಟ್ಟಿನ ವರ್ತನೆ ಒಂದು ಸಮುದಾಯದಲ್ಲಿ ರೋಷ ಸೃಷ್ಟಿ ಮಾಡಿದೆ. ಇದರ ಪರಿಣಾಮವಾಗಿಯೇ ಮಂಗಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್‌ವಾಲ್ ಅವರ ತಲೆದಂಡವಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದರಿಂದ ಮತ್ತು ಪ್ರಕರಣವನ್ನು ದಾಖಲು ಮಾಡಿಕೊಳ್ಳುವಲ್ಲಿ, ತನಿಖೆ ಮಾಡುವಲ್ಲಿ ಯಾವುದೇ ಲೋಪಗಳು ಕಂಡುಬಾರದೆ ಆರೋಪಿಗಳನ್ನು ಗುರುತಿಸಿ ಬಂಧಿಸುವಂತಹ ಪ್ರಯತ್ನದಲ್ಲಿ ಪೊಲೀಸರು ಯಶಸ್ವಿಯಾಗಿದ್ದರೂ ಸಮುದಾಯದ ರೋಷವನ್ನು ತಣಿಸುವ ಸಲುವಾಗಿ ಜಿಲ್ಲಾ ಎಸ್ಪಿ ಯತೀಶ್ ಅವರನ್ನು ಸರಕಾರ ವರ್ಗಾವಣೆಗೊಳಿಸಿ ಆದೇಶ ನೀಡಿದೆ.

## ಹತ್ಯೆಯ ಹಿಂದೆ ಭರತ್ ಕುಮ್ಡೇಲು?

**ಕೊ**ಳತ್ತಮಜಲು ಮರಳು ವ್ಯಾಪಾರಿ ಅಬ್ದುಲ್ ರಹಮಾನ್ ಹತ್ಯೆಯ ಹಿಂದೆ ಬಜರಂಗ ದಳದ ಪ್ರಮುಖ ಭರತ್ ಕುಮ್ಡೇಲು ಇದ್ದು ಆತನೇ ತನ್ನ ಸಹಚರರ ಮೂಲಕ ಹತ್ಯೆ ಮಾಡಿಸಿದ್ದಾನೆ ಎನ್ನುವಂತಹ ಮಾಹಿತಿಗಳು ಪೊಲೀಸರಿಗೆ ಲಭ್ಯವಾಗಿದೆ. ಫರಂಗಿಪೇಟೆ ಸಮೀಪದ ಮಾರಿಪಳ್ಳ ಎಂಬಲ್ಲಿನ ಕುಮ್ಡೇಲು ಲೂಜಿಯ ಭರತ್ ಕಳೆದ 15 ವರ್ಷಗಳಿಂದ ಹಿಂದೂಪರ ಸಂಘಟನೆಗಳಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದಂತಹ ಯುವಕ. ಕೆಲವು


ಭರತ್ ಕುಮ್ಡೇಲು

ವರ್ಷಗಳ ಹಿಂದೆ ಎಡಪಂಥೀಯ ನಿಲುವು ಹೊಂದಿದ್ದ ಉಪನ್ಯಾಸಕ ಪಟ್ಟಾಭಿರಾಮ ಸೋಮಯಾಜಿಯವರಿಗೆ ದನದ ಸೆಗಣಿಯ ಅಭಿಷೇಕ ಮೂಲಕ ಹೆಸರು ಮಾಡಿದ್ದ. ಹಲವಾರು ಗೋಸಂರಕ್ಷಣೆಯ ಮೂಲಕ ಹೆಸರು ಗಳಿಸಿದ್ದ. ತನ್ನದೇ ಆದ ಯುವಕರ ತಂಡವನ್ನು ಕಟ್ಟಿಕೊಂಡಿದ್ದ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಮುಖ ಕಲ್ಲಡ್ಕ ಪ್ರಭಾಕರ್ ಭಟ್‌ರವರ ಆತ್ಮೀಯ ವಲಯದಲ್ಲಿ ಗುರುತಿಸಿಕೊಂಡಿದ್ದ. ಇಂತಹ ಹಿನ್ನಲೆಯ ಭರತ್ ಕುಮ್ಡೇಲು ಹಲವು ಬಾರಿ ಹೋರಾಟದ ಕಾರಣಕ್ಕಾಗಿ ಜೈಲಿಗೂ ಹೋಗಿ ಬಂದಿದ್ದ. ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ರೌಡಿಶೀಟ್ ತೆರೆಯಲಾಗಿತ್ತು.

ಜೂನ್ 21, 2017ರಂದು ಅಶ್ರಫ್ ಕಲಾಯಿ ಎಂಬ ರಿಕ್ಷಾ ಚಾಲಕನನ್ನು ಬೆಂಜನಪದವಿನ ಕರಾವಳಿ ಸೈಟಿನಲ್ಲಿ ಹಾಡು ಹಗಲೇ ಕೊಲೆಗೈದ ಪ್ರಕರಣಗಳಲ್ಲಿ ಬರತ್ ಕುಮ್ಡೇಲು ಪ್ರಮುಖ ಆರೋಪಿಯಾಗಿದ್ದ. ಅಶ್ರಫ್ ಕಲಾಯಿ ಮಲ್ಲೂರು ಎಸ್‌ಡಿಪಿಐ ಗ್ರಾಮ ಸಮಿತಿಯ ಪ್ರಮುಖನಾಗಿದ್ದ. ಜೂನ್ 21ರಂದು ಬೆಳಿಗ್ಗೆ ಬೀಡಿ ಬ್ರಾಂಚ್ ನಡೆಸುತ್ತಿದ್ದ ಸುಂದರ ಪೂಜಾರಿ ಎಂಬವರನ್ನು ಬೀಡಿ ಸಂಗ್ರಹಕ್ಕಾಗಿ ಬೆಂಜನಪದವು ಕರಾವಳಿ ಸೈಟಿಗೆ ಕರೆದುಕೊಂಡು ಬಂದಿದ್ದ. ಆತ ರಿಕ್ಷಾದಲ್ಲಿ ಕುಳಿತುಕೊಂಡಿದ್ದ. ಈ ಸಂದರ್ಭದಲ್ಲಿ 2 ಬೈಕಿನಲ್ಲಿ ಬಂದ ನಾಲ್ವರು ಆತನ ಮೇಲೆ ತಲವಾರಿನಿಂದ ದಾಳಿ ನಡೆಸಿದ್ದರು. ಬದುಕುವ ಆಸೆಯಿಂದ ಓಡಿದನಾದರೂ ಹಂತಕರು ಬೆನ್ನಟ್ಟಿ ಚಚ್ಚಿದ್ದರು. ನೂರಾರು ಮಂದಿ ನೋಡುತ್ತಿದ್ದಂತೆಯೇ ಅಶ್ರಫ್ ಕಲಾಯಿ ಉಸಿರುಚೆಲ್ಲಿದ್ದ. ಈ ಪ್ರಕರಣದಲ್ಲಿ ಒಳಗೊಂಡಿದ್ದ ಭರತ್ ಕುಮ್ಡೇಲು ಜೈಲಿಗೆ ಹೋಗಿದ್ದ. ಈ ಪ್ರಕರಣದಲ್ಲಿ ಪವನ್ ಕುಮಾರ್ ಯಾನೆ ಪುಂಡ (24), ಸಂತೋಷ್ ಆಲಿಯಾಸ್ ಸಂತು (23), ಶಿವಪ್ರಸಾದ್ ಆಲಿಯಾಸ್ ಶಿವು (24), ರಂಜಿತ್ (28), ಅಭಿನ್ ರೈ ಯಾನೆ ಅಭಿ ತೆಂಕಬೆಲ್ಲೂರು, ಇವರು ಭರತ್ ಕುಮ್ಡೇಲುನೊಂದಿಗೆ ಸೇರಿಕೊಂಡು ಈ ಹತ್ಯೆ ನಡೆಸಿದ್ದರು. ಈ ಪ್ರಕರಣಕ್ಕೆ ಪ್ರತಿಯಾಗಿ ಬಿ.ಸಿ.ರೋಡಿನಲ್ಲಿ ಉದಯ ಲಾಂಡ್ರಿಯನ್ನು ನಡೆಸುತ್ತಿದ್ದ ಶರತ್ ಮಡಿವಾಳನನ್ನು ಕೆಲವೇ ದಿನಗಳಲ್ಲಿ ಚಾಮರಾಜ ನಗರದ ಪಿಎಫ್‌ಐ ಸಂಘಟನೆಯಲ್ಲಿ ಗುರುತಿಸಿಕೊಂಡಿದ್ದ ನಾಲ್ವರು ಬೈಕಿನಲ್ಲಿ ಬಂದು ಹತ್ಯೆ ಮಾಡಿದ್ದರು. ಇಂತಹ ಹಿನ್ನಲೆ ಇರುವಂತಹ ಭರತ್ ಕುಮ್ಡೇಲು ಪ್ರತೀಕಾರಕ್ಕಾಗಿ ಅಬ್ದುಲ್ ರಹಿಮಾನ್‌ನನ್ನು ಹತ್ಯೆ ಮಾಡಿಸಿದ್ದಾನೆ ಎಂಬ ಮಾಹಿತಿಗಳು ಬಯಲಾಗುತ್ತಿದೆ. ಬಜ್ಪೆಯ ಕಿನ್ನಿಪದವಿನಲ್ಲಿ ಭಜರಂಗ ದಳದ ಪ್ರಮುಖನಾಗಿದ್ದ ಸುಹಾಸ್ ಶೆಟ್ಟಿಯನ್ನು ಹತ್ಯೆಗೈದ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಭರತ್ ಕುಮ್ಡೇಲು ಅವರ ಭಾವಚಿತ್ರ ಹಾಕಿ ನೆಕ್ಸ್ಟ್ ಟಾರ್ಗೆಟ್ ಎಂದು ಸಂದೇಶ ಹರಿಯಬಿಡಲಾಗಿತ್ತು. ಇದರಿಂದ ಪ್ರೇರೇಪಿತನಾಗಿ ಭರತ್ ಕುಮ್ಡೇಲು ಆ ಹತ್ಯೆಗೆ ಪ್ರತೀಕಾರವಾಗಿ ಈ ಹತ್ಯೆ ಮಾಡಿಸಿದ್ದಾನೆ ಎನ್ನುವುದಂತೂ ಖಚಿತವಾದಂತಿದೆ.

# ಸೋನಿಯಾ ಗಾಂಧಿ ಅಳಿಯ ರಾಬರ್ಟ್ ವಾದ್ರಾ ಮಾಲೀಕತ್ವದ ಡಿಎಲ್ ಎಫ್ 1100 ಎಕರೆ ಭೂಮಿ ಕದ್ದಿರುವ ಬಗ್ಗೆ ಡಿಸಿಗೆ ದೂರು ನೀಡಿದ ಎನ್‌ಆರ್‌ಆರ್!

**ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ, ವರ್ತೂರು, ವರ್ತೂರು ನರಸೀಪುರ ಮತ್ತು ಪೆದ್ದನಪಾಳ್ಯ ಗ್ರಾಮಗಳಲ್ಲಿರುವ ಸುಮಾರು 10,000 ಕೋಟಿಗಳಿಗೂ ಹೆಚ್ಚು ಮೌಲ್ಯದ 1,100 ಎಕರೆಗಳಷ್ಟು ವಿಸ್ತೀರ್ಣದ ಸರ್ಕಾರೀ ಸ್ವತ್ತುಗಳಿಗೆ ಮತ್ತು ದಾಖಲೆಗಳೇ ಇಲ್ಲದ ಸ್ವತ್ತುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಯಶಸ್ವಿ ಆಗಿದ್ದಾರೆ!!! ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ ಗ್ರಾಮದ ಸರ್ವೇ ನಂಬರ್ 01 ರಿಂದ 99, ವರ್ತೂರು ಗ್ರಾಮದ ಸರ್ವೇ ನಂಬರ್ 07, 08, 09, 10, ವರ್ತೂರು ನರಸೀಪುರ ಗ್ರಾಮದ ಸರ್ವೇ ನಂಬರ್ 01 ರಿಂದ 35 ಮತ್ತು ಪೆದ್ದನಪಾಳ್ಯ ಗ್ರಾಮದ ಸರ್ವೇ ನಂಬರ್ 17, 18, 19, 20ರಲ್ಲಿರುವ ಸುಮಾರು 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳಿಗೆ DLF ಸಂಸ್ಥೆಯು ಬೇಲಿ ಹಾಕಿದೆ!!! DLF ಸಂಸ್ಥೆಯು ಕಬಳಿಸಿರುವ 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳ ಪೈಕಿ ಶೇ. 90%ರಷ್ಟು ಸ್ವತ್ತುಗಳು ಸರ್ಕಾರೀ ಸ್ವತ್ತುಗಳಾಗಿವೆಯಲ್ಲದೇ, ಇನ್ನುಳಿದ ಶೇ.10%ರಷ್ಟು ಸ್ವತ್ತುಗಳಿಗೆ ಯಾವುದೇ ದಾಖಲೆಗಳು ಇಲ್ಲವೆಂಬುದು ಅತ್ಯಂತ ಸ್ಪಷ್ಟವಾಗಿದೆ!!!**

AICC ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಅವರ ಅಳಿಯ ರಾಬರ್ಟ್ ವಾದ್ರಾ ಮಾಲೀಕತ್ವದ DLF ಸಂಸ್ಥೆ ಬಹಳ ವರ್ಷಗಳ ಹಿಂದೆಯೇ ಬೆಂಗಳೂರು ಮಹಾನಗರಿಗೆ ಕಾಲಿಟ್ಟು ನೂರಾರು ಎಕರೆ ಭೂ ವ್ಯವಹಾರ ನಡೆಸಿ ಬನ್ನೇರುಘಟ್ಟ ಹುಳಿಮಾವು ಭಾಗದಲ್ಲಿ DLF ಸಿಟಿಯನ್ನು ನಿರ್ಮಿಸಿರುವುದು ಗೊತ್ತಿರುವ ವಿಚಾರ.

ಇದೀಗ ಬಿಜೆಪಿ ಧುರೀಣರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ಎನ್.ಆರ್ ರಮೇಶ್ ಅವರು ಸದರಿ ಈಡೊಓ ಸಂಸ್ಥೆ ಎಸಗಿದೆ ಎನ್ನಲಾದ ಸರ್ಕಾರಕ್ಕೆ ಸೇರಿದ 1100 ಎಕರೆ 'ಭೂ'ಗಳ್ಳತನದ ಬಗ್ಗೆ ದಾಖಲೆ ಪತ್ರಗಳನ್ನು ಬಿಡುಗಡೆ ಗೊಳಿಸಿ, ವಾದ್ರಾ ವಿರುದ್ಧ ಇಸವಿ 2018 ರಲ್ಲಿಯೇ ಜಿಲ್ಲಾಧಿಕಾರಿಯವರಿಗೆ ದೂರು ಸಲ್ಲಿಸಿದ್ದಾರಂತೆ! ಆದರೆ, ಅವರಿಂದ ಸರಿಯಾಗಿ ತನಿಖೆ ನಡೆದಿಲ್ಲವಂತೆ!! ಹೀಗಾಗಿ, ದಿನಾಂಕ 28-05-2025 ರಂದು ಶ್ರೀಯುತರು ಪತ್ರಿಕಾಗೋಷ್ಠಿ ನಡೆಸಿ ಮಾಧ್ಯಮಗಳಿಗೂ ಸಹ ದಾಖಲೆ ಸಹಿತ ಸುದ್ದಿಯನ್ನು ಬಿಡುಗಡೆಗೊಳಿಸಿದ್ದಾರೆ!! ಅಂದಹಾಗೆ,



ಅವರ ಪತ್ರದಲ್ಲಿ ಏನಿದೆ ಎಂಬುದನ್ನ ನೋಡುವುದಾದರೆ.....

**ಮಾಧ್ಯಮದ ಆತ್ಮೀಯರೇ,**

ಇದು ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯು 10,000 ಕೋಟಿ ಬೆಲೆಬಾಳುವ 1,100 ಎಕರೆ ಸರ್ಕಾರೀ ಸ್ವತ್ತುಗಳನ್ನು ಕಬಳಿಸಿರುವ ಬೃಹತ್ ಭೂ ಹಗರಣ ಈಗಾಗಲೇ ಬೆಂಗಳೂರು ಉತ್ತರ ಭಾಗದಲ್ಲೊಂದು ಮತ್ತು ದಕ್ಷಿಣ ಭಾಗದಲ್ಲೊಂದು ಬೃಹತ್ ಭೂ ಕಬಳಿಕೆಹಗರಣದಲ್ಲಿ ಭಾಗಿಯಾಗಿರುವ ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯ ವಿರುದ್ಧ ಹಲವು ಪ್ರಕರಣಗಳು / ದೂರುಗಳು ದಾಖಲಾಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ.


ಆದರೆ, ಈ ಎರಡೂ ಹಗರಣಗಳನ್ನು ಮೀರಿಸುವಂತೆ ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯು ಬೆಂಗಳೂರು ನಗರದ ಪಶ್ಚಿಮ ಭಾಗದಲ್ಲಿ ರಾಜ್ಯದ ಇತಿಹಾಸದಲ್ಲಿಯೇ ಅತಿ ದೊಡ್ಡದಾದ ಬೃಹತ್ ಸರ್ಕಾರಿ ಭೂ ಕಬಳಿಕೆಯನ್ನು ಮಾಡಿರುವುದು ದಾಖಲೆಗಳಿಂದ ದೃಢಪಟ್ಟಿದೆ !!!

2004ಕ್ಕೂ ಮೊದಲು ಸಣ್ಣ ಪ್ರಮಾಣದ ಲೋಹದ ವಸ್ತುಗಳ ವ್ಯಾಪಾರಿಯಾಗಿದ್ದ ರಾಬರ್ಟ್ ವಾದ್ರಾ, 2004 ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್(ಐ) ಪಕ್ಷದ ನೇತೃತ್ವದ UPA ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ತನ್ನ ಅತ್ತೆ ಶ್ರೀಮತಿ. ಸೋನಿಯಾಗಾಂಧಿಯವರ ಪ್ರಭಾವವನ್ನು ಬಳಸಿಕೊಂಡು Real Estate ಉದ್ದಿಮೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಲ್ಲದೇ, ಸುಮಾರು 14 ಬೇರೆ ಬೇರೆ ಹೆಸರುಗಳ ಸಂಸ್ಥೆಗಳಲ್ಲಿ ತಮ್ಮ ಪಾಲುದಾರಿಕೆಯನ್ನು ಸೃಷ್ಟಿಸಿಕೊಂಡರು !!!

ಆಗ ಕಾಂಗ್ರೆಸ್(ಐ) ಪಕ್ಷ ಅಧಿಕಾರದಲ್ಲಿದ್ದ ವಿವಿಧ ರಾಜ್ಯಗಳಲ್ಲಿ ತಮ್ಮ Real Estate ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು, ರಾಬರ್ಟ್ ವಾದ್ರಾ ರವರ ಪಾಲುದಾರಿಕೆಯ ಸಂಸ್ಥೆಗಳು ಸಾವಿರಾರು ಎಕರೆ ಸರ್ಕಾರೀ ಭೂ ಕಬಳಿಕೆ ನಡೆಸಿರುವುದು ಜಗಜ್ಜಾಹೀರಾಗಿವೆ.

ಹರಿಯಾಣದ ಹಿರಿಯ IAS ಅಧಿಕಾರಿ ಅಶೋಕ್ ಖೇಮ್ಕಾರವರು ರಾಬರ್ಟ್ ವಾದ್ರಾ ರವರು DLF ಮತ್ತು ಇನ್ನಿತರ ಬೇನಾಮಿ ಸಂಸ್ಥೆಗಳ ಹೆಸರಿನಲ್ಲಿ ನಡೆಸಿರುವ ಸರ್ಕಾರಿ ಭೂ ಕಬಳಿಕೆ ಹಗರಣಗಳನ್ನು ಒಂದೊಂದಾಗಿ ಬಯಲು ಮಾಡಿದ್ದರು.

ಇದಾದ ನಂತರ ಸರ್ವೋಚ್ಚನ್ಯಾಯಾಲಯದ ಆದೇಶದಂತೆ ರಚನೆಯಾದ ಜಸ್ಟಿಸ್ ಎಸ್.ಎನ್. ಧಿಂಗ್ರ (Justice S.N. Dhingra) ನೇತೃತ್ವದ ಆಯೋಗವು ಸಲ್ಲಿಸಿರುವ ಮಧ್ಯಂತರ ವರದಿಯ ಆಧಾರದಲ್ಲಿ ಜಾರಿ ನಿರ್ದೇಶನಾಲಯವು (Enforcement Directorate) ರಾಬರ್ಟ್ ವಾದ್ರಾ ಸೇರಿದಂತೆ DLF ಸಂಸ್ಥೆಯ ಹಲವರ ವಿರುದ್ಧ 13ಕ್ಕೂ ಹೆಚ್ಚು FIR ಗಳನ್ನು ದಾಖಲಿಸಿ ತನಿಖೆಯನ್ನು ನಡೆಸುತ್ತಿದೆ !!!



Page 1 of 7

ರಮೇಶ್ ಎನ್.ಆರ್.

ಮೊ : 9880011999

e-mail : rameshnrbbmp@gmail.com

ವಿಷಯ : "ರಾಬರ್ಟ್ ವಾದ್ರಾ ಪಾಲುದಾರಿಕೆಯ DLF ಸಂಸ್ಥೆಯು ₹ 10,000 ಕೋಟಿ ಬೆಲೆಬಾಳುವ 1,100 ಎಕರೆ ಸರ್ಕಾರೀ ಸ್ವತ್ತುಗಳನ್ನು ಕಬಳಿಸಿರುವ ಹಗರಣದ ಬಗ್ಗೆ ದೂರು"

ತಾವರೆಕೆರೆ ಹೋಬಳಿಯಲ್ಲಿ 10,000 ಕೋಟಿ ಮೌಲ್ಯದ 1,100 ಎಕರೆ ಸರ್ಕಾರಿ ಸ್ವತ್ತುಗಳಿಗೆ ಬೇಲಿ 2013 ರಿಂದ 2018ರ ಅವಧಿಯಲ್ಲಿ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಭ್ರಷ್ಟಾತಿಭ್ರಷ್ಟ ಸಿದ್ದರಾಮಯ್ಯ ನವರ ನೇತೃತ್ವದ ಸರ್ಕಾರದ ಮೇಲೆ ತನ್ನ ಪ್ರಭಾವವನ್ನು ಇನ್ನಿಲ್ಲದಂತೆ ಬಳಸಿರುವ ಸೋನಿಯಾಗಾಂಧಿಯವರ ಮುದ್ದಿನ ಅಳಿಯ DLF ಸಂಸ್ಥೆಯ ಹೆಸರಿನಲ್ಲಿ ಯಶವಂತಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ, ವರ್ತೂರು, ವರ್ತೂರು ನರಸೀಪುರ ಮತ್ತು ಪೆದ್ದನಪಾಳ್ಯ ಗ್ರಾಮಗಳಲ್ಲಿರುವ ಸುಮಾರು 10,000 ಕೋಟಿಗಳಿಗೂ ಹೆಚ್ಚು ಮೌಲ್ಯದ 1,100 ಎಕರೆಗಳಷ್ಟು ವಿಸ್ತೀರ್ಣದ ಸರ್ಕಾರೀ ಸ್ವತ್ತುಗಳಿಗೆ ಮತ್ತು ದಾಖಲೆಗಳೇ ಇಲ್ಲದ ಸ್ವತ್ತುಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಯಶಸ್ವಿ ಆಗಿದ್ದಾರೆ!!!





ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿಯ ಗಂಗೇನಹಳ್ಳಿ ಗ್ರಾಮದ ಸರ್ವೇ ನಂಬರ್ 01ರಿಂದ 99, ವರ್ತೂರು ಗ್ರಾಮದ ಸರ್ವೇ ನಂಬರ್ 07, 08, 09, 10, ವರ್ತೂರು ನರಸೀಪುರ ಗ್ರಾಮದ ಸರ್ವೇ ನಂಬರ್ 01 ರಿಂದ 35 ಮತ್ತು ಪೆದ್ದನಪಾಳ್ಯ ಗ್ರಾಮದ ಸರ್ವೇ ನಂಬರ್ 17, 18, 19, 20 ರಲ್ಲಿರುವ ಸುಮಾರು 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳಿಗೆ ಈಡೊಓ ಸಂಸ್ಥೆಯು ಬೇಲಿ ಹಾಕಿದೆ !!!

**ಬಹುತೇಕ ಸರ್ಕಾರೀ ಸ್ವತ್ತುಗಳು**

DLF ಸಂಸ್ಥೆಯು ಕಬಳಿಸಿರುವ 1,100 ಎಕರೆಗಳಷ್ಟು ವಿಸ್ತೀರ್ಣದ ಸ್ವತ್ತುಗಳ ಪೈಕಿ ಶೇ. 90% ರಷ್ಟು ಸ್ವತ್ತುಗಳು ಸರ್ಕಾರೀ ಸ್ವತ್ತುಗಳಾಗಿವೆಯಲ್ಲದೇ, ಇನ್ನುಳಿದ ಶೇ.10% ರಷ್ಟು ಸ್ವತ್ತುಗಳಿಗೆ ಯಾವುದೇ ದಾಖಲೆಗಳು ಇಲ್ಲವೆಂಬುದು ಅತ್ಯಂತ ಸ್ಪಷ್ಟವಾಗಿದೆ.

ತಿಪ್ಪಗೊಂಡನಹಳ್ಳಿ ಜಲಾಶಯವನ್ನು ಸೇರಿಕೊಳ್ಳುವ ಅರ್ಕಾವತಿ ನದಿಯು ಹರಿಯುತ್ತಿರುವ ಸಮೃದ್ಧ ಪ್ರದೇಶಗಳಾಗಿರುವ ಗಂಗೇನಹಳ್ಳಿ, ವರ್ತೂರು, ವರ್ತೂರು ನರಸೀಪುರ ಮತ್ತು ಪೆದ್ದನಪಾಳ್ಯ ಗ್ರಾಮಗಳ ವ್ಯಾಪ್ತಿಯ ಪ್ರದೇಶಗಳಿಗೆ ಮಾರುಕಟ್ಟೆಯಲ್ಲಿ ದೊಡ್ಡಮಟ್ಟದ ಬೆಲೆಯಿದೆ.

ಈ ಪ್ರದೇಶಗಳಲ್ಲಿನ ನೆಲದ ಬೆಲೆ ಚ.ಅಡಿಯೊಂದಕ್ಕೆ ಕೇವಲ 2,100/- ಎಂದೇ ಲೆಕ್ಕ ಹಾಕಿದರೂ ಸಹ ಎಕರೆಯೊಂದಕ್ಕೆ 9,14,76,000/- (ಒಂಬತ್ತು ಕೋಟಿ ಹದಿನಾಲ್ಕು ಲಕ್ಷದ ಎಪ್ಪತ್ತಾರು ಸಾವಿರ) ಗಳಂತೆ ಒಟ್ಟು 1,110 ಎಕರೆ ವಿಸ್ತೀರ್ಣದ ಪ್ರದೇಶಕ್ಕೆ ಸುಮಾರು 10,153,83, 60,000/- (ಹತ್ತು ಸಾವಿರದ ಒಂದು ನೂರಾ ಐವತ್ತಮೂರು ಕೋಟಿ ಎಂಬತ್ತಮೂರು ಲಕ್ಷದ ಅರವತ್ತು ಸಾವಿರ) ಗಳಾಗುತ್ತದೆ.



**ಎಲ್ಲಿಯ ಉತ್ತರ ಭಾರತೀಯರು ಎಲ್ಲಿಯ ತಾವರೆಕೆರೆ**

ಬೆಂಗಳೂರು ದಕ್ಷಿಣ ತಾಲ್ಲೂಕು ವ್ಯಾಪ್ತಿಯ ಈ ನಾಲ್ಕು ಗ್ರಾಮಗಳಲ್ಲಿನ ಸ್ವತ್ತುಗಳಿಗೆ ಸಂಬಂಧಿಸಿದ Mutation Register ಗಳೆಲ್ಲದರಲ್ಲಿ ಉತ್ತರ ಭಾರತೀಯರ ಹೆಸರುಗಳು ನಮೂದಾಗಿರುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ.

1984ಕ್ಕೆ ಹಿಂದಿನಿಂದಲೂ ಸಣ್ಣ ಮಟ್ಟದ ಬೇಸಾಯ/ಪಶುಸಂಗೋಪನೆ ಮಾಡಿಕೊಂಡು ಬರುತ್ತಿರುವ ಜಮೀನು ರಹಿತ ರೈತರಿಗೆ ಅವರವರ ಸಾಗುವಳಿ ಚೀಟಿಗಳ ಆಧಾರದಲ್ಲಿ 03 ರಿಂದ 04 ಎಕರೆಗಳಷ್ಟು ಸರ್ಕಾರೀ ಜಮೀನುಗಳನ್ನು ಮಾನವೀಯತೆಯ ಆಧಾರದಲ್ಲಿ ಮಂಜೂರು ಮಾಡುವುದು ಆಯಾ ಜಿಲ್ಲಾಡಳಿತದ ಅಧಿಕಾರ ವ್ಯಾಪ್ತಿಗೆ ಬರುವಂತಹ ವಿಷಯವಾಗಿರುತ್ತದೆ.

ಸ್ಥಳೀಯ ಗ್ರಾಮಸ್ಥರಲ್ಲದ ಜನರಿಗೆ ಮತ್ತು ಆಯಾ ಗ್ರಾಮಗಳ ಸರ್ಕಾರೀ ಜಮೀನುಗಳಲ್ಲಿ ವ್ಯವಸಾಯ ಮಾಡುವ ಬಗ್ಗೆ ಸಾಗುವಳಿ ಚೀಟಿ ಹೊಂದಿಲ್ಲದ ಜನರಿಗೆ ಯಾವುದೇ ಕಾರಣಕ್ಕೂ ಸರ್ಕಾರೀ ಜಮೀನುಗಳನ್ನು ಹಂಚಿಕೆ ಮಾಡುವುದಾಗಲೀ ಅಥವಾ Mutation Register ಗಳನ್ನು ನೀಡುವುದಾಗಲೀ ಮಾಡುವುದು ಕಾನೂನು ರೀತ್ಯಾ ಅಪರಾಧವಾಗಿರುತ್ತದೆ.

ಆದರೆ, ಈ ನಾಲ್ಕು ಗ್ರಾಮಗಳ ಸರ್ಕಾರೀ ಜಮೀನುಗಳಿಗೆ ಸಂಬಂಧಿಸಿದಂತೆ DLF ಸಂಸ್ಥೆಯ ಮುಖ್ಯಸ್ಥ ಕೆ.ಪಿ. ಸಿಂಗ್ ಸೇರಿದಂತೆ, 1) ಆರ್.ಕೆ. ಬುಧವಾರ್ 2) ಚಾದರಿ ಲಾಲ್ ಚಂದ್ 3) ಬಿ.ಎಸ್. ಅಹುವಾಲ್ಯ 4) ಮನಜಿತ್ ಸಿಂಗ್ 5) ಜೆ.ಜೆ.ಡಿ. ಲೋಬೋ 6) ಅರುಣ್ ಕುಮಾರ್

☞10

7 ☜

ಸೇನ್ 7) ಭೂಪೇಂದ್ರ ಸಿಂಗ್ 8) ಆರ್.ಕೆ. ಖನ್ನಾ 9) ಸುಖವಂತ್ ಸಿಂಗ್ 10) ಸವಿತ ಸುಖವಂತ್ ಸಿಂಗ್ 11) ರಮೇಶ್ ಚಂದ್ರ ಅಗರ್‌ವಾಲ್ 12) ಮಂಜುದೇವಿ ಅಗರ್‌ವಾಲ್ 13) ಶಮೀರ್ ನಂದ 14) ಬಲದೇವ್ ಸಿಂಗ್ 15) ಎ.ಜಿ. ಮಂಜಿತ್ ಕೌರ್, 16) ಪ್ರೇಮತ್ ಸಿಂಗ್ 17) ಹಿತಲಾಲ್ ವಾಡಿ 18) ಎ.ಆರ್. ಪಂಡಿತ್ 19) ಜಗದೀಶ್ ಸಿಂಗ್ 20) ಯಶವಂತ್ 21) ಸುರೇಖ ಅಹುಜಾ 22) ಪುರುಷೋತ್ತಮ ಅಹುಜಾ 23) ವಿಮಲ್ ಜಿತ್ ಸಿಂಗ್ 24) ಕುಲಭೂಷಣ್ ಮೆಹತಾ 25) ಪ್ರಭೇಂದ್ರ ಭಾನು 26) ಸತ್ಯ ಮೋಹನ್ 27) ವೈ.ಕೆ. ಮಾಳ್ವೆ 28) ಲಾಲ್ ಶರ್ಮ 29) ವಿನೋದ್ ಚಂದಿಯಾರ್ 30) ಎ.ಜಿ. ಪಂಬತ್ ಕರೆ ಮೊದಲಾದ ಹೆಸರುಗಳಲ್ಲಿ Mutation Register ಗಳನ್ನು ಪಡೆದುಕೊಂಡಿರುವವರೆಲ್ಲರೂ ಉತ್ತರ ಭಾರತೀಯರು ಎಂಬುದು ಅವರವರ ಹೆಸರುಗಳಲ್ಲೇ ಖಚಿತವಾಗುತ್ತದೆ. ಹಾಗೆಯೇ ಅವರೆಲ್ಲರೂ DLF ಸಂಸ್ಥೆಯ ನಿರ್ದೇಶಕರು ಮತ್ತು ಸದಸ್ಯರುಗಳಾಗಿರುವುದೂ ಸಹ ಧೃಢಪಡುತ್ತದೆ. ಇವರುಗಳಲ್ಲದೇ, ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವ ಕೆಲವು ಸ್ಥಳೀಯರ ಹೆಸರುಗಳಲ್ಲಿಯೂ ಸಹ ನಕಲಿ Mutation Register ಗಳನ್ನು DLF ಸಂಸ್ಥೆಯವರು ಮಾಡಿಸಿದ್ದಾರೆ.

**ಅಪಾರ ಪ್ರಮಾಣದ ಹಣ ಪಡೆದಿರುವ ಭ್ರಷ್ಟ ಅಧಿಕಾರಿಗಳು**

2013 ರಿಂದ 2018ರ ಅವಧಿಯಲ್ಲಿ ಕಾರ್ಯ ನಿರ್ವಹಿಸಿರುವ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ದಕ್ಷಿಣ ತಾಲ್ಲೂಕು ತಹಸೀಲ್ದಾರ್‌ಗಳು, ಉಪ ತಹಸೀಲ್ದಾರ್‌ಗಳು, ಕಂದಾಯ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಿಗರು ಈಔಊ ಸಂಸ್ಥೆಯಿಂದ ತಿನ್ನಬಾರದ್ದನ್ನು ತಿಂದು, ಇಷ್ಟೊಂದು ದೊಡ್ಡ ಮೊತ್ತದ ಅಮೂಲ್ಯ ಸರ್ಕಾರೀ ಸ್ವತ್ತುಗಳಿಗೆ ನಕಲಿ Mutation



Register ಗಳನ್ನು ಮತ್ತು ಖಾತಾಗಳನ್ನು ಮಾಡಿಕೊಟ್ಟುಬಿಟ್ಟಿದ್ದಾರೆ!!!

ದುಡ್ಡು ಎಂಬ ಆಕರ್ಷಣೆಗೆ ಒಳಗಾಗಿ ತಮ್ಮ ತಾಯಿ - ತಂದೆಯರನ್ನು ಬೇಕಾದರೂ ಮಾರಾಟ ಮಾಡುವ ಇಂತಹ ಭ್ರಷ್ಟ ಅಧಿಕಾರಿಗಳ ಲಜ್ಜೆಗೇಡಿತನದಿಂದಲೇ ಬೆಂಗಳೂರು ನಗರದ ಲಕ್ಷಾಂತರ ಕೋಟಿ ಮೌಲ್ಯದ ಸರ್ಕಾರೀ ಸ್ವತ್ತುಗಳನ್ನು ಈಗಾಗಲೇ ನಾವು ಕಳೆದುಕೊಂಡಿದ್ದೇವೆ.

**ಸರ್ಕಾರೀ ಸ್ವತ್ತುಗಳನ್ನು ನಿರಂತರವಾಗಿ ಮಾರಾಟ ಮಾಡುತ್ತಿರುವ DLF ಸಂಸ್ಥೆ**

ಭ್ರಷ್ಟ ಅಧಿಕಾರಿಗಳ ಸಹಾಯದಿಂದ ಕಬಳಿಸಲಾಗಿರುವ 1,100 ಎಕರೆಗಳಷ್ಟು ವಿಸ್ತೀರ್ಣದ ಬೃಹತ್ ಮಟ್ಟದ ಸರ್ಕಾರೀ ಸ್ವತ್ತುಗಳನ್ನು DLF ಸಂಸ್ಥೆಯ ನಿರ್ದೇಶಕರು/ ಸದಸ್ಯರು ಯಾವುದೇ ಅಂಜಿಕೆಯಿಲ್ಲದೆ ಕಾನೂನು ಬಾಹಿರವಾಗಿ ಒಂದೊಂದಾಗಿ ಮಾರಾಟ ಮಾಡಿಕೊಂಡು ಬರುತ್ತಿದ್ದಾರೆ !!! ಹೀಗೆ ಅಕ್ರಮವಾಗಿ ಮಾರಾಟ ಮಾಡುತ್ತಿರುವ DLF ಸಂಸ್ಥೆ ಮತ್ತದರ ನಿರ್ದೇಶಕರು / ಸದಸ್ಯರು, ತಮಗೆ ಈ ಸ್ವತ್ತುಗಳು ಬಂದಿದ್ದಾದರೂ ಹೇಗೆ ? ಎಂಬ ವಿವರಗಳನ್ನು ಕರಾರು ಪತ್ರಗಳಲ್ಲಾಗಲೀ ಅಥವಾ ನೊಂದಣಿ ಪತ್ರಗಳಲ್ಲಾಗಲೀ ತೋರಿಸದೇ ಇರುವುದನ್ನು ನಾವುಗಳು ಗಮನಿಸಬಹುದಾಗಿದೆ.

ತಾವರೆಕೆರೆ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ Sub&Registrar ಗಳಾಗಲೀ, ಅಧೀಕ್ಷಕರಾಗಲೀ ಅಥವಾ ಇತರೆ ಅಧಿಕಾರಿಗಳಾಗಲೀ ಯಾವುದೇ ದಾಖಲೆಗಳನ್ನು ಪರಿಶೀಲಿಸದೆಯೇ ಮತ್ತು ಹಿಂದೆ-ಮುಂದೆ ಆಲೋಚಿಸದೆಯೇ ಈ ಸರ್ಕಾರೀ ಸ್ವತ್ತುಗಳ ಕಾನೂನು ಬಾಹಿರ ಮಾರಾಟ ಪ್ರಕ್ರಿಯೆಗೆ ಅಧಿಕೃತ ಛಾಪನ್ನು ಒತ್ತುತ್ತಿದ್ದಾರೆ !!! ಈ ಎಲ್ಲ ಅಧಿಕಾರಿಗಳು DLF ಸಂಸ್ಥೆಯಿಂದ ಅಪಾರ ಪ್ರಮಾಣದ ಹಣವನ್ನು ಲಂಚದ ರೂಪದಲ್ಲಿ ಪಡೆದಿರುವುದೂ ಸಹ ಇಲ್ಲಿ ಅತ್ಯಂತ ಸ್ಪಷ್ಟವಾಗಿದೆ!!!

**ಆದಾಯ ತೆರಿಗೆ ದಾಖಲೆಗಳಲ್ಲಿ ತೋರಿಸಿಯೇ ಇಲ್ಲ**

ವಿಚಿತ್ರವೆಂದರೆ, ಇಷ್ಟೊಂದು ಬೃಹತ್ ಪ್ರಮಾಣದ ಸ್ವತ್ತಿನ ಮೇಲೆ ತನ್ನ ಮಾಲೀಕತ್ವವನ್ನು ತೋರಿಸುತ್ತಿರುವ DLF ಸಂಸ್ಥೆಯು, ತನ್ನ ಸಂಸ್ಥೆಗೆ ಸಂಬಂಧಿಸಿದ ಆದಾಯ ತೆರಿಗೆ ದಾಖಲೆಗಳಲ್ಲಿ ಈ ಸ್ವತ್ತಿನ ಉಲ್ಲೇಖವನ್ನೇ ಮಾಡದಿರುವುದು, ಈ ಸಂಸ್ಥೆಯು ವಂಚನೆಯ ಕಾರ್ಯಗಳಿಗೆ ಮತ್ತಷ್ಟು ಪುಷ್ಟಿ ನೀಡುತ್ತದೆ !!! ಈ ಅಂಶವನ್ನು ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿದ್ದೇ ಆದಲ್ಲಿ DLF ಸಂಸ್ಥೆಯು ತೀವ್ರ ಸಂಕಷ್ಟದಲ್ಲಿ ಮತ್ತೊಮ್ಮೆ ಸಿಲುಕುವುದರಲ್ಲಿ ಸಂದೇಹವೇ ಇಲ್ಲ!!! ಇದಲ್ಲದೇ, ಈ ಬೃಹತ್ ಸ್ವತ್ತಿನ ಮೇಲೆ ತಮ್ಮ ಹಿಡಿತವನ್ನು ಸಾಧಿಸಲು DLF ಸಂಸ್ಥೆಯು ಮತ್ತೊಂದು ಕಾನೂನುಬಾಹಿರ ಹೆಜ್ಜೆಯನ್ನು ಇಟ್ಟಿದೆ. ನ್ಯಾಯಾಲಯದ ವ್ಯವಸ್ಥೆಗಳನ್ನೇ ತನ್ನ ತಾಳಕ್ಕೆ ತಕ್ಕಂತೆ ಬಳಸಿಕೊಳ್ಳುವಂತಹ ಗುಳ್ಳೆನರಿಯ ಹೆಜ್ಜೆಯನ್ನಿಟ್ಟಿರುವ DLF ಸಂಸ್ಥೆಯ ನಿರ್ದೇಶಕರು / ಸದಸ್ಯರುಗಳು ಖುದ್ದು ತಾವೇ ಮಾಗಡಿಯ JMFC ನ್ಯಾಯಾಲಯದ Senior Civil Judge ಪೀಠದಲ್ಲಿ ಕೆಲವು ಮೂಲದಾವೆಗಳನ್ನು ಹೂಡಿದ್ದಾರೆ.

ಮೂಲದಾವೆ (OS) ಸಂಖ್ಯೆ: 389/2016 ಮತ್ತು 390/2016 ಪ್ರಕರಣಗಳನ್ನು ತಮ್ಮ ವಕೀಲರ ಮೂಲಕ ಈ ನ್ಯಾಯಲಯದಲ್ಲಿ ದಾಖಲಿಸಿರುವ DLF ಸಂಸ್ಥೆಯು ಪ್ರತಿವಾದಿಗಳಿಲ್ಲದ ಸನ್ನಿವೇಶವನ್ನು ಸೃಷ್ಟಿಸಿ, ಇಡೀ ಸ್ವತ್ತಿಗೆ Ex&party Decree ಆದೇಶವನ್ನು ಪಡೆದುಕೊಳ್ಳಲು ದೊಡ್ಡ ಸಂಚನ್ನು ರೂಪಿಸಿರುವುದು ಅತ್ಯಂತ ಸ್ಪಷ್ಟವಾಗಿದೆ!!!

**ನಿಜಕ್ಕೂ ಜಿಲ್ಲಾಡಳಿತಕ್ಕೆ ಇಚ್ಛಾಶಕ್ತಿ ಇದ್ದರೆ,,,,,**

ಸುಮಾರು 10,000 ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ 1,100 ಎಕರೆಗಳಷ್ಟು ವಿಸ್ತೀರ್ಣದ ಅಮೂಲ್ಯ ಸರ್ಕಾರೀ ಸ್ವತ್ತುಗಳನ್ನು ಉಳಿಸಿಕೊಳ್ಳಬೇಕೆಂಬ ಇಚ್ಛೆ ಜಿಲ್ಲಾಡಳಿತಕ್ಕಾಗಲೀ ಅಥವಾ ರಾಜ್ಯ ಸರ್ಕಾರದ ಕಂದಾಯ ಇಲಾಖೆಗಾಗಲೀ ಇದ್ದದ್ದೇ ಆದಲ್ಲಿ, ಈ ಕೆಳಗಿನ ಕ್ರಮಗಳನ್ನು ಜರೂರಾಗಿ ತೆಗೆದುಕೊಳ್ಳಬೇಕಿದೆ.

1) DLF ಸಂಸ್ಥೆ ಬೇಲಿ ಹಾಕಿರುವ / ಹಾಕುತ್ತಿರುವ ನಾಲ್ಕು ಗ್ರಾಮಗಳ ಸರ್ವೇ ನಂಬರುಗಳ ಜಮೀನುಗಳ ILRR (Index of land ಮತ್ತು Record of Rights) ದಾಖಲೆಗಳನ್ನು ಪಾರದರ್ಶಕವಾಗಿ ಪರಿಶೀಲಿಸುವುದು.

2) ಈ ಸ್ವತ್ತುಗಳಿಗೆ ಸಂಬಂಧಿಸಿದಂತೆ 1965 ರಿಂದ 2018 ರವರೆಗಿನ ಕೈ ಬರಹದ ಪಹಣಿಗಳನ್ನು ಪರಿಶೀಲಿಸುವುದು,

3) ಈ ಸ್ವತ್ತುಗಳಿಗೆ ಸಂಬಂಧಿಸಿದ ಮೂಲ ಖೇತುವಾರು ಮತ್ತು ಆಕಾರ್ ಬಂದ್ ದಾಖಲೆಗಳನ್ನು ಪರಿಶೀಲಿಸುವುದು.

4) ಈ ಸ್ವತ್ತುಗಳಿಗೆ ಸಂಬಂಧಿಸಿದ Mysore Settlement Copyಗಳನ್ನು ಪರಿಶೀಲಿಸುವುದು.

5) ಈ ಸ್ವತ್ತುಗಳಿಗೆ ಸಂಬಂಧಿಸಿದ ಇನಾಂ ಡಿಸಿ ಆದೇಶಗಳ ದಾಖಲೆಗಳನ್ನು ಪರಿಶೀಲಿಸುವುದು.

6) ಈ ಸ್ವತ್ತುಗಳಿಗೆ ಸಂಬಂಧಿಸಿದ ಕರ್ದಾ ಪ್ರತಿಗಳ ದಾಖಲೆಗಳನ್ನು ಪರಿಶೀಲಿಸುವುದು.

ಮೇಲೆ ತಿಳಿಸಿರುವ ಆರು ವಿಧದ ನೈಜ ದಾಖಲೆಗಳನ್ನು ಕಂದಾಯ ಇಲಾಖೆ ಮತ್ತು ಜಿಲ್ಲಾಧಿಕಾರಿಗಳ ಕಛೇರಿಯು ತಮ್ಮ ತಮ್ಮ ಅಧಿಕೃತ web&site ಗಳಲ್ಲಿ ಪ್ರಕಟಿಸುವ ಧೈರ್ಯವನ್ನು ಮಾಡಿದಾಗ ಮಾತ್ರ ಈಔಊ ಸಂಸ್ಥೆಯ ಅಥವಾ ರಾಬರ್ಟ್ ವಾದ್ರಾ ಎಂಬ ದೇಶದ ಅತಿ ದೊಡ್ಡ ಸರ್ಕಾರೀ ನೆಲಗಳ್ಳನೊಬ್ಬನ ನೈಜ ಮುಖವನ್ನು ನಾಡಿನ ಜನತೆಯ ಮುಂದೆ ತೆರೆದಿಟ್ಟಂತಾಗುತ್ತದೆ.

ಆದರೆ, ಈ ಆರು ವಿಧಗಳ ದಾಖಲೆಗಳನ್ನು ಒದಗಿಸುವಂತೆ ಕೋರಿ ಬೆಂಗಳೂರು ದಕ್ಷಿಣ ತಾಲ್ಲೂಕು ತಹಸೀಲ್ದಾರ್ ಕಛೇರಿಯಲ್ಲಿ RTI ಅರ್ಜಿಗಳನ್ನು ಸಲ್ಲಿಸಿದ್ದರೂ ಸಹ, ಆ ಕಛೇರಿಯ ಅಧಿಕಾರಿಗಳಿಂದ ಈವರೆಗೆ ಯಾವುದೇ ಉತ್ತರಗಳು ಬಂದಿಲ್ಲವೆಂಬುದನ್ನು ಗಮನಿಸಿದರೆ, ಈ ಅಮೂಲ್ಯ ಸ್ವತ್ತುಗಳಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳನ್ನು ನಾಶಪಡಿಸುವ ಕಾರ್ಯ ಒಳಗಿಂದೊಳಗೇ ನಡೆದಿದೆ / ನಡೆಯುತ್ತಿದೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ರುಜುವಾತುಪಡಿಸುತ್ತದೆ!!!



ಯಾವುದೇ ಕೃಷಿ ಭೂಮಿಗಳಿಗೆ ಸಂಬಂಧಿಸಿದಂತೆ ನಮೂನೆ 7A ರಲ್ಲಿ ಆಯಾ ಜಮೀನುಗಳಲ್ಲಿ ವ್ಯವಸಾಯ ಮಾಡುವಂತಹ ಗೇಣಿದಾರರ ವಿವರ ಇರುತ್ತದೆ. ಆದರೆ, DLF ಸಂಸ್ಥೆ ಕಬಳಿಸಿರುವ 1,100 ಎಕರೆಗಳಷ್ಟು ಜಮೀನುಗಳಿಗೆ ಸಂಬಂಧಿಸಿದ Form 7A ರಲ್ಲಿ ಗೇಣಿದಾರರ ವಿವರಗಳು ಇಲ್ಲದಿರುವುದೇ, ಆ ಜಮೀನುಗಳು ಸಂಪೂರ್ಣವಾಗಿ ಸರ್ಕಾರೀ ಜಮೀನುಗಳು ಎಂಬುದನ್ನು ಸಾರಿ ಸಾರಿ ಹೇಳುತ್ತವೆ!!!

**ರಾಜ - ರಾಣಿ ಜಮೀನು**

ಸಂಪೂರ್ಣ ಸರ್ಕಾರೀ ಸ್ವತ್ತುಗಳಾಗಿರುವ ಮತ್ತು ದಾಖಲೆಗಳೇ ಇಲ್ಲದ ಈ 1,100 ಎಕರೆ ವಿಸ್ತೀರ್ಣದ ಸ್ವತ್ತನ್ನು ಇತ್ತೀಚಿನವರೆಗೂ ರಾಜ-ರಾಣಿ ಜಮೀನುಎಂದೇ ಸುತ್ತಮುತ್ತಲಿನ ಜನರು ಕರೆಯುತ್ತಿದ್ದರು. ಈ ಜಮೀನಿನ ನಡುವೆ ಅತ್ಯಂತ ಹಳೆಯದಾದ ಬೃಹತ್ ಬಂಗಲೆಯೊಂದು ಪಾಳು ಬಿದ್ದ ಸ್ಥಿತಿಯಲ್ಲಿರುವುದು ನಮಗೆ ಕಂಡು ಬರುತ್ತದೆ. ಅಲ್ಲದೇ, ಈ ಪ್ರದೇಶದೊಳಗೆ ಇರುವಂತಹ ಅತ್ಯಂತ ಹಳೆಯ ಬಂಗ್ಲೀ ಕೆರೆಯನ್ನು ಸಂಪೂರ್ಣವಾಗಿ ಕಬಳಿಸಲಾಗಿದೆ.

ಈ ನಾಲ್ಕು ಗ್ರಾಮಗಳ ವ್ಯಾಪ್ತಿಯಲ್ಲಿರುವ ಎಲ್ಲಾ 'ಎ' ಖರಾಬು, 'ಬಿ' ಖರಾಬು, ಗೋಮಾಳ, ಸರ್ಕಾರೀ ಬಂಡೆ, ಸ್ಮಶಾನ, ಬಂಡಿದಾರಿ, ಸರ್ಕಾರೀ ಹಳ್ಳ, ಸರ್ಕಾರೀ ಗುಡ್ಡ ಮತ್ತು ಅರ್ಕಾವತಿ ನದಿಯ Buffer Zone ಪ್ರದೇಶಗಳನ್ನು ಒಂದಿಂಚೂ ಬಿಡದಂತೆ ಸಂಪೂರ್ಣವಾಗಿ ಒತ್ತುವರಿ ಮಾಡಿಕೊಂಡುಬಿಟ್ಟಿದ್ದಾರೆ!!! ಆದರೆ, ಈ ಎಲ್ಲ ಸಂಗತಿಗಳು ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ತಹಸೀಲ್ದಾರ್, ಉಪ ತಹಸೀಲ್ದಾರ್ ಸೇರಿದಂತೆ ಸ್ಥಳೀಯ ಗ್ರಾಮ ಲೆಕ್ಕಿಗರಿಗಾಗಲೀ ತಿಳಿದೇ ಇಲ್ಲವೆಂಬುದನ್ನು ನಂಬಲು ಸಾಧ್ಯವೇ!!!??? ಹಾಗೆಯೇ, ಈ ಬೃಹತ್ ಭೂ ಕಬಳಿಕೆ ಕಾರ್ಯ ನಡೆದಿರುವ 2013-14 ರಿಂದ 2017-18 ರ ಅವಧಿಯಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಿದ್ಧರಾಮಯ್ಯ ಎಂಬ ಪರಮ ಭ್ರಷ್ಟನ ಸಹಕಾರದಿಂದಲೇ 10,000 ಕೋಟಿ ಬೆಲೆಬಾಳುವ 1,100 ಎಕರೆಗಳಷ್ಟು ಅತ್ಯಮೂಲ್ಯ ಸರ್ಕಾರೀ ಸ್ವತ್ತು ರಾಬರ್ಟ್ ವಾದ್ರಾನಂತಹ ಮತ್ತು DLF ಸಂಸ್ಥೆಯಂತಹ ಸರ್ಕಾರೀ ನೆಲಗಳ್ಳರ ಪಾಲಾಗಿರುವುದು ಅಕ್ಷರಶಃ ಸತ್ಯ!!!

ಇವರೆಲ್ಲರೂ ಕಾಂಗ್ರೆಸ್(ಐ) ಪಕ್ಷದ ಅಧಿನಾಯಕಿ ಸೋನಿಯಾಗಾಂಧಿಯವರ ಮುದ್ದಿನ ಅಳಿಯ ರಾಬರ್ಟ್ ವಾದ್ರಾರ ಮರ್ಜಿಗೆ ಒಳಗಾಗಿ, ಈ 10,000 ಕೋಟಿ ರೂಪಾಯಿಗಳಿಗೂ ಹೆಚ್ಚು ಬೆಲೆಬಾಳುವ 1,100 ಎಕರೆಗಳಷ್ಟು ಸರ್ಕಾರೀ ಸ್ವತ್ತು ಕಬಳಿಕೆಗೆ ಸಹಕರಿಸಿರುವುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಹೋಗುತ್ತದೆ...!!!

ಆದುದರಿಂದ, ನಕಲಿ ದಾಖಲೆಗಳನ್ನು ಸೃಷ್ಟಿಸಿ 10,000 ಕೋಟಿ ರೂ. ಗಳಿಗಿಂತಲೂ ಹೆಚ್ಚು ಬೆಲೆಬಾಳುವ 1,100 ಎಕರೆಗಳಷ್ಟು ಸರ್ಕಾರೀ ಸ್ವತ್ತುಗಳನ್ನು ಕಬಳಿಸಿರುವ ರಾಬರ್ಟ್ ವಾದ್ರಾ, ಸೇರಿದಂತೆ DLF ಸಂಸ್ಥೆಯ ಮುಖ್ಯಸ್ಥರು/ ನಿರ್ದೇಶಕರು/ಸದಸ್ಯರು/ಪಾಲುದಾರರುರವರುಗಳ ವಿರುದ್ಧ ನಕಲಿ ದಾಖಲೆ ತಯಾರಿಕೆ, ಅಧಿಕಾರ ದುರುಪಯೋಗ, ಸರ್ಕಾರೀ ಆಸ್ತಿ ಕಬಳಿಕೆ ಮತ್ತು ವಂಚನೆ ಪ್ರಕರಣಗಳನ್ನು ದಾಖಲಿಸಿ - ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಅಧಿಕೃತ ಪತ್ರ ಬರೆಯಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅಲ್ಲದೇ DLF ಸಂಸ್ಥೆಯ ರಾಬರ್ಟ್ ವಾದ್ರಾರವರ ಮರ್ಜಿಗೆ ಒಳಗಾಗಿ ನಕಲಿ Mutation Register ಗಳನ್ನು ಮಾಡಿಕೊಟ್ಟಿರುವ ಮತ್ತು ಈ ಭೂ ಕಬಳಿಕೆ ಕಾರ್ಯಕ್ಕೂ ತಮಗೂ ಸಂಬಂಧವಿಲ್ಲದಂತೆ ಕುಳಿತಿದ್ದ ಹಿಂದಿನ ಬೆಂಗಳೂರು ನಗರ ಜಿಲ್ಲಾಧಿಕಾರಿಗಳು, ಹಿಂದಿನ ಅಪರ ಜಿಲ್ಲಾಧಿಕಾರಿಗಳು, ಸಹಾಯಕ ಆಯುಕ್ತರು, ತಹಸೀಲ್ದಾರ್‌ಗಳು, ಉಪ ತಹಸೀಲ್ದಾರ್‌ಗಳು, ಕಂದಾಯ ಅಧಿಕಾರಿಗಳು ಮತ್ತು ನಾಲ್ಕು ಗ್ರಾಮಗಳ ಲೆಕ್ಕಿಗರುಗಳ ವಿರುದ್ಧ ಹಾಗೂ ದಾಖಲೆಗಳನ್ನು ಪರಿಶೀಲನೆ ಮಾಡದೆಯೇ ಅಪರ ಪ್ರಮಾಣದ ಲಂಚವನ್ನು ಪಡೆದು ಸರ್ಕಾರೀ ಸ್ವತ್ತುಗಳನ್ನು ಮಾರಾಟ ಮಾಡುವ ಕಾನೂನು ಬಾಹಿರ ಪ್ರಕ್ರಿಯೆಗೆ ಅಧಿಕೃತ ಮುದ್ರೆಯನ್ನು ಒತ್ತುತ್ತಿರುವ ತಾವರೆಕೆರೆ ಉಪ ನೊಂದಣಾಧಿಕಾರಿ ಕಛೇರಿಯ Sub & Registrar ವಿರುದ್ಧ ವಂಚನೆ, ಭ್ರಷ್ಟಾಚಾರ ಮತ್ತು ಸರ್ಕಾರೀ ಭೂಕಬಳಿಕೆಗೆ ಸಹಕಾರ ಪ್ರಕರಣಗಳನ್ನು ದಾಖಲಿಸಿ - ಕಾನೂನು ರೀತ್ಯಾ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ರಾಜ್ಯ ಸರ್ಕಾರಕ್ಕೆ ಅಧಿಕೃತ ಪತ್ರ ಬರೆಯಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಈ ಸಂಬಂಧ ದಿನಾಂಕ 10/10/2018 ರಂದು ಸಂಪೂರ್ಣ ದಾಖಲೆಗಳೊಂದಿಗೆ ಅಂದಿನ ಜಿಲ್ಲಾಧಿಕಾರಿಗಳಿಗೆ ದೂರನ್ನು ನೀಡಿದ್ದರೂ ಸಹ, ಈ ಬೃಹತ್ ಸರ್ಕಾರಿ ಭೂ ಹಗರಣದಲ್ಲಿ ಭಾಗಿಯಾಗಿರುವ ಪ್ರಭಾವಿಗಳ ಒತ್ತಡಗಳಿಗೆ ಮಣಿದು ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಅಮೂಲ್ಯ ಸರ್ಕಾರಿ ಸ್ವತ್ತುಗಳನ್ನು ಸರ್ಕಾರೀ ನೆಲಗಳ್ಳರಿಂದ ರಕ್ಷಿಸಿಕೊಳ್ಳಬೇಕಿರುವುದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಕರ್ತವ್ಯವಾಗಿದ್ದರೂ ಸಹ ಈ ಪ್ರಕರಣದಲ್ಲಿ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೂ ಸಹ ಯಾವುದೇ ಕ್ರಮ ವಹಿಸದೇ ಇರುವುದು ಹಲವಾರು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ. ಆದುದರಿಂದ, ಈ ಕೂಡಲೇ DLF ಸಂಸ್ಥೆ ಕಬಳಿಸಿರುವ ಎಲ್ಲ 1,100 ಎಕರೆ ಸ್ವತ್ತುಗಳನ್ನು ಜಿಲ್ಲಾಡಳಿತದ ವಶಕ್ಕೆ ಪಡೆದುಕೊಳ್ಳುವ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು 487 ಪುಟಗಳ ಸಂಪೂರ್ಣ ದಾಖಲೆಗಳ ಸಹಿತ ಬೆಂಗಳೂರು ನಗರ ಜಿಲ್ಲೆಯ ಮಾನ್ಯ ಜಿಲ್ಲಾಧಿಕಾರಿಗಳನ್ನು ಆಗ್ರಹಿಸಲಾಗಿದೆ.

-ರಮೇಶ್ ಎನ್.ಆರ್., ಮಾಜಿ ಅಧ್ಯಕ್ಷರು
ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕ ಹಾಗೂ
ಆಡಳಿತ ಪಕ್ಷದ ಮಾಜಿ ನಾಯಕರು, ಬಿಬಿಎಂಪಿ

★★★

ಓದಿಕೊಂಡಿರಲ್ಲ, ಸಾಮಾಜಿಕ ಕಾರ್ಯಕರ್ತ ಎನ್. ಆರ್. ರಮೇಶ್ ಅವರು DLF ಭೂಗಳ್ಳತನಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಸಂಗ್ರಹಿಸಿ DLF ಲ್ಯಾಂಡ್ ಗ್ರಾಬಿಂಗ್ ಫೈಲ್ ಅನ್ನೇ ಸಿದ್ದಪಡಿಸಿಕೊಂಡು ನ್ಯಾಯಕ್ಕಾಗಿ ಸಮರವನ್ನೇ ಸಾರಿಬಿಟ್ಟಿದ್ದಾರೆ. ಇಂಥವರ ಬೆನ್ನಿಗೆ ಪ್ರಜ್ಞಾವಂತ ಪ್ರಜೆಗಳು, ಜವಾಬ್ದಾರಿಯುತ ಮಾಧ್ಯಮಗಳು ನಿಲ್ಲಬೇಕಿದೆ!

☯

# ಎನ್ನಡ ಕಮಲ್ ಯಡವಟ್! ಕನ್ನಡ ಶಿವಣ್ಣ ಟಾರ್ಗೆಟ್ ?!

5 ☞

ಇದು ಕರ್ನಾಟದಲ್ಲಿ ಪ್ರದರ್ಶನ ಕಾಣಬೇಕೆಂದರೆ, ಕಮಲ್ ಕ್ಷಮೆ ಕೇಳಲೇಬೇಕು ಎಂಬ ನಿರ್ಧಾರಕ್ಕೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಬಂದಾಗಿದೆ! ಇನ್ನೊಂದೆಡೆ ಕನ್ನಡ ಪರ ಹೋರಾಟಗಾರರು ಟಾಕೀಸ್‌ಗಳ ಮಾಲೀಕರನ್ನು ಸಂಪರ್ಕಿಸಿ- 'ಹುಷಾರ್' ಎಂದು ವಾರ್ನಿಂಗ್ ಕೊಡುತ್ತಿದ್ದಾರೆ! ಇಷ್ಟಾಗಿಯೂ ಮೊಂಡ ಕಮಲ್ ಕನ್ನಡಿಗರ ಕ್ಷಮೆ ಕೇಳದೆ, ಹೈಕೋರ್ಟ್ ಮೊರೆ ಹೋಗಿದ್ದಾನೆ!



ಮರೋಚರಿತ್ರ, ಪದಿನಾರು ವಯದಿನಿಲೆ, ರಾಜಪಾರ್ವೈ, ನಾಯಗನ್, ಸಾಗರ ಸಂಗಮಂ, ಸ್ವಾತಿ ಮುತ್ಯಂ, ಹಿಂದಿಯ ಏಕ್ ದುಜೆಕೆ ಲಿಯೆ, ಸಾರ್ಗ, ಕನ್ನಡದಲ್ಲಿ ಕೋಕಿಲ, ಪುಷ್ಪಕ ವಿಮಾನ, ಮರಿಯಾ ಮೈ ಡಾರ್ಲಿಂಗ್, ರಾಮ ಶಾಮ ಭಾಮಾ... ಹೀಗೆ ಹಲವು ಚಿತ್ರಗಳಲ್ಲಿ ಅದ್ಭುತವಾಗಿ ಅಭಿನಯಿಸಿ, ಏಳೆಂಟು ಬಾರಿ ರಾಷ್ಟ್ರಪ್ರಶಸ್ತಿ, ಡಜನ್ ಗಟ್ಟಲೆ ಫಿಲಂ ಫೇರ್ ಪ್ರಶಸ್ತಿ ಗಳಿಸದ ನಟ. ಈತನ ಪ್ರತಿಭೆ ಕುರಿತು ಎರಡು ಮಾತಿಲ್ಲ. ಆದರೆ, ಪ್ರತಿಭೆಯ ಜೊತೆಗೆ ಸಾರ್ವಜನಿಕ ವ್ಯಕ್ತಿಗೆ ಇರಬೇಕಾದ ಶಿಸ್ತು ಸಂಯಮ ಜ್ಞಾನವಿಲ್ಲ.

ಭಾರತದ ಚಿತ್ರರಂಗದ ಅತ್ಯುತ್ತಮ ನಟರಾದ ನಾನಾಪಾಟೇಕರ್, ನಸುರಿದ್ದೀನ್ ಷಾ, ನವಾಜುದ್ದಿನ್ ಸಿದ್ದಿಕಿ ಅವರಂತೆ ಸಾರ್ವಜನಿಕ ಬದುಕಿನಲ್ಲಿ ಶಿಸ್ತು ಕಲಿಯಲು ಕಮಲ್ ಹಾಸನ್‌ಗೆ ಸಾಧ್ಯವಾಗಲಿಲ್ಲ. ಅಷ್ಟೇ ಏಕೆ ಕನ್ನಡದ ನೆಲದಿಂದ ಹೋಗಿ ಇಂದು ತಮಿಳು ಚಿಂತ್ರರಂಗದಲ್ಲಿ ದಂತಕಥೆಯಾಗಿರುವ ರಜನಿಕಾಂತ್‌ಗೆ ಇರುವ ಶಿಸ್ತು ಈತನ ಬಳಿ ಇಲ್ಲ. ಕೇವಲ ಎಸ್ ಎಸ್‌ಎಲ್‌ಸಿವರೆಗೆ ಓದಿರುವ ಈ ವ್ಯಕ್ತಿಯನ್ನು ಪ್ರಗತಿಪರ ಚಿಂತಕ ಅಂತ ಒಪ್ಪಿಕೊಳ್ಳಲಿಕ್ಕು ಆಗೋಲ್ಲ.

ದ್ರಾವಿಡ ಭಾಷೆಗಳಲ್ಲಿ ತಮಿಳು, ಕನ್ನಡ, ತೆಲುಗು, ಮಲೆಯಾಳಂ ಭಾಷೆಗಳು ಒಂದೇ ಹೆಮ್ಮರದಿಂದ ಟಿಸಿಲೊಡೆದ ರಂಬೆಗಳು ಎಂಬ ಕನಿಷ್ಠ ಜ್ಞಾನವಿಲ್ಲದ ಈ ಮೂರ್ಖ, ನನ್ನಿಂದ ವಿವರಣೆ ತಪ್ಪಾಗಿದೆ ಎಂದು ಒಂದು ಮಾತು ಹೇಳಿದ್ದರೆ ಸಾಕಿತ್ತು. ಈ ವಿವಾದ ಇಲ್ಲಿಗೇ ಮುಗಿದು ಹೋಗ್ತಿತ್ತು.

ದುರಹಂಕಾರವು ನನ್ನ ರಕ್ತದ ಗುಣ ಎಂಬಂತೆ ನಾನು ಕ್ಷಮೆ ಕೇಳುವುದಿಲ್ಲ ಎಂದು ದಿಮಾಕು ತೋರಿದ ಈತ ಈಗ ಕರ್ನಾಟಕದಲ್ಲಿ ತನ್ನ ಚಿತ್ರ ಪ್ರದರ್ಶನಕ್ಕೆ ಹೈಕೋರ್ಟ್ ಮೊರೆ ಹೋಗುವುದರ ಮೂಲಕ ಕನ್ನಡಿಗರ ಸಹನೆಯನ್ನು ಕೆಣಕುತ್ತಿದ್ದಾನೆ! ಈತನಿಗೆ ಕನ್ನಡದ ನೆಲಕ್ಕೆ ಕಾಲಿಡದಂತೆ ಬುದ್ಧಿ ಕಲಿಸಬೇಕಿದೆ... ☯

## ಅಣ್ಣ ಬೇರೆ... ಅಪ್ಪ ಬೇರೆ... ಅಲ್ವಾ ಅಣ್ಣಾ...

ಕಮಲ್ ಹಾಸನ್ ಸರ್, ನಿಮಗೆ ಒಂದು ವಿಷಯ ಹೇಳಬೇಕು ಅಂತಿದ್ದೆ. ಚಾರು ಹಾಸನ್ ಅವರನ್ನು ನಿಮ್ಮ ತಂದೆ ಅಂತಿದ್ದಾರೆ ಜನ ನಿಜಾನಾ? ಅದ್ಹೆಂಗೆ ರೀ? ಅವರು ನಮ್ಮಣ್ಣ!

ಇಲ್ಲ ಸರ್.... ಅವರಿಂದಲೇ ನೀವು ಬಂದಿದ್ದಂತೆ! ಹಾಗಾಗಿ ಅವರೇ ನಿಮ್ಮ ಅಪ್ಪ ಆಗಬೇಕು!!

**No never...** ಯಾವನ್ ಹೇಳಿದ್ದು?! ನಾವಿಬ್ಬರೂ ಅಣ್ತಮ್ಮಂದಿರು!

ಸರಿ...ಪ್ರೀತಿಯಿಂದ ಅವರೆಲ್ಲ ನಿಮ್ಮಿಬ್ಬರನ್ನು ಅಪ್ಪ-ಮಗ ಅಂತಿದ್ದಾರೆ. ಒಪ್ಕೊಳ್ಳಿ ಸರ್!

ಅಯ್ಯೋ... ಅವನ್ಯಾರೋ ಪ್ರೀತಿಯಿಂದ ಹೇಳಿದ ಅಂತ, ತಕ್ಷಣ ಒಪ್ಪಿಕೊಳ್ಳೋಕೆ ನನಗೇನು ತಲೆಕೆಟ್ಟಿದ್ಯಾ? ಅವನು ಪ್ರೀತಿಯಿಂದ ಹೇಳಿದ ತಕ್ಷಣ ಸಹೋದರರಿಬ್ಬರು ಅಪ್ಪ-ಮಗ ಆಗ್ಬಿಡ್ತಾರಾ? ಅದನ್ನ ನಾನ್ಯಾಕೆ ಒಪ್ಕೋಬೇಕು?!



ಅಯ್ಯೋ....ಪ್ರೀತಿಯಿಂದ ಹೇಳಿದ್ದಕ್ಕೂ ಜಗಳ ತೆಗೀತೀರಲ್ಲ ಸರ್!!?

ಅವರ ಪ್ರೀತಿ ಅವರಿಗೆ ಇರಲಿ ರೀ.... ಪ್ರೀತಿಯಿಂದ ಹೇಳಿದ್ರು ಅಂತ ಎಲ್ಲವನ್ನೂ ಒಪ್ಪಿಕೊಳ್ತಾ ಹೋದ್ರೆ, ನಾಳೆಯ ದಿನ ನೋಡಿದವರು ಅದನ್ನೇ ಸರಿ ಅಂತ ವಾದಿಸ್ತಾರೆ ಅಷ್ಟೇ!!

ಅದು ಹಾಗಲ್ಲ ಸರ್. ಯಾರೋ ಚಾರು ಹಾಸನ್ ಅವರನ್ನು ಮೊದಲು ನೋಡಿದ್ದರಂತೆ!!

ಇನ್ಯಾರೋ ನಿಮ್ಮನ್ನು ಮೊದಲು ನೋಡಿದ್ದಂತೆ. ಹಾಗಾಗಿ ಕೆಲವರು ಚಾರು ಹಾಸನ್ ಅಪ್ಪ, ನೀವು ಮಗ ಅಂತ ವಾದಿಸಿದರೆ... ಇನ್ನು ಕೆಲವರು ನೀವೇ ಅಪ್ಪ ಅವರು ಮಗ ಅಂತ ವಾದಿಸುತ್ತಿದ್ದಾರೆ. ಇವರಿಬ್ಬರಲ್ಲಿ ಯಾರು ಸರಿ?!

ಅದು ಹೇಗೆ ಸಾಧ್ಯ ರೀ? ಯಾರೋ ಮೊದಲು ಒಬ್ಬರನ್ನು ನೋಡಿದ ತಕ್ಷಣ ಅವರೇ ಅವರನ್ನು ಅಪ್ಪ ಅಂದುಬಿಟ್ಟರೆ ಹೇಗೆ?! ಇಬ್ಬರ ಗ್ರಹಿಕೆಯೂ ತಪ್ಪೇ! ವಾಸ್ತವ ಬೇರೆ ಇದೆ.

ಹಾಗಾದರೆ ನೀವಿಬ್ಬರೂ ಅಣ್ತಮ್ಮಂದಿರು ಅಂತ ಹೇಗೆ ಪ್ರೂವ್ ಮಾಡ್ತೀರ, ಹೇಳಿ?!

ನಾನು ಅವರ ತಮ್ಮನಾಗಿ ಹೇಳುತ್ತಿದ್ದೇನೆ! ನಾವಿಬ್ಬರೂ ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು! ಹಾಗಾಗಿ ನಾವಿಬ್ಬರೂ ಸಹೋದರರಾಗಬೇಕೇ ಹೊರತು ಅಪ್ಪ-ಮಕ್ಕಳಲ್ಲ!! ಅವನ್ಯಾರೋ ತಲೆಕೆಟ್ಟವನ ಮಾತನ್ನು ಕೇಳಬೇಡಿ.... ಆಯ್ತಾ?! ಆಯ್ತು ಸರ್.....ಅರ್ಥ ಆಯ್ತು!!

ಇದು ಕೇವಲ ಕಾಲ್ಪನಿಕ. ಕಮಲ್ ಹಾಸನ್ ಹಾಗೂ ಚಾರು ಹಾಸನ್ ಇಬ್ಬರೂ ಸಹೋದರರು ಅಂತ ತಿಳಿದಿದ್ದೂ ಈ ಸಂದರ್ಭಕ್ಕನುಗುಣವಾಗಿ ಈ ಚುಟುಕು ಚಿತ್ರಕತೆ ರಚಿಸಲಾಗಿದೆ. ಇದರ ಸಾರಾಂಶವಿಷ್ಟೇ... ತಮಿಳು ಮತ್ತು ಕನ್ನಡ ಅಕ್ಕ ತಂಗಿ ಅಥವಾ ಅಣ್ಣ ತಮ್ಮ ಅಂದ್ರೆ ಒಪ್ಕೋಬಹುದು... ಆದರೆ ಅಮ್ಮ ಮಗ ಅಂದ್ರೆ ಕಷ್ಟ ಕಷ್ಟ... ☯


# ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂಧಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೊರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ಧವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

9513892666

policenewsreporter@gmail.com

## ಪಾತಕ ಪ್ರಪಂಚ

# ಎಷ್ಟು ಶೃಂಗಾರ ಪುರುಷ

ನಾವು ನಮ್ಮ ಸಮಾಜದಲ್ಲಿ ಇರುವ ಎಲ್ಲರೂ ನಮ್ಮಂತೆ ಎಂದು ತಿಳಿದುಕೊಂಡಿರುತ್ತೇನೆ. ಆದರೆ ದಿಢೀರ್ ಅಂತ ಸುದ್ದಿ ಮಾಧ್ಯಮಗಳಲ್ಲಿ ಬ್ರೇಕಿಂಗ್ ನ್ಯೂಸ್ ರೀತಿ ಪ್ರಸಾರವಾದಾಗ ಆಶ್ಚರ್ಯದೊಂದಿಗೆ ಆಘಾತ ಸಹ ಉಂಟಾಗುತ್ತದೆ.

ಪ್ರಸಿದ್ಧ ಪ್ರಭಾವಶಾಲಿ ವ್ಯಕ್ತಿಗಳು, ಸಮಾಜದಲ್ಲಿ ಗೌರವ, ಮರ್ಯಾದೆ ಪಡೆದಿರುವವರು ಮತ್ತು ಬಹಿರಂಗವಾಗಿ ತಾವು ಆದರ್ಶ ಪುರುಷರು ಎಂದು ಹೇಳಿಕೊಳ್ಳುವ ವ್ಯಕ್ತಿಗಳ, ವಿಚಿತ್ರ ಮತ್ತು ವಿಕಲ್ಪ ತೆವಲುಗಳ ರಹಸ್ಯ ತಿಳಿದಾಗ ನಂಬಲಾಗುವುದಿಲ್ಲ. ಇಂತಹ ಹುಚ್ಚರು ಇರುತ್ತಾರ? ಈ ಆದರ್ಶ, ಗೌರವಾನ್ವಿತ, ಧರ್ಮ ದುರಂಧರ ಎಂಬ ಖ್ಯಾತಿಯ ವ್ಯಕ್ತಿ ತೆರೆಯ ಮರೆಯಲ್ಲಿ ಇಂತಹ ವಿಲಕ್ಷಣ ಆಟಗಳನ್ನು ಆಡುತ್ತಿದ್ದ ಎಂದು ತಿಳಿದಾಗ ಅಸಹ್ಯ ಮತ್ತು ತಿರಸ್ಕಾರದ ಭಾವನೆ ಉಂಟಾಗುತ್ತದೆ. ಪ್ರಶ್ನೆ ಎದುರಾಗುತ್ತದೆ.

ಇಂತಹ ವಿಚಿತ್ರ-ವಿಲಕ್ಷಣ-ವಿಕಲ್ಪ ತೆವಲುಗಳಿರುವ ಗೋಮುಖವ್ಯಾಘ್ರಗಳು ನಮ್ಮ ಸಮಾಜದಲ್ಲಿ ಎಷ್ಟು ಮಂದಿ ಇದ್ದಾರೆ? ನಾವು ಕಂಡಂತೆ ನಮ್ಮೊಂದಿಗೆ ನಗು, ನಗುತ್ತಾ ಇರುತ್ತಾರೆ. ಸಮಾಜದಲ್ಲಿ ಆದರ್ಶ ಪುರುಷರಂತೆ ಮತ್ತು ತಾವು ಮಹಾ ಸಭ್ಯರು, ಸುಸಂಸ್ಕೃತವಂತರು ಎಂಬ ರೀತಿ ಇರುತ್ತಾರೆ. ಆದರೆ ಅವರ ಅಂತರಂಗದಲ್ಲಿ ಗುಪ್ತವಾಗಿರುತ್ತದೆ ವಿಲಕ್ಷಣ-ವಿಚಿತ್ರ ಆರೆ-ಬಯಕೆಗಳು. ಪ್ರಚೋದನೆಗೆ ಒಳಗಾಗಿ ರಹಸ್ಯವಾಗಿ ತೆವಲು ತೀರಿಸಿಕೊಳ್ಳುತ್ತಾರೆ.

ಅಂತಹ ತುಂಬಾ ವಿಲಕ್ಷಣ ಬಯಕೆಗಳಿರುವ ವ್ಯಕ್ತಿಯ ಮತ್ತೊಂದು ಮುಖದ ದರ್ಶನ ಮಾಡಿಸುತ್ತೇನೆ.

●●●

ನಗರದ ಗೋಡೆಗಳ ಮೇಲೆ ಅಂಟಿಸಿರುವ ಸಿನಿಮಾ ಪೋಸ್ಟರ್‌ಗಳನ್ನು ಅವನು ತದೇಕ ದೃಷ್ಟಿಯಿಂದ ನೋಡುತ್ತಿದ್ದಾನೆ. ಚಂದ್ರಮುಖಿ ಎಂಬ ಹೊಸ ಸಿನಿಮಾ ಬಿಡುಗಡೆ ಆಗಿದೆ. ಹತ್ತಾರು ಬೇರೆ ಬೇರೆ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಅವನು ತನ್ನ ಡ್ಯೂಟಿ ಮುಗಿಸಿಕೊಂಡು ಬರುತ್ತಿದ್ದಾಗ ಸಿನಿಮಾ ಪೋಸ್ಟರ್‌ಗಳು ಕಂಡಿದ್ದರಿಂದ ಅಲ್ಲೇ ನಿಂತು ನೋಡುತ್ತಿದ್ದಾನೆ.

ಅವಳು ಚಂದ್ರಲೇಖ...! ಅಲ್ಲಿ ನಿಂತಿರುವ ಆ ಯುವಕನ ಮೆಚ್ಚಿನ ಸಿನಿಮಾ ನಟಿ. ಇದು ಅವಳ ಎರಡನೆ ಸಿನಿಮಾ. ಮೊದಲ ಸಿನಿಮಾ ಯಶಸ್ವಿ ಆಗಿರಲಿಲ್ಲ. ಆದರೆ ಅವಳು ತನ್ನ ಅದ್ಭುತವಾದ ಸೌಂದರ್ಯದಿಂದ ಸಿನಿಮಾ ರಸಿಕ ಪ್ರೇಕ್ಷಕರನ್ನು ಆಕರ್ಷಿಸಿದ್ದಳು. ಮೊದಲ ಸಿನಿಮಾ ಫ್ಲಾಪ್ ಆಗಿದ್ದರೂ ಅವಳ ಅದ್ಭುತ ಚೆಲುವು ಮತ್ತು ಅಭಿನಯದ ಕಾರಣದಿಂದ ಎರಡನೆ ಸಿನಮಾಕ್ಕೆ ಆಯ್ಕೆ ಆಗಿದ್ದಾಳೆ. ಮೊದಲ ಸಿನಿಮಾದಲ್ಲಿ ಅವಳಿಗೆ ಕೇವಲ ಹತ್ತು ಸಾವಿರ ಕೊಟ್ಟಿದ್ದರು. ಎರಡನೆ ಸಿನಿಮಾದ ಪ್ರೊಡ್ಯೂಸರ್‌ಗಳು ಸಹ ಅವಳಿಗೆ ಜಾಸ್ತಿ ಹಣ ಕೊಟ್ಟಿರಲಿಲ್ಲ. ಸಿನಿಮಾ ಸಕ್ಸಸ್ ಆಗಬೇಕು. ಆಮೇಲೆ ಒಂದು ಲಕ್ಷ ರೂಪಾಯಿ ಕೊಡುತ್ತೇನೆ ಎಂದಿದ್ದರು.

ಆದರೂ ಸಹ ಅವಳಿಗೇನೂ ಆರ್ಥಿಕ ಸಮಸ್ಯೆ ಆಗಿರಲಿಲ್ಲ. ಡಬ್ಬಲ್ ಬೆಡ್‌ರೂಮಿನ ಮನೆಯನ್ನು ಕೆಲವು ಲಕ್ಷಗಳನ್ನು ಕೊಟ್ಟು ತನ್ನ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡಿದ್ದಳು. ಶ್ರೀಮಂತಿಕೆಯ ಐಷಾರಾಮಿ ಜೀವನವನ್ನು ಅವಳು ನಡೆಸುತ್ತಿದ್ದಳು.

ಚಂದ್ರಲೇಖಳಿಗೆ ರಾಜ್ಯದಾದ್ಯಂತ ತುಂಬಾ ಮಂದಿ ರಸಿಕ ಅಭಿಮಾನಿಗಳಿದ್ದರು. ಅದರಲ್ಲಿ ಇವನೊಬ್ಬ ಅಭಿಮಾನಿ. ಹೆಸರು ಬಾಳಪ್ಪಗೌಡ. ಪ್ರಾಯ ಇಪ್ಪತ್ತು . ಹೋಟೆಲ್ ವೊಂದರಲ್ಲಿ ಕೆಲಸಗಾರ ಆಗಿರುವ ಇವನು, ಎರಡು ವರ್ಷಗಳಿಂದ, ಚಂದ್ರಲೇಖ ಅಭಿನಯಿಸಿ ಬಿಡುಗಡೆ ಆಗಿರುವ ಒಂದೇ ಒಂದು ಸಿನಿಮಾನ ನಲವತ್ತು ಸಲ ನೋಡಿದ್ದಾನೆ. ಕಾರಣ ಅವಳ ಸೌಂದರ್ಯ!

ಸಿನಿಮಾ ನೋಡಿದ ದಿವಸ ರಾತ್ರಿ ಪೂರ್ತಿ ನಿದ್ದೆ ಮಾಡುತ್ತಿರಲಿಲ್ಲ. ಅವಳು ಮೊದಲ ಸಿನಿಮಾದಲ್ಲಿ, ತುಂಬಾ ಬೋಲ್ಡ್ ಆಗಿ ತನ್ನ ದೇಹ ಸೌಂದರ್ಯವನ್ನು ರೋಚಕ ಅರೆನಗ್ನ ರೀತಿಯಲ್ಲಿ ಪ್ರದರ್ಶಿಸಿದ್ದಳು. ಹೀರೋಯಿನ್ ಹೊಸಬಳಾದರೆ ಅವಳ ಮೊದಲ ಸಿನಿಮಾದಲ್ಲಿ ನಿರ್ಮಾಪಕರಲ್ಲಿ ಕೆಲವರು, ಚುಂಬನ ದೃಶ್ಯಕ್ಕೆ ಕಂಡಿಷನ್ ಹಾಕಿ ಅವಕಾಶ ಕೊಟ್ಟಿರುತ್ತಾರೆ. ಮೊದಲ ಸಿನಿಮಾದಲ್ಲಿ ಈ ಚಂದ್ರಲೇಖ, ನಾಲ್ಕು ಸಲ ಹೀರೋ ಜೊತೆ ಗಾಢವಾಗಿ ಚುಂಬಿಸುವ ದೃಶ್ಯದಲ್ಲಿ ಸಹಕರಿಸಿದ್ದಾಳೆ.

ಬಾಳಪ್ಪಗೌಡನಿಗೆ ಕನಸು ಬೀಳುತ್ತಿದೆ. ಕನಸಲ್ಲಿ ಚೆಲುವೆ ಚಂದ್ರಲೇಖ ಈ ಹೋಟೆಲ್ ಕೆಲಸಗಾರ ಬಾಳಪ್ಪಗೌಡನಿಗೆ ಮುತ್ತು ಕೊಡುತ್ತಾಳೆ. ಇವನಂತೂ ಬರಗೆಟ್ಟವನ ರೀತಿಯಲ್ಲಿ ಅವಳ ತುಟಿಗಳನ್ನು ಮುದ್ದಾಡಿ, ಮೃದುವಾಗಿ ಕಚ್ಚುತ್ತಾ ಜೇನು ರಸ ಚಪ್ಪರಿಸಿದ್ದಾನೆ. ಈಗ ಏನು ಮಾಡುತ್ತಿದ್ದಾನೆ. ಚಂದ್ರಲೇಖಳ ಎರಡನೆ ಸಿನಿಮಾ ಬಿಡುಗಡೆಯಾಗಿದೆ. ಆ ಸಿನಿಮಾದ ಪೋಸ್ಟರ್‌ಗಳನ್ನು ನೋಡುತ್ತಿದ್ದಾನೆ. ಅವನಿಗೆ ಗೊತ್ತಿರಲಿಲ್ಲ. ಕೆಲವು ದಿನಗಳಿಂದ ಬಾಳಪ್ಪಗೌಡನನ್ನು ಯಾರೋ ಒಬ್ಬರು ಫಾಲೋ ಮಾಡುತ್ತಿದ್ದರು...!

●●●

ಡ್ರೈವರ್ ಕಮ್ ಪರ್ಸನಲ್ ಸೆಕ್ರೆಟರಿ ರೀತಿ ಇದ್ದಾನೆ ಗಂಗಾವರನ್...! ಇವಳು ಪಬ್ಲಿಕ್ ಸಂಪರ್ಕ ಇರುವ ಮೊಬೈಲ್ ಫೋನ್ ಅನ್ನು ತನ್ನ ತಮ್ಮನ ಹತ್ತಿರ ಕೊಟ್ಟಿದ್ದಾಳೆ. ಪರ್ಸನಲ್ ಫೋನ್ ಕಾಲ್‌ಗೆ ಸಂಬಂಧಪಡುವ ಮೊಬೈಲ್ ಈ ಡ್ರೈವರ್ ಹತ್ತಿರ ಇರುತ್ತದೆ. ಚಂದ್ರಲೇಖಳ ತೆರೆಯ ಮರೆಯ ವ್ಯವಹಾರಗಳನ್ನು ನಿರ್ವಹಿಸುವ ಜವಾಬ್ದಾರಿ ಅವನಿಗೆ ಕೊಟ್ಟಿದ್ದಾಳೆ. ನಂಬಿಕೆಗೆ ಅರ್ಹ ಈ ಡ್ರೈವರ್! ಕಾರು ಚಲಿಸುತ್ತಿದೆ. ಅವತ್ತು ಮೂರನೆ ಸಿನಿಮಾದ ಶೂಟಿಂಗ್ ಬೇಗ ಮುಗಿದಿತ್ತು. ಹಾಗಾಗಿ ಸಂಜೆ ಐದು ಗಂಟೆಗೆಲ್ಲಾ ಅವಳು ಸಿನಿಮಾ ಯೂನಿಟ್‌ನಿಂದ ಹೊರಟಿದ್ದಳು.

ಫೋನ್ ಕಾಲ್ ಬಂದಿತು. 'ಜಿನೇಂದ್ರ ಭುವನೇಶ್ವರ್' ಎಂಬ ಹೆಸರು ಬಂದಿತು. ಡ್ರೈವರ್ ಉತ್ಸಾಹದಿಂದ ''ನಮಸ್ಕಾರ ಸಾರ್'' ಎಂದನು.

ಕೆಲವು ಗಂಟೆಗಳ ಹಿಂದೆ ಈ ಡ್ರೈವರ್‌ಗೆ ತನ್ನ ಕಾರ್ಯದರ್ಶಿ ಮೂಲಕ ಎರಡು ಸಾವಿರ ರೂಪಾಯಿ ಕೊಡಿಸಿ ಅವಳ ಈ ಫೋನ್ ನಂಬರ್ ಪಡೆದಿದ್ದನು ಮತ್ತು ತನ್ನ ಶ್ರೀಮಂತಿಕೆಯ ಬಗ್ಗೆ ಡ್ರೈವರ್‌ಗೆ ಹೇಳಿದ್ದನು.

''ಎಲ್ಲಿದ್ದೀಯ ಗಂಗಾವರನ್.''

''ಮೇಡಂ ಜತೆ ಕಾರಲ್ಲಿ.''

''ಬೇರೆ ಯಾರಾದರೂ ಇದ್ದಾರ?''

''ಇಲ್ಲ ಸಾರ್.''

''ನನ್ನ ಬಗ್ಗೆ ಹೇಳಿ ಚಂದ್ರಲೇಖಳಿಗೆ ಫೋನ್ ಕೊಡು'' ಎಂದಾಗ ಅವನು ಅದೇ ರೀತಿ ಮಾಡಿದನು.

ಅವಳು ಪುಳುಕಗೊಂಡಿದ್ದಾಳೆ. ಕಾರಣ ಏನು? ಒಂದು ರಾತ್ರಿಗೆ ಕೆಲವು ಲಕ್ಷಗಳ ಸಂಪಾದನೆ ಆಗುತ್ತದೆ. ಅವಳು ಮಾದಕ ಸ್ವರದಲ್ಲಿ ''ಜಿನೇಂದ್ರ ಸಾರ್... ನಿಮ್ಮ ಪರಿಚಯ ಆಗುತ್ತಿರೋದು ನನಗೆ ತುಂಬಾ ಸಂತೋಷವಾಗಿದೆ.''

ಜಿನೇಂದ್ರ ಭುವನೇಶ್ವರ ''ನಿನ್ನಂತ ಚೆಲುವೆ ಅಭಿನೇತ್ರಿಯ ಜೊತೆ ಮಾತಾಡುವ ಅದೃಷ್ಟ ನನಗೆ ಸಿಕ್ಕಿದೆ. ನನಗೊಂದು ಆಸೆ ಇದೆ'' ಎಂದನು.

''ನಿಮ್ಮಾಸೆ ಏನು ಅಂತ ಹೇಳಿ.''

''ನನ್ನಾಸೆ ಏನೇ ಆಗಿದ್ದರೂ ಈಡೇರಿಸುತ್ತೀಯ ಚಂದ್ರಲೇಖ ಡಿಯರ್.''

ಅವಳು ಮಾದಕ ರೀತಿಯಲ್ಲಿ ನಗುತ್ತಾ ''ನನ್ನ ಕಂಡೀಷನ್‌ಗಳಿಗೆ ಒಪ್ಪಿಕೊಂಡ್ರೆ...'' ಎನ್ನುತ್ತಿರುವಾಗಲೇ ಅವರು ''ಇವತ್ತು ನನ್ನ ಬರ್ತ್‌ಡೇ. ನೀನು ರಾತ್ರಿ ಎಂಟು ಗಂಟೆಗೆ ಬರಬೇಕು. ನೀನೇ ನಿನ್ನ ಕೈಯಾರೆಂ ಕೇಕ್ ಕಟ್ ಮಾಡಿಸಬೇಕು. ಆಮೇಲೆ ರಾತ್ರಿ ಪೂರ್ತಿ ನನ್ನ ಜೊತೆ ಇದ್ದು ಫಾರಿನ್ ಗುಂಡಿನ ಪಾರ್ಟಿಗೆ ಕಂಪನಿ ಕೊಡಬೇಕು'' ಎಂದರು.

''ಆಗಲಿ ಸಾರ್. ಬಟ್...''

''ನಿನ್ನ ಡಿಮ್ಯಾಂಡ್ ಎಷ್ಟು?''

''ಹನ್ನೆರಡು ಲಕ್ಷ.''

''ನಾನು ಹದಿನೈದು ಲಕ್ಷ ಕೊಡ್ತೀನಿ.''

ಅವಳು ಪುಳುಕಗೊಂಡಳು. ಒಂದು ರಾತ್ರಿಗೆ ಹದಿನೈದು ಲಕ್ಷ...! ಐದು ಲಕ್ಷಕ್ಕಿಂತ ಯಾರೂ ಜಾಸ್ತಿ ಕೊಟ್ಟಿರಲಿಲ್ಲ. ಅವಳೀಗ ಉತ್ಸಾಹದಿಂದ ''ನಾನು ಬಂದ ಕೂಡಲೇ ಪೇಮೆಂಟ್ ಮಾಡ್ಬೇಕು. ಆಮೇಲೆ...'' ಎಂದು ಮತ್ತೇರುವ ರೀತಿ ನಕ್ಕಳು.

''ಚಂದ್ರಲೇಖ... ನೀನು ಹೇಳಿದಂತೆ ಲಕ್ಷಗಳಿರುವ ಸೂಟ್‌ಕೇಸ್ ರೆಡಿ ಮಾಡಿರುತ್ತೀನಿ. ನೀನು ತುಂಬಾ ಗ್ರಾಂಡ್ ಆಗಿ, ಗ್ಲಾಮರಸ್ ಆಗಿ ಕಾಣುವ ರೀತಿ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ಬರಬೇಕು.''

ಅವಳು ನಗುತ್ತಾ ''ಆಗಲಿ ಡಿಯರ್. ನೀವು ರಸಿಕ ಶ್ರೀಮಂತ ಅಂತ ಕಾಣುತ್ತೆ. ನಿಮ್ಮ ರಸಿಕ, ಶೃಂಗಾರತೆಗೆ ನಾನು ಕೋ ಆಪರೇಟ್ ಮಾಡ್ತೀನಿ.''

ಶ್ರೀಮಂತ ಜಿನೇಂದ್ರ ಏನೋ ಒಂದು ರೀತಿಯಲ್ಲಿ ನಗಾಡಿದನು. ನಗು... ನಗು ವಿಲಕ್ಷಣವಾಗಿದೆ. ಹದಿನೈದು ಲಕ್ಷ ಬರಲಿದೆ ಎಂಬ ಗುಂಗಿನಲ್ಲಿದ್ದ ಅವಳು ನಗುವಿನಲ್ಲಿದ್ದ ವಿಲಕ್ಷತೆಯನ್ನು ಗಮನಿಸಲಿಲ್ಲ. ಕನಸು ನನಸಾಗಲಿದೆ ಅವನು ಶ್ರೀಮಂತ ಬಂಗಲೆಯ ಡಿಲಕ್ಸ್ ಕೊಠಡಿಯಲ್ಲಿ ಕುಳಿತಿದ್ದಾನೆ.

ರಾತ್ರಿ ಏಳೂವರೆ! ಅವನು ಅಲ್ಲಿಗೆ ಬಂದು ಅರ್ಧ ಗಂಟೆ ಆಗಿದೆ. ಅವನಿಗೆ ಇದೇನು ಕನಸೋ, ಭ್ರಮೆಯೋ ಒಂದು ಸಹ ಅರ್ಥ ಆಗುತ್ತಿಲ್ಲ. ಟೇಬಲ್ ಮೇಲೆ ಎಲ್ಲಾ ಇದೆ. ಬಿಯರ್ ಸೀಸೆಗಳು, ಚಿಕನ್65 – ಮಂಚೂರಿ, ಬಟರ್ ರೋಟಿ, ಚಿಕನ್ ಮಸಾಲ. ಅವನಿಗೆ ಸೆಕ್ರೆಟರಿ ಬಂದು ಎಚ್ಚರಿಕೆ ನೀಡಿದ್ದನು. ''ನಿನಗೆ ಟೈಂಪಾಸ್ ಮಾಡಲು ಬಿಯರ್ ಕೊಡಲಾಗಿದೆ. ಚೆನ್ನಾಗಿ ತಿನ್ನು. ಆದರೆ ಜಾಸ್ತಿ ಕುಡಿಯಬೇಡ. ನಿದ್ದೆ ಬಂದರೆ...'' ಎಂದಾಗ ಆ ಯುವಕ ಗಾಬರಿ, ಆತುರದಿಂದ ''ಇಲ್ಲ... ಇಲ್ಲ... ನಾನು ಬಿಯರ್ ಸಹ ಕುಡಿಯೋಲ್ಲ'' ಎಂದನು. ಸೆಕ್ರೆಟರಿ ನಗಾಡಿದನು.

ಅವನು ಚಿಕನ್ ಐಟಂಗಳನ್ನು ತಿನ್ನುತ್ತಾ ಆಕಸ್ಮಿಕವಾಗಿ ತಿರುಗಿದನು. ಅಲ್ಲಿರುವ ಕನ್ನಡಿಯಲ್ಲಿ ಇವನ ಪ್ರತಿರೂಪ ಕಂಡು ಬಂದಿತು. ಅವನೇ ಮುಖ ಸಿಂಡರಿಸಿದನು. ಕಡುಕಪ್ಪು ಬಣ್ಣದ ದೇಹದವನು. ತೆಳ್ಳಗೆ ಎತ್ತರವಾಗಿದ್ದಾನೆ. ಮುಖದಲ್ಲಿ ಸಿಡುಬಿನ ಕಲೆಗಳಿವೆ. ಗೆಡ್ಡೆ ಕಣ್ಣುಗಳು. ಉಬ್ಬಿಕೊಂಡು ತುಟಿಗಳಿಂದ ಸ್ವಲ್ಪ ಮುಂದೆ ಬಂದಿದೆ ಹಲ್ಲು. ನೀಟಾಗಿ ಶೇವ್ ಮಾಡಿದ್ದಾನೆ. ಸೆಂಟ್ ಹಾಕಿಕೊಂಡಿದ್ದಾನೆ. ಆದರೂ ಸಹ ತನ್ನ ಪ್ರತಿರೂಪವನ್ನು ಕನ್ನಡಿಯಲ್ಲಿ ನೋಡಿಕೊಂಡು ಮುಜುಗರ ಪಡುತ್ತಿದ್ದಾನೆ. ನಾನು ಚೆನ್ನಾಗಿಲ್ಲ. ಅವಳು ಒಪ್ಪಿಕೊಳ್ಳುತ್ತಾಳ? ರಾತ್ರಿ ರತಿಯಾಗುತ್ತಾಳ? ಕನ್ನಡಿಯಲ್ಲಿ ತನ್ನ ಪ್ರತಿರೂಪ ನೋಡಿಕೊಂಡು ಮುಜುಗರ ಪಡುತ್ತಿರುವ ಯುವಕ ಯಾರು?

ಬಾಳಪ್ಪಗೌಡ...! ಹೋಟೆಲ್ ಕೆಲಸಗಾರ. ಚಂದ್ರಲೇಖ ಎಂಬ ಸಿನಿಮಾ ನಟಿಯ ಅಭಿಮಾನಿ. ಅವಳ ಸೌಂದರ್ಯದ ಆರಾಧಕ. ವಿಚಿತ್ರ ಏನು ಗೊತ್ತೆ ? ಅವನು ಈ ಶ್ರೀಮಂತ ಕಟ್ಟಿಸಿರುವ, ನಗರದ ಹೊರವಲಯದಲ್ಲಿರುವ ಫಾರಂ ಹೌಸ್‌ನ ರೂಮಲ್ಲಿ ಕುಳಿತು ಚಂದ್ರಲೇಖಳ ಬಗ್ಗೆ ಕನಸು ಕಾಣುತ್ತಿದ್ದಾನೆ. ಇವನನ್ನು ಇಲ್ಲಿಗೆ ಕರೆದುಕೊಂಡು ಬಂದಿರೋದು ಯಾರು? ಶ್ರೀಮಂತ ಜಿನೇಂದ್ರ ಬೈರವೇಶ್ವರ...! ಎಲ್ಲಾ ನೆನಪಾಗುತ್ತಿದೆ.

●●●

ಬಾಳಪ್ಪಗೌಡ ಚಂದ್ರಲೇಖಳ ಹೊಸ ಸಿನಿಮಾದ ಪೋಸ್ಟರ್ ನೋಡುತ್ತಾ ನಿಂತಿರುವಾಗ, ಕಾರೊಂದು ಬಂದು ಇವನ ಸಮೀಪದಲ್ಲಿ ನಿಂತುಕೊಂಡಿತು. ಅವನೀಗ ಗಾಬರಿಯಿಂದ ತಿರುಗಿದನು.

ಸೆಕ್ರೆಟರಿ ಇಳಿದು ಬಂದು ಇವನಿಗೆ ಫೋಟೋಗಳಿರುವ ಆಲ್ಬಂ ಕೊಟ್ಟನು. ಅವನಿಗೆ ಗಾಬರಿಯಾಯಿತು. ಅಪರಿಚಿತ ಬಂದು ದಿಢೀರ್ ಅಂತ ಆಲ್ಬಂ ಕೊಟ್ಟರೆ ಗಾಬರಿ ಆಗದಿರಲು ಸಾಧ್ಯವೆ?

''ಹೂಂ... ಆಲ್ಬಂ ನೋಡು.''

ಅನುಮಾನ, ಅಂಜಿಕೆಯಿಂದಲೇ ಆಲ್ಬಂ ಓಪನ್ ಮಾಡಿ ನೋಡಿದ ಕೂಡಲೇ ಇಡೀ ಶರೀರದಲ್ಲಿ ಸುಖದ ಕಂಪನ ಉಂಟಾಯಿತು. ಇವನ ಕನಸಿನ ಕಾಮಿನಿ, ಮೆಚ್ಚಿನ ನಟಿ ಚಂದ್ರಲೇಖ ಸೌಂದರ್ಯ ತೆರೆದು ವಿವಿಧ ಭಂಗಿಗಳಲ್ಲಿ ಪೋಸ್ ಕೊಟ್ಟಿರುವ, ರಸಿಕ ಮತ್ತು ಶೃಂಗಾರದ ಫೋಟೋಗಳು. ಪರ್ಸನಲ್ ಆಲ್ಬಂ. ಸಿನಿಮಾದಲ್ಲಿ ತೋರಿಸಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅವಳು ನಗ್ನಳಾಗಿ (ಅರೆನಗ್ನತೆ) ತೆರೆದುಕೊಂಡಿದ್ದಾಳೆ.

ಅವನು ಮೈಮರೆತಿರುವಾಗ ಸೆಕ್ರೆಟರಿ ಬಾಳಪ್ಪಗೌಡನ ಭುಜ ಹಿಡಿದು ಅಲ್ಲಾಡಿಸುತ್ತಾ ''ಕಾರಲ್ಲಿ ಸಾಹೇಬರು ಇದ್ದಾರೆ. ನಿನ್ನ ಜೊತೆ ಮಾತಾಡಬೇಕಂತೆ.''

ಅವನು ಗಾಬರಿಯಿಂದ ''ಅವನ್ಯಾರು ಅಂತ ಗೊತ್ತಿಲ್ಲ. ನಾನ್ಯಾಕೆ ಅವರ ಜೊತೆ ಮಾತಾಡಬೇಕು'' ಎಂದು ಕೇಳಿದನು.

''ಸಾಹೇಬರ ಮನೆಗೆ ನಟಿ ಚಂದ್ರಲೇಖ ಬರುತ್ತಿದ್ದಾಳೆ. ಅವಳನ್ನು ಹತ್ತಿರದಿಂದ ನೋಡಬಹುದು. ಅವಳ ಜತೆ ಊಟ ಮಾಡಬಹುದು.''

ಆಶ್ಚರ್ಯ... ನಂಬಲಾಗುತ್ತಿಲ್ಲ!

ಬಾಳಪ್ಪ ಚಡಪಡಿಸುತ್ತಿರುವಾಗ, ಸೆಕ್ರೆಟರಿ ''ಚಂದ್ರಲೇಖ ಸಾಹೇಬರ ಹತ್ತಿರ ಸಂಬಂಧಿ. ಈ ರಾತ್ರಿ ಅಲ್ಲೇ ಉಳಿಯುತ್ತಾಳೆ. ನೀನು ಕಾರಲ್ಲಿ ಬಾ. ಸಾಹೇಬರು ಎಲ್ಲಾ ಹೇಳುತ್ತಾರೆ'' ಎಂದಾಗ ಒಂದು ರೀತಿ ಭಾವ ಕಂಪನಕ್ಕೆ ಒಳಗಾಗಿ ಅವರ ಜತೆ ಕಾರಲ್ಲಿ ಕುಳಿತನು.

ಕಾರು ಚಲಿಸುತ್ತಿದೆ. ಶ್ರೀಮಂತ ಜಿನೇಂದ್ರ ಅವರು ಅವನ ಜತೆ ಮಾತಾಡುತ್ತಿದ್ದಾರೆ. ಇದು ನಿಜವೆ? ಹೇಗೆ... ಹೇಗೆ... ಸಾಧ್ಯ ? ಆದರೂ ಸುಖದ ಕಲ್ಪನೆಯ ಕಾರಣದಿಂದ ಇಡೀ ಶರೀರ ಬಿಸಿಯಾಗುತ್ತಿದೆ. ಕಂಪನ ಉಂಟಾಗುತ್ತಿದೆ.

●●●

ರಾತ್ರಿ ಎಂಟು ಗಂಟೆ. ಬುರ್ಕಾ ಹಾಕಿಕೊಂಡು ಬಂದಿರುವ ಚೆಲುವೆ ನಟಿ ಚಂದ್ರಲೇಖಳನ್ನು ಸ್ವಾಗತಿಸಿ ಕರೆದುಕೊಂಡು ಬಂದನು ಸೆಕ್ರೆಟರಿ. ಡ್ರೈವರ್ ಕಡೆ ತಿರುಗಿ ''ನೀನು ಕಾರನ್ನು ಮರಗಳ ನಡುವೆ ಮರೆಯಾಗಿರುವ ರೀತಿ ನಿಲ್ಲಿಸು. ನೀನು ಕಾರಲ್ಲಿ ಮಲಗಿರು'' ಎಂದಾಗ ಅವನು ಹೊರಟನು

ಚಂದ್ರಲೇಖ ''ಏ... ಬೆಳಿಗ್ಗೆ ಐದು ಗಂಟೆಗೆ ಮೊಬೈಲ್ ಅಲಾರಾಂ ಇಟ್ಟುಕೊಂಡಿರು'' ಎಂದಳು.

''ಇದೆಲ್ಲಾ ರೂಟಿನ್ ವರ್ಕ್. ನನಗೆಲ್ಲಾ ಗೊತ್ತಿದೆ. ಯೂ ಕ್ಯಾರಿ ಆನ್ ಮೇಡಂ.''

●●●

ಬಂಗಲೆಯ ಒಳಭಾಗಕ್ಕೆ ಬಂದಾಗ ಅಲ್ಲಿನ ಶ್ರೀಮಂತಿಕೆಯ ವೈಭವ ಕಂಡು ಅವಳೇನು ಬೆರಗಾಗಲಿಲ್ಲ. ಯಾಕೆ ಅಂದರೆ ಇಂತಹ ಹಲವಾರು ಶ್ರೀಮಂತರ ಐಷಾರಾಮಿ ಗೆಸ್ಟ್ ಹೌಸ್‌ನಲ್ಲಿ ರಾತ್ರಿ ಕಳೆದಿದ್ದಾಳೆ.

ಸೆಕ್ರೆಟರಿ ಬಂದು ಟೇಬಲ್ ಮೇಲೆ ಸೂಟ್‌ಕೇಸ್ ಇಟ್ಟು ''ಮೇಡಂ... ಇದರಲ್ಲಿ ಹದಿನೈದು ಲಕ್ಷ ರೂಪಾಯಿ ಇದೆ. ಬೇಕಾದರೆ ಒಂದು ಸಲ ಕೌಂಟ್ ಮಾಡಿಕೊಳ್ಳಿ'' ಎಂದನು. ಸೂಟ್‌ಕೇಸ್ ಓಪನ್ ಮಾಡಿದಳು. ನೋಟಿನ ಕಂತೆಗಳು ತುಂಬಿವೆ. ಅವಳಿಗೆ ಖುಷಿಯಾಗಿದೆ. ಇಂತಹ ಧಾರಾಳ ಶ್ರೀಮಂತನಿಗೆ ಚೆನ್ನಾಗಿ ಖುಷಿ ಕೊಟ್ಟು ಚೆನ್ನಾಗಿ ಹಣ ವಸೂಲಿ ಮಾಡಬೇಕು ಎಂದುಕೊಳ್ಳುತ್ತಿರುವಾಗಲೇ ಸೆಕ್ರೆಟರಿ ''ಮೇಡಂ... ಕಾರಿಡಾರ್‌ನಲ್ಲಿ ಇರೋ ನಾಲ್ಕನೆ ರೂಮಲ್ಲಿ ಸಾಹೇಬರು ಇದ್ದಾರೆ'' ಎಂದು ಹೇಳಿದಾಗ ಅವಳು ಸೂಟ್‌ಕೇಸ್ ಎತ್ತಿಕೊಂಡು ಹೊರಟಳು.

ನಾಲ್ಕನೆ ರೂಮಿನ ಬಾಗಿಲು ಓರೆಯಾಗಿ ತೆರೆದಿದೆ. ಅವಳಿಗೆ ಯಾವ ರೀತಿಯ ಟೆನ್‌ಷನ್ ಇರಲಿಲ್ಲ. ತುಂಬಾ ದಿನಗಳಿಂದ ರಹಸ್ಯವಾಗಿ ಇಂತಹ ಶ್ರೀಮಂತರ ರಸಿಕ ಆಟಗಳಿಗೆ ಸಹಕರಿಸುತ್ತಿದ್ದಾಳೆ. ಒಳಗೆ ಯಾರೂ ಕಾಣಲಿಲ್ಲ. ಅವಳು ಎಲ್ಲಾ ಕಡೆ ನೋಡುತ್ತಿರುವಾಗ, ಆ ರೂಮಿಗೆ ಅಟ್ಯಾಚ್ಡ್ ಆಗಿದ್ದ ಮತ್ತೊಂದು ರೂಮಿನಿಂದ ಶ್ರೀಮಂತ ಜಿನೇಂದ್ರ ಹೊರಗೆ ಬಂದನು. ಪರವಾಗಿಲ್ಲ ಐವತ್ತರ ಮೇಲೆ ವಯಸ್ಸಾಗಿದ್ದರೂ ಕಟ್ಟುಮಸ್ತಾಗಿದ್ದಾರೆ. ಬಾಹ್ಯರೂಪ ಪರವಾಗಿಲ್ಲ.

ಈ ರಾತ್ರಿ ಸ್ವಲ್ಪವಾದರೂ ನನಗೆ ಸೆಕ್ಸ್ ತೃಪ್ತಿ ಸಿಗುತ್ತದೆ ಎಂದುಕೊಳ್ಳುತ್ತಿರುವಾಗಲೇ ಆ ಶ್ರೀಮಂತ ಹತ್ತಿರ ಬಂದು ''ಚಂದ್ರಲೇಖ... ನೀನು ಕೇಳಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಪೇಮೆಂಟ್ ಆಗಿದೆ. ಈ ರಾತ್ರಿ ನೀನು ರತಿಯಾಗಿ ನಗು, ನಗುತ್ತಾ ಸುಖ ಕೊಡಬೇಕು. ಆದರೆ ನನಗಲ್ಲ... ನಾನು ನಿನ್ನ ಮೈ ಮುಟ್ಟುವುದಿಲ್ಲ'' ಎಂದರು.

☞ 14

13 ☞

ಅವಳಿಗೆ ಗಾಬರಿಯಾಗಲಿಲ್ಲ. ಅವರ ಕಡೆ ಒಂದು ರೀತಿ ವಿಚಿತ್ರ ಭಾವದಿಂದ ನೋಡುತ್ತಾ ''ಹಾಗಾದರೆ ಬೇರೆ ಯಾರಿಗೆ ನಾನು ರತಿಯಾಗಬೇಕು'' ಎಂದಳು.

''ಆ ರೂಮಲ್ಲಿರುವ ಯುವಕನಿಗೆ.''

ಯುವಕ ಬಂದ ಕೂಡಲೇ ಅವಳು ಪುಳುಕಗೊಂಡಳು. ಲಕ್ಷ-ಲಕ್ಷಗಳ ಹಣದೊಂದಿಗೆ, ರಾತ್ರಿ ಪೂರ್ತಿ ಪೂರ್ಣ ಪ್ರಮಾಣದಲ್ಲಿ ಸುಖ ಸಿಗುತ್ತದೆ ಎಂದುಕೊಂಡು ''ಹಾಗಾದರೆ ನಾನು ಆ ರೂಮಲ್ಲಿರುವ ಯುವಕನಿಗೆ ರತಿಯಾಗಬೇಕೆ?''

''ಹೌದು ಚಂದ್ರಲೇಖ. ಅವನಿಗೆ ನಿನ್ನ ಮೇಲೆ ತುಂಬಾ... ತುಂಬಾ ಹುಚ್ಚು ಆಸೆ, ಬಯಕೆಗಳಿವೆ. ಅವನಿಗೆ ನೀನು ಅವನು ಬಯಸಿದ ರೀತಿಯಲ್ಲಿ ಸುಖ ಕೊಡಬೇಕು.''

ಅವಳು ''ನಿಮ್ಮಿಷ್ಟ ಸಾರ್. ನೀವು ಮಾಡಿರೋ ಪೇಮೆಂಟ್‌ಗೆ ಬೆಲೆ ಕೊಟ್ಟು ನೀವು ಹೇಳಿರುವ ಯುವಕನ ಜೊತೆ ರಾತ್ರಿ ಕಳೆಯುತ್ತೇನೆ'' ಎಂದು ಅಲ್ಲಿಂದ ಹೊರಟಳು.

ಅವಳು ಹೋಗುತ್ತಿರುವುದನ್ನೇ ನೋಡುತ್ತಾ ಜಿನೇಂದ್ರ ನಿಶ್ಯಬ್ದವಾಗಿ ನಗುತ್ತಿದ್ದಾನೆ. ಅದು ವಿಲಕ್ಷಣ ರೀತಿಯ ನಗು. ಅವರ ಮುಖದಲ್ಲಿ ಏನೋ ಒಂದು ರೀತಿಯ ಪೈಶಾಚಿಕ ಆನಂದದ ಛಾಯೆ ಕಂಡು ಬರುತ್ತಿದೆ. ದೃಶ್ಯ ಬದಲಾಗಿದೆ...! ಬಂಗಲೆಯ ಬೆಡ್‌ರೂಮಲ್ಲಿ ವಿಶಾಲ ಪರದೆಯ ಹೋಮ್ ಸ್ಕ್ರೀನ್ ಟಿ.ವಿ. ಇದೆ. ಟೇಬಲ್ ಮೇಲೆ ಇಂಟರ್ ಕಾಮ್ ಕನೆಕ್ಷನ್ ಇರುವ ಮೈಕ್ರೋ ವೇವರ್ ಫೋನ್ ಇದೆ.

ದೃಶ್ಯ ಕಾಣುತ್ತಿದೆ. ಪಕ್ಕದ ರೂಮಿಗೆ ಕನೆಕ್ಷನ್ ಕೊಡಲಾಗಿದೆ. ಚೆಲುವೆ ಚಂದ್ರಲೇಖ, ತನ್ನ ಎದುರಿಗೆ ನಿಂತಿರುವ ಕುರೂಪಿ ಯುವಕನನ್ನು ಕಂಡು, ಮುಖ ಸಿಂಡರಿಸಿ ದೂರ ಸರಿಯುತ್ತಿದ್ದಾಳೆ. 'ಚಿಂಪಾಂಜಿ' ರೀತಿ ಇರುವ ಇವಳ ಅಭಿಮಾನಿ ಬಾಳಪ್ಪಗೌಡನೇ ಆ ಕುರೂಪಿ. ಈ ವಿಚಿತ್ರ-ವಿಲಕ್ಷಣ ಹುಚ್ಚ ಶ್ರೀಮಂತ ಅವಳಿಗೆ ಲಕ್ಷಗಳ ಲೆಕ್ಕದಲ್ಲಿ ಪೇಮೆಂಟ್ ಮಾಡಿ ಈ ಹೋಟೆಲ್ ಕೆಲಸಗಾರನಿಗೆ ಮಜಾ ಮಾಡಲು ಅವಕಾಶ ಮಾಡಿಕೊಟ್ಟಿದ್ದಾನೆ.

ಚಂದ್ರಲೇಖಳ ಬೆತ್ತಲೆ ಸೌಂದರ್ಯವನ್ನು ಯಾವ ರೀತಿ ಅನುಭವಿಸುತ್ತಾನೆ ಎಂಬ ದೃಶ್ಯ ಈ ಶ್ರೀಮಂತನಿಗೆ ಪರದೆಯ ಮೇಲೆ ಕಾಣುತ್ತಿದೆ. ಬಾಳಪ್ಪಗೌಡ ಹತ್ತಿರ ಬರುತ್ತಾ ಅವಳ ಸಿನಿಮಾಗಳ ಅಭಿಮಾನಿ ತಾನು ಮತ್ತು ಅವಳ ಬಗ್ಗೆ ಎರಡು ವರ್ಷಗಳಿಂದ ಕನಸು ಕಾಣುತ್ತಿದ್ದೇನೆ ಎಂಬುದನ್ನು ಹೇಳುತ್ತಾ ಅವಳ ಕೈ ಹಿಡಿದನು. ಬಲವಾಗಿ ಎಳೆದು ವದರುತ್ತಾ ದೂರ ಸರಿದು ನಿಂತಳು. ಅವನ ಮುಖದ ಮೇಲೆ ಕ್ಯಾಕರಿಸಿ ಉಗಿದು ಅಲ್ಲಿಂದ ಹೊರಟಳು. ಆದರೆ ರೂಮಿನ ಬಾಗಿಲನ್ನು ಹೊರಗಿನಿಂದ ಡೋರ್‌ಲಾಕ್ ಮಾಡಲಾಗಿದೆ...!

ಆಗ ಧ್ವನಿ ಕೇಳಿಬಂದಿತು. ಜಿನೇಂದ್ರ, ಗಡುಸಾಗಿ ಮಾತಾಡುತ್ತಿದ್ದಾನೆ. ''ಏ... ಏ ಚಂದ್ರಲೇಖ, ನಿನ್ನ ಜೊತೆ ಯಾರಾದರೂ ಮಜಾ ಮಾಡಲಿ. ನಿನಗೆ ಬೇಕಾಗಿರೋದು ಹಣ. ನಿನ್ನ ಅಹಂಕಾರ ಅದುಮಿಕೊಂಡು ಆ ಹುಚ್ಚ ಅಭಿಮಾನಿ ಬಯಸಿದಂತೆ ಸುಖ ಕೊಡು. ಈ ರಾತ್ರಿ ನಿನ್ನಿಂದ ಸುಖ ಸಿಗುತ್ತದೆ ಅಂತ ಅವನಿಗೆ ಆಸೆ ತೋರಿಸಿ ಕರೆದುಕೊಂಡು ಬಂದಿದ್ದೀನಿ.''

ಅವಳು ಬಾಗಿಲನ್ನು ಎಳೆದಾಡುತ್ತಾ ''ಇಲ್ಲ... ಇಲ್ಲ... ನಾನು ಒಪ್ಪಲಾರೆ... ಈ ಕಾಡು ಹಂದಿಗೆ ರತಿಯಾಗಲಾರೆ'' ಎಂದಳು. ಮೈಕ್ ಮೂಲಕ ಧ್ವನಿ ಕೇಳಿಸಿತು!

''ಏ ಬಾಳಪ್ಪ... ಈ ರಾತ್ರಿಗೆ ಇವಳು ನಿನ್ನವಳು. ಹೂಂ ಮಜಾ ಮಾಡು. ಅವಳು ಸಹಕರಿಸದಿದ್ದರೆ ರಾತ್ರಿ ಪೂರ್ತಿ ರೇಪ್ ಮಾಡಿ ಎಂಜಾಯ್ ಮಾಡು. ಕಮಾನ್... ನಿನ್ನ ಅಭಿಮಾನದ ನಟಿ ಈಗ ನಿನ್ನ ಎದುರಿಗೆ ಇದ್ದಾಳೆ. ಹೂಂ... ಹೋಗು... ರೇಪ್ ಮಾಡು.''

ಬಾಳಪ್ಪನ ಕಾಮ ಕೆರಳಿತು. ಅವನು ವಿಜೃಂಭಿಸಿದನು. ಆ ರೂಮಿನಿಂದ ಹೊರಗೆ ಹೋಗಲಾರದೆ, ಅವನಿಗೆ ಸಿಗದ ರೀತಿ ತಪ್ಪಿಸಿಕೊಳ್ಳುತ್ತಾ ಓಡುತ್ತಿದ್ದಾಳೆ. ಪ್ರಾಯದ ಬಲಿಷ್ಠ ಯುವಕ ಹಸಿದ ಹೆಬ್ಬುಲಿಯಿಂತೆ ಅವಳ ಮೇಲೆ ಬಿದ್ದು ಬಿಗಿಯಾಗಿ ತಬ್ಬಿಕೊಂಡನು. ಅವಳ ಮುದ್ದಾದ ಮುಖದ ತುಂಬಾ, ದಪ್ಪ ಗಾತ್ರದ ಕಪ್ಪು ಬಣ್ಣದ ತುಟಿಗಳಿಂದ ಮುತ್ತಿಡುತ್ತಿದ್ದಾನೆ. ಅವಳ ಕೆನ್ನೆ ಮೇಲೆ ಹಲ್ಲಿನ ಗುರುತು ಮೂಡಿಸಿದನು. ಅವಳ ತುಟಿಗಳನ್ನು ಪೆಪ್ಪರ್‌ಮೆಂಟ್ ರೀತಿಯಲ್ಲಿ ಚಪ್ಪರಿಸಿದನು. ಅವನ ಕೈ ಅವಳ ಬಲು ಆಕರ್ಷಕವಾದ ಎದೆ ಸೌಂದರ್ಯದ ಜತೆ ಆಡಿತು. ಅವನು ಈಗ ಕಾಮ ಉನ್ಮಾದಗೊಂಡವನಂತೆ ಅವಳ ಅಂಗ, ಅಂಗವನ್ನು ಒರಟಾಗಿ ಸ್ಪರ್ಶಿಸಿ ಆಡುತ್ತಿದ್ದಾನೆ. ಚಂದ್ರಲೇಖಳಿಗೆ ಅಭಿಮಾನಿಯ ಉದ್ರೇಕ, ಉನ್ಮಾದದ ಪರಾಕಾಷ್ಠೆಯ ಕಾಮ ಉತ್ತುಂಗತೆಯನ್ನು ಸಹಿಸಲಾಗುತ್ತಿಲ್ಲ. ಅವಳು ತತ್ತರಿಸುತ್ತಿದ್ದಾಳೆ. ಬರಗೆಟ್ಟವನಿಗೆ ಬಾದಾಮಿ ಹಲ್ವ ಸಿಕ್ಕಿದೆ. ಅವಳಿಗೆ ಉಸಿರಾಡಲು ಅವಕಾಶ ಕೊಡದಂತೆ ಮುಖ ಮುದ್ದಾಡುತ್ತಿದ್ದಾನೆ.

ಸಿಡುಬಿನ ಕಲೆ ತುಂಬಿರುವ ಮುಖ, ದಪ್ಪನೆಯ ಗಾತ್ರದ ಸೀಳು ತುಟಿಗಳು, ಅಬ್ಬ... ಆ ಕಡು ಕಪ್ಪು ಬಣ್ಣ, ಕೆಂಪಾಗಿರುವ ಗೆಡ್ಡೆ ಕಣ್ಣುಗಳನ್ನು ನೋಡಲಾಗುತ್ತಿಲ್ಲ ಅವಳಿಂದ. ಅವಳು ತತ್ತರಿಸುತ್ತಿದ್ದಾಳೆ. ಹೇಸಿಗೆ-ಅಸಹ್ಯವಾಗುತ್ತಿದೆ. ಅವಳು ವಿರೋಧಿಸುತ್ತಿದ್ದಾಳೆ. ಅವಳ ಮುದ್ದಾದ ಮುಖದಲ್ಲಿ ಹೇಸಿಗೆ, ಅಸಹ್ಯದ ಛಾಯೆ ಕಂಡು ಬರುತ್ತಿದೆ. ಹಸಿದವನು ಗಬಗಬನೆ ತಿನ್ನುವ ರೀತಿ. ತಾನು ಆರಾಧಿಸುತ್ತಿದ್ದ ಮತ್ತು ಕನಸಿನಲ್ಲಿ ಕಾಮಿಸುತ್ತಿದ್ದ, ಆರಾಧಿಸುತ್ತಿದ್ದ ಮತ್ತು ಕನಸಿನಲ್ಲಿ ಕಾಮಿಸುತ್ತಿದ್ದ ಚೆಲುವೆ ಚಂದ್ರಶೇಖ, ಇವನು ಅಭಿಮಾನಿಸುತ್ತಿದ್ದ ಸಿನಿಮಾ ಹೀರೋಯಿನ್ ಒಂದು ಭಾಗ ಬೆತ್ತಲಾಗಿ ಇವನ ಆಲಿಂಗನದಲ್ಲಿ ನಲಗುತ್ತಿದ್ದಾಳೆ.

ಬಾಳಪ್ಪಗೌಡನ ಕೈ ಅವಳ ಸೊಂಟದಿಂದ ಕೆಳಭಾಗಕ್ಕೆ ಜಾರಿತು...! ರತಿಗೆ ಪರದೆಯಂತೆ ಅಡ್ಡವಾಗಿದ್ದ ಆ ಕೊನೆಯ ಉಡುಪನ್ನು ತೆಗೆದನು. ಅವಳನ್ನು ಬಲವಾಗಿ ಒತ್ತಿಕೊಂಡು ವಿಜೃಂಭಿಸಿಬಿಟ್ಟನು. ನಗುತ್ತಿದ್ದಾನೆ... ಗಹಿಗಹಿ ನಗುತ್ತಿದ್ದಾನೆ. ವಿಚಿತ್ರ-ವಿಕಲ್ಪ ಶ್ರೀಮಂತ ಉದ್ಯಮಿ ಜಿನೇಂದ್ರ...! ಇದು ಪೈಶಾಚಿಕ ನಗು. ಕುರೂಪಿಯೊಬ್ಬ ಬರಗೆಟ್ಟವನ ರೀತಿ, ಸಾವಿರಾರು ಅಭಿಮಾನಗಳ ಮೆಚ್ಚಿನ ಹೀರೋಯಿನ್‌ಳನ್ನು ಅನುಭವಿಸಿ ಮಜಾ ಮಾಡುತ್ತಿದ್ದಾನೆ. ಅವನ ಕಾಮದಾಟದಲ್ಲಿ ತೀವ್ರತೆ, ಆತುರ ಕಂಡು ಬರುತ್ತಿದೆ. ಎಲ್ಲೆಲ್ಲೋ ಕೈ ಹಾಕುತ್ತಿದ್ದಾನೆ. ಮುತ್ತಿಟ್ಟು ತುಟಿಗಳ ರಸ ಹೀರುತ್ತಾ, ಸುಖದ ಪರಾಕಾಷ್ಠೆಯಲ್ಲಿ ಉನ್ಮಾದಗೊಂಡವನ ರೀತಿ ವಿಜೃಂಭಿಸುತ್ತಾ ಸುಖದ ಉತ್ತುಂಗತೆ ತಲುಪಿದನು. ವಿಚಿತ್ರ-ವಿಲಕ್ಷಣ ಬಯಕೆಯ ಶ್ರೀಮಂತ ಹುಚ್ಚು ಹಿಡಿದವನಂತೆ ನಗುತ್ತಿದ್ದಾನೆ. ನಗು... ನಗುವಿನೊಂದಿಗೆ, ಪರದೆಯ ಮೇಲೆ ಕಂಡು ಬರುತ್ತಿರುವ ಕುರೂಪಿ ಮತ್ತು ಚೆಲುವೆಯ ಕಾಮ ಮಿಲನದ ದೃಶ್ಯ ನೋಡಿ ಕುಣಿದಾಡುತ್ತಿದ್ದಾನೆ.

ಅವಳು ತತ್ತರಿಸಿ ಹೋಗಿದ್ದಾಳೆ. ದೇಹದ ಅಂಗ-ಅಂಗಗಳು ನೋವಿನಿಂದ ಮುಲುಗಾಡುತ್ತಿವೆ. ಅವಳು ಮೇಲೇಳಲಾರದ ಸ್ಥಿತಿಯಲ್ಲಿ ಮಲಗಿದ್ದಾಳೆ. ಸುಂದರವಾದ ದೇಹದ ಕೆಲವು ಕಡೆ ಹಲ್ಲಿನ ಗುರುತುಗಳು ಮೂಡಿವೆ. ಬಾಳಪ್ಪಗೌಡ ತಬ್ಬಿಕೊಂಡು ಮೈ ಸವರುತ್ತಾ ಮಲಗಿದ್ದಾನೆ. ಅವನನ್ನು ತಳ್ಳುವಂತಹ ಶಕ್ತಿ ಅವಳಲ್ಲಿ ಇರಲಿಲ್ಲ.

ಬೆಳಗಿನ ಜಾವದ ತನಕ ಅವಳನ್ನು ತೃಪ್ತಿ ಆಗುವ ತನಕ ಅನುಭವಿಸಿದನು.

ಬೆಳಗಿನ ಐದೂವರೆ. ತುಂಬಾ ಕಷ್ಟದಿಂದ ಎದ್ದು ಡ್ರೆಸ್ ಮಾಡಿಕೊಂಡು ಡ್ರೈವರ್‌ಗೆ ಫೋನ್ ಮಾಡಿದಳು. ಅವಳು ತೂರಾಡುತ್ತಿರುವ ರೀತಿ ನಡೆಯುತ್ತಾ ರೂಮಿನಿಂದ ಹೊರಗೆ ಬಂದಾಗ ಎದುರಾದನು ವಿಲಕ್ಷಣ ಬಯಕೆಗಳ ವಿಚಿತ್ರ ಹವ್ಯಾಸಗಳ ಶ್ರೀಮಂತ ಜಿನೇಂದ್ರ. ಅವಳು ಕೋಪದಿಂದ ಅವನ ಕಡೆ ನೋಡಿ ಕ್ಯಾಕರಿಸಿ ಉಗಿದು ಫಾರಂ ಹೌಸ್‌ನಿಂದ ಹೊರಗೆ ಬಂದಳು. ಇವಳ ಅವಸ್ಥೆ ಕಂಡು ಡ್ರೈವರ್ ಗಾಬರಿಯಾದನು. ಅವನಿಗೆ ಸುಮ್ಮನಿರು ಎಂಬಂತೆ ಸಂಜ್ಞೆ ಮಾಡಿ ಕಾರಲ್ಲಿ ಕುಳಿತಳು. ಕಾರು ಚಲಿಸುತ್ತಿದೆ. ಆಗ ನೆನಪಿಗೆ ಬಂದಿತು.

ಹದಿನೈದು ಲಕ್ಷ ರೂಪಾಯಿ ಇಟ್ಟಿದ್ದ ಸೂಟ್‌ಕೇಸ್...! ರೂಮಿಗೆ ಹೋಗುವಾಗ ಸೂಟ್‌ಕೇಸ್ ಎತ್ತಿಕೊಂಡು ಹೋಗಿದ್ದಳು. ಕುರೂಪಿಯ ಕಾಮದಾಹದ ಆಟ ಮುಗಿದ ಬೆಳಗಿನ ಜಾವ ಎಚ್ಚರವಾದಾಗ ಆ ಸೂಟ್‌ಕೇಸ್ ಇರಲಿಲ್ಲ. ಅಭಿಮಾನಿ ಬಾಳಪ್ಪಗೌಡ ಅದನ್ನು ಎತ್ತಿಕೊಂಡು ಬ್ಯಾಕ್ ಡೋರ್ ಮೂಲಕ ಎಸ್ಕೇಪ್ ಆಗಿದ್ದನು.

●●●

ಅವಳು ರೇವತಿ ಸೂರ್ಯ. ಅವಳ ತಂದೆ ಸೂರ್ಯಬಾಬು. ಅವಳು ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದು 'ಮಿಸ್ ಕರ್ನಾಟಕ' ಆಗಿದ್ದಳು. ಆದರೆ ಅವಳು ಬಡಕುಟುಂಬದವಳು. ಅವಳಿಗೆ ಹಣದ ಅಗತ್ಯ ತುಂಬಾ ಇತ್ತು. ಉಳಿದ ಗೆಳತಿಯರಂತೆ ಶ್ರೀಮಂತಿಕೆಯ ವೈಭವದ ಬದುಕು ಮತ್ತು ಐಷಾರಾಮಿ ಜೀವನ ನಡೆಸಲು ಹಂಬಲಿಸುತ್ತಿದ್ದಳು. 'ಮಿಸ್ ಕರ್ನಾಟಕ' ಸ್ಪರ್ಧೆಗೆ ಕೆಲವು ಹಂತಗಳಲ್ಲಿ ಧಾರಾಳವಾಗಿ ಹಣ ಖರ್ಚು ಮಾಡಬೇಕಿತ್ತು. ಆದರೆ ತಂದೆ ಎಲ್ಲೋ ಒಂದು ಕಡೆ ತುಂಬಾ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದರು. ಗೆಳತಿಯೊಬ್ಬಳ ಸಲಹೆಯ ಮೇರೆಗೆ ಅವಳು ತುಂಬಾ ರಹಸ್ಯವಾಗಿ ಶ್ರೀಮಂತರ ರತಿಯಾಗಿ ಹಣ ಸಂಪಾದನೆ ಮಾಡಲಾರಂಭಿಸಿದಳು. ಅವಳು ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದ ಮೇಲೆ ಈ ದಂಧೆಯಿಂದ ದೂರಾದಳು. ಆದರೆ ಇವಳ ರೆಗ್ಯುಲರ್ ಬ್ರೋಕರ್ ಹೇಳಿದ್ದೇನು?


ಶ್ರೀಮಂತ ಉದ್ಯಮಿ ಜಿನೇಂದ್ರ ಎಂಬುವವರು ಒಂದು ರಾತ್ರಿಗೆ ಮುವತ್ತು ಲಕ್ಷ ರೂಪಾಯಿ ಕೊಡುತ್ತಾರೆ ಎಂಬ ಆಫರ್ ಬಂದಿದ್ದರಿಂದ ಒಪ್ಪಿಕೊಂಡಿದ್ದಳು. ನಗರದ ಹೊರವಲಯದಲ್ಲಿರುವ ಫಾರಂಹೌಸ್‌ಗೆ ಬಂದಿದ್ದಳು. ಮುವತ್ತು ಲಕ್ಷ ರೂಪಾಯಿ ತುಂಬಿಸಿದ್ದ ಸೂಟ್‌ಕೇಸ್‌ಅನ್ನು ಅವಳ ಮುಂದೆ ಇಟ್ಟರು. ಆದರೆ ಆ ರಾತ್ರಿ ಅವಳನ್ನು ರೇಪ್ ಮಾಡುವ ರೀತಿ ಅನುಭವಿಸಿದ್ದು ಅಂಗವಿಕಲ...! ಒಂದು ಕಣ್ಣು ಇರಲಿಲ್ಲ. ಬಲಗಾಲು ಸ್ವಾಧೀನ ಇರಲಿಲ್ಲ. ಇವಳಿಗೆ ಗೊತ್ತಾಗದಂತೆ ಪಾನೀಯದಲ್ಲಿ ಕಡಿಮೆ ಪ್ರಮಾಣದಲ್ಲಿ ಅಮಲೇರುವ ಪುಡಿ ಬೆರೆಸಿದ್ದರು. ರಾತ್ರಿ ಪೂರ್ತಿ ಅಂಗವಿಕಲ ಕುರೂಪಿ ಇವಳನ್ನು ಮಜಾ ಮಾಡಿದ್ದನು. ಜಿನೇಂದ್ರ ಟಿವಿ ಪರದೆಯ ಮೇಲೆ ಈ ದೃಶ್ಯ ನೋಡಿ ಪೈಶಾಚಿಕ ಆನಂದ ಅನುಭವಿಸಿದ್ದನು, ಗಹಿಗಹಿ ನಗಾಡಿದನು.

ಈ ಚೆಲುವೆಗೆ ಎಚ್ಚರವಾಗಿದೆ. ಬೆತ್ತಲಾಗಿರುವ ಅವಳನ್ನು ಅಂಗವಿಕಲ ಕುರೂಪಿ ತಬ್ಬಿಕೊಂಡು ಮಲಗಿದ್ದಾನೆ. ಅವನೂ ಬೆತ್ತಲಾಗಿದ್ದಾನೆ. ಹೇಸಿಗೆ, ಅಸಹ್ಯ ಉಂಟಾಗಿ ಅಲ್ಲಿಂದ ಡ್ರೆಸ್ ಮಾಡಿಕೊಂಡು ಹೊರಗೆ ಬಂದಳು. ಐವತ್ತು ಲಕ್ಷದ ಸೂಟ್ ಕೇಸ್‌ಅನ್ನು ಆ ರಾತ್ರಿಯೇ ಜಿನೇಂದ್ರ ತರಿಸಿಕೊಂಡಿದ್ದನು. ಇದೇ ರೀತಿ ಹತ್ತಾರು ಚೆಲುವೆಯರನ್ನು ಕುರೂಪಿಗಳು, ವೃದ್ಧರು, ಅಂಗವಿಕಲರ ಜೊತೆ ಕಾಮದಾಟ ಆಡಿಸಿ ವಿಕೃತ-ವಿಕಲ್ಪ-ವಿಚಿತ್ರ ಬಯಕೆಗಳನ್ನು ತೀರಿಸಿಕೊಳ್ಳುತ್ತಿದ್ದನು. ಈ ರೀತಿ ಮೋಸ ಹೋಗಿದ್ದ ಚೆಲುವೆಯರಲ್ಲಿ ಯಾರೋ ಒಬ್ಬರು ನಿಗೂಢ ರೀತಿಯಲ್ಲಿ ಶ್ರೀಮಂತನನ್ನು ಕೊಲೆ ಮಾಡಿದ್ದರು. ☯

---

7 ☞

ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಜಾಯಿಂಟ್ ಕಮಿಷನರ್ ರಮೇಶ್ ಬಾನುತ್ ಸರ್ ಖುದ್ದು ಘಟನಾ ಸ್ಥಳಕ್ಕೆ ಆಗಮಿಸಿ ನೊಂದವರ ಹೇಳಿಕೆ ಪಡೆದುಕೊಂಡಿದ್ದಾರೆ. ಲೋಕಲ್ ಪೊಲೀಸ್, ಎಸಿಪಿ,



ಪ್ರಥಮ ವರ್ತಮಾನ ವರದಿ

(ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 173 ರ ಕೆಳಗೆ)

: CCH - 71,City Court Complex, Bangalore City

1. : Bengaluru City : Electronic City Sub Divl : Beguru PS
: 0122/2025 : 29/05/2025

2. : SC AND THE ST (PREVENTION OF ATTROCITIES) ACT, 1989 (U/s-3(2)(V),3(1)(g)); THE BHARATIYA NYAYA SANHITA (BNS), 2023 (U/s-115(2),138,100,304(2),310(2),324(5),331(4),351(3),352)

3. (a) : Thursday : 29/05/2025 : 29/05/2025
: 00:30:00 : 14.50:00
(b) : 29/05/2025 14:50:00 : Written
(c)
(d) : 1 , 14:50:00

4. (a)
Survey No-352,, Beguru, Bengaluru City, Karnataka, 560068
(b) : Towards North 2 Km From PS
(c) : DLF Road : BEAT 1
(d)

5.
(a) : Nagaraju : Muniswamy@Munishami@chinnappa
(b) : 31 (c) : Others Pl Specify
(d) : Hindu (e) : MADIGA
(f) : (g) : nagarajnaga78583@gmail.com
(h) : 8197771001 (i) : India
(j) :

ಇನ್‌ಸ್ಪೆಕ್ಟರ್ ಎಲ್ಲರೂ ಭೂಗಳ್ಳರ ಪರವಾಗಿದ್ದಾರೆ ಎಂಬ ದೂರು ಸಿಪಿ ಸಾಹೇಬರ ಕಿವಿಗೆ ಬಿದ್ದಿದೆ! ರಾತ್ರಿ ಸ್ಥಳಕ್ಕೆ ಬಂದಿದ್ದ ಬೇಗೂರು ಮತ್ತು ಹುಳಿಮಾವು ಪೊಲೀಸ್ ಹೊಯ್ಸಳ ವಾಹನದ ಎದುರೇ ನಾಲ್ಕು ಗಂಟೆ ದಲಿತರ ಮನೆ ದೇವಾಲಯ ತೆರವು ಕಾರ್ಯಾಚರಣೆ ಸುಸೂತ್ರವಾಗಿ ನಡೆದಿದೆ ಎಂದರೆ ಏನರ್ಥ?!

ನೂರು ಕೋಟಿಗೂ ಅಧಿಕ ಮಾರ್ಕೆಟ್ ಮೌಲ್ಯವಿರುವ ಈ ದಲಿತರ ಭೂಮಿ ಕಬಳಿಸಲು ಹಿರಿಯ ಪೊಲೀಸ್ ಅಧಿಕಾರಿಗಳಿಂದ ಕಾನ್‌ಸ್ಟೇಬಲ್‌ವರೆಗೂ ದುಡ್ಡು ಚೆಲ್ಲಲಾಗಿದೆ ಎಂಬ ಸುದ್ದಿ ಹರಿದಾಡುತ್ತಿವೆ! ಬೆಂಗಳೂರು ಇತಿಹಾಸದಲ್ಲೇ ಮೊದಲ ಬಾರಿಗೆ 500 ಅಪರಿಚಿತ ಗೂಂಡಾಗಳ ಮೇಲೆ ಎಫ್‌ಐಆರ್ ದಾಖಲಾಗಿದೆ!

ರಾತ್ರಿ ಸ್ಥಳಕ್ಕೆ ಬಂದು ಅಲ್ಲಿ ಅದಾಗಲೇ ಗೂಂಡಾಗಳು ಮೊದಲಿಗೆ ವಿದ್ಯುತ್ ಸಂಪರ್ಕ ಕಡಿದು, ನಂತರ ಜೆಸಿಬಿ ನುಗ್ಗಿಸಿ ಮನೆ ದೇವಸ್ಥಾನಗಳನ್ನು ಉರುಳಿಸುತ್ತಿದ್ದಾಗ, ಮುನಿಗನ ಮಕ್ಕಳು, ಮೊಮ್ಮಕ್ಕಳ ಚೀರಾಟ ಕೇಳಿಸಿಕೊಂಡ ಬೇಗೂರು ಗ್ರಾಮಸ್ಥರು ಟಾರ್ಚ್ ಹಿಡಿದುಕೊಂಡು ಬಂದು ಗುಂಪು ಸೇರಿದ್ದಾರೆ.

ರೌಡಿಗಳ ಆರ್ಭಟಕ್ಕೆ ಹೆದರಿ 112ಗೆ ಕರೆ ಮಾಡಿದ್ದು, ಬೇಗೂರು ಪೊಲೀಸ್ ಇನ್‌ಸ್ಪೆಕ್ಟರ್ ಕೃಷ್ಣಕುಮಾರ್ ಮತ್ತು ಸಿಬ್ಬಂದಿ ತಮ್ಮ ಟಾರ್ಚ್ ಬೆಳಕು ಬಿಟ್ಟುಕೊಂಡು ಸ್ಥಳ ಪರಿಶೀಲನೆ ಮಾಡಿ, ಈ ಜಾಗ ನಮ್ಮ ಠಾಣಾ ವ್ಯಾಪ್ತಿಗೆ ಬರುವುದಿಲ್ಲ ಎಂದು ವಾಪಸ್ ಹೋಗಿದ್ದವರು ಮುಂಜಾನೆ ಮತ್ತೆ ಬಂದು, ಹೋ..ಕತ್ತಲೆಯಲ್ಲಿ ಸರಿಯಾಗಿ ಕಾಣಲಿಲ್ಲ ಕಣ್ರೀ... ಈ ಜಾಗ ನಮ್ಮ ಪೊಲೀಸ್ ಠಾಣೆ ವ್ಯಾಪ್ತಿಗೇ ಬರುತ್ತೆ... ಎಂದು ಡ್ರಾಮಾ ಆಡಿದ್ದಾರೆ! ಅಷ್ಟೊತ್ತಿಗಾಗಲೇ ಈ ಸುದ್ದಿ ಕೆಲ ಮಾಧ್ಯಮಗಳಲ್ಲಿ ಬಿತ್ತರವಾಗಿದ್ದರಿಂದ, ಎಲ್ಲಿ ದಲಿತರು ಠಾಣೆ ಮುಂದೆ ಆತ್ಮಹತ್ಯೆ ಮಾಡಿಕೊಳ್ತಾರೋ ಎಂಬ ಭಯದಲ್ಲಿ ದೂರು ದಾಖಲಿಸಿ ಎಫ್‌ಐಆರ್ ಹರಿಯಲಾಗಿದೆ! ಆದರೆ, ಈವರೆವಿಗೂ ಯಾರನ್ನೂ ಆರೆಸ್ಟ್ ಮಾಡಿಲ್ಲ!



ಸ್ಥಳದಲ್ಲಿ ಪೊಲೀಸ್ ಪಹರೆ

ಅಂದು ರಾತ್ರಿ ಈ ಖಾಕಿದಾರಿಯ ಕಣ್ಮುಂದೆಯೇ ಸುಮಾರು 500 ಜನ ಗೂಂಡಾಗಳಿಂದ ದಲಿತರ ಮನೆ ಹಾಗೂ ದೇವಾಲಯ ಧ್ವಂಸವಾಗುತ್ತಿದಾದರೂ, ದಲಿತರ ಮೇಲೆ ಹಲ್ಲೆ ಮಾಡಿ ಕಿಡ್ನಾಪ್ ಮಾಡಿದರೂ ಕರ್ತವ್ಯ ನಿರ್ವಹಿಸದೇ, ಪಕ್ಕದ ಹುಳಿಮಾವು ಪೊಲೀಸ್ ಇನ್‌ಸ್ಪೆಕ್ಟರ್ ಕುಮಾರಸ್ವಾಮಿ ಅವರನ್ನು ಘಟನಾ ಸ್ಥಳಕ್ಕೆ ಕರೆಸಿಕೊಂಡು ಗಾಳಿಯಲ್ಲಿ ಗುಂಡು ಹಾರಿಸಿದರಾದರೂ, ಕಾನೂನು ಸುವ್ಯವಸ್ಥೆ ಕಾಪಾಡದೇ ಅಲ್ಲಿಂದ ಎಸ್ಕೇಪ್ ಆಗಿದ್ದಕ್ಕೆ ಈತನ ತಿಜೋರಿಗೆ ಎಷ್ಟು ಲಕ್ಷ ಬಂದಿರಬಹುದು? ಈ ಬಗ್ಗೆ ತನಿಖೆ ಆಗಲೀ, ಸಿದ್ದರಾಮಯ್ಯ ಸರ್ಕಾರ ಈ ಕೂಡಲೇ ಬೇಗೂರು ಇನ್‌ಸ್ಪೆಕ್ಟರ್‌ನನ್ನು ಸಸ್ಪೆಂಡ್ ಮಾಡಬೇಕು ಅಂತಿದ್ದಾರೆ ಭೂಮಿ ಕಳೆದುಕೊಂಡು ಬೀದಿ ಪಾಲಾಗಿರುವ ಬಡ ದಲಿತರು! ಅಂದಹಾಗೆ, ಭೂಗಳ್ಳತನದ ಆರೋಪಿ ರವಿಚಂದ್ರ ರೆಡ್ಡಿ ವಿರುದ್ಧ ಈಗಾಗಲೇ ದಲಿತ ದೌರ್ಜನ್ಯದ 'ಅಟ್ರಾಸಿಟಿ' ಕೇಸ್ ದಾಖಲಾಗಿದ್ದು, ಬೇಲ್ ಮೇಲೆ ಹೊರಗಿದ್ದಾನೆ. ಮಾನ್ಯ ನ್ಯಾಯಾಲಯ ಈತನಿಗೆ ಬೇಲ್ ನೀಡುವಾಗ ಕೆಲವು ಷರತ್ತುಗಳನ್ನು ಹಾಕಿರುತ್ತದೆ. ಈಗ ಅದನ್ನು ಈತ ಮೀರಿದ್ದಾನೆ. ನ್ಯಾಯಾಲಯ ಈಗ ಈತನ ವಿರುದ್ಧ ಕ್ರಮ ಕೈಗೊಳ್ಳಬೇಕಿದೆ! ☯



ಘಟನೆ ಬಗ್ಗೆ ವಿವರಿಸುತ್ತಿರೋ ಕುಟುಂಬ

# ಕನ್ನಡ ಚಿತ್ರರಂಗದಲ್ಲೂ ಬ್ಯುಸಿ ಪರಭಾಷೆಯತ್ತ ಸಂಜನಾ ಆನಂದ್ ಫೋಕಸ್

ಕನ್ನಡ ನಟಿಯರು ಒಬ್ಬೊಬ್ಬರಾಗಿ ಪರಭಾಷಾ ಚಿತ್ರರಂಗಗಳತ್ತ ಮುಖ ಮಾಡುತ್ತಿದ್ದಾರೆ. ರಶ್ಮಿಕಾ ಮಂದಣ್ಣ ಬಳಿಕ ಶ್ರೀಲೀಲಾ, ನೇಹಾ ಶೆಟ್ಟಿ, ನಭಾ ನಟೇಶ್, ಸಪ್ತಮಿ ಗೌಡ, ಆಶಿಕಾ ರಂಗನಾಥ್ ಹೀಗೆ ಹಲವರು ತೆಲುಗು, ತಮಿಳು ಸಿನಿಮಾಗಳಲ್ಲಿ ಬಣ್ಣ ಹಚ್ಚಿದ್ದಾರೆ. ಇದೀಗ ಸಂಜನಾ ಆನಂದ್ ಸರದಿ.



'ಕೆಮೆಸ್ಟ್ರಿ ಆಫ್ ಕರಿಯಪ್ಪ' ಚಿತ್ರದ ಮೂಲಕ ಸಂಜನಾ ಸ್ಯಾಂಡಲ್‌ವುಡ್ ಪ್ರವೇಶಿಸಿದ್ದರು. ಬಳಿಕ 'ಸಲಗ' ಚಿತ್ರದಲ್ಲಿ ದುನಿಯಾ ವಿಜಯ್ ಜೋಡಿಯಾಗಿ ಸಕ್ಸಸ್ ಕಂಡಿದ್ದರು. 'ಶೋಕಿವಾಲ', 'ವಿಂಡೋ ಸೀಟ್' ಹೀಗೆ ಒಂದಷ್ಟು ಸಿನಿಮಾಗಳಲ್ಲಿ ನಟಿಸಿದರು. ಇದೇ ವರ್ಷ ಬಂದಿದ್ದ 'ರಾಯಲ್' ಚಿತ್ರದಲ್ಲಿ ವಿರಾಟ್ ಜೋಡಿಯಾಗಿದ್ದರು. 'ನೇನು ಮೀಕು ಬಾಗ ಕಾವಲ್ಸಿನವಾಡಿನಿ' ಎಂಬ ತೆಲುಗು ಚಿತ್ರದಲ್ಲಿ ನಟಿಸಿ ಬಂದಿದ್ದಾರೆ. ಇದೀಗ 'ಫುಲ್ ಬಾಟಲ್' ಎನ್ನುವ ಮತ್ತೊಂದು ತೆಲುಗು ಚಿತ್ರದಲ್ಲಿ ನಟಿಸುತ್ತಿದ್ದಾರೆ.

'ಹನಿಮೂನ್' ಎಂಬ ವೆಬ್ ಸೀರಿಸ್‌ನಲ್ಲಿ ನಾಗಭೂಷಣ್ ಜೋಡಿಯಾಗಿ ಸಂಜನಾ ಮಿಂಚಿದ್ದರು. ಇಂಜಿನಿಯರಿಂದ ಮುಗಿಸಿ ಸಾಫ್ಟ್‌ವೇರ್ ಕಂಪನಿಯಲ್ಲಿ ಸಂಜನಾ ಕೆಲಸಕ್ಕೆ ಸೇರಿದ್ದರು. ಸ್ನೇಹಿತರು ನಿರ್ಮಿಸಿದ ಶಾರ್ಟ್ ಫಿಲ್ಮ್‌ನಲ್ಲಿ ನಟಿಸುವ ಅವಕಾಶ ಸಿಕ್ಕಿತ್ತು. ಅದನ್ನು ನೋಡಿ 'ಕೆಮೆಸ್ಟ್ರಿ ಆಫ್ ಕರಿಯಪ್ಪ' ಚಿತ್ರದ ಆಡಿಷನ್‌ಗೆ ಕರೆದಿದ್ದರು. ಆಯ್ಕೆ ಕೂಡ ಆಗಿದ್ದರು. ಹೀಗೆ ಆಕಸ್ಮಿಕವಾಗಿ ಚಿತ್ರರಂಗಕ್ಕೆ ಸಂಜನಾ ಎಂಟ್ರಿ ಕೊಟ್ಟಿದ್ದರು.

ಯಾವುದೇ ಆಕ್ಟಿಂಗ್ ಸ್ಕೂಲ್‌ನಲ್ಲಿ ಸಂಜನಾ ನಟನೆಯ ಅಆಇಈ ಕಲಿಯಲಿಲ್ಲ, ಮೊದಲ ಸಿನಿಮಾ ಮಾಡುವಾಗ ವರ್ಕ್‌ಷಾಪ್ ಮಾಡಲಾಗಿತ್ತು. ಅದು ಕ್ಯಾಮರಾ ಎದುರಿಸಲು ಸಹಾಯ ಮಾಡಿತ್ತು. ಇನ್ನು ಡ್ಯಾನ್ಸ್ ಎಂದರೆ ಬಹಳ ಇಷ್ಟ ಇದು ನಟಿಸೋಕೆ ಪ್ಲಸ್ ಆಗಿತ್ತು. ಬಳಿಕ ಒಳ್ಳೆ ಒಳ್ಳೆ ಅವಕಾಶಗಳು ಹುಡುಕಿ ಬಂದಿದ್ದವು.

ಸದ್ಯ ಕನ್ನಡ ಸಿನಿಮಾಗಳಲ್ಲಿ ಕೂಡ ಸಂಜನಾ ಬ್ಯುಸಿಯಾಗಿದ್ದಾರೆ. ಯುವರಾಜ್‌ಕುಮಾರ್ ಜೋಡಿಯಾಗಿ 'ಎಕ್ಕ' ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರದ ಇಬ್ಬರೂ ನಾಯಕಿಯರಲ್ಲಿ ಒಬ್ಬರಾಗಿದ್ದಾರೆ. 'ಹಯಗ್ರೀವ' ಹಾಗೂ 'ಮುಧೋಳ' ಚಿತ್ರದಲ್ಲಿ ಕೂಡ ಸಂಜನಾ ಮಿಂಚಿದ್ದಾರೆ. ಈ ಮೂರು ಸಿನಿಮಾಗಳು ಇದೇ ವರ್ಷ ತೆರೆಗೆ ಬರಲಿದೆ.

ಕನ್ನಡದಲ್ಲಿ ಮತ್ತಷ್ಟು ಕತೆಗಳನ್ನು ಕೇಳುತ್ತಿದ್ದಾರೆ. ಆದಷ್ಟು ಬೇಗ ಮುಂದಿನ ಸಿನಿಮಾ ಘೋಷಣೆ ಮಾಡಲಿದ್ದಾರೆ.

ಚಿತ್ರರಂಗದಲ್ಲಿ ಬ್ಯುಸಿಯಾಗಿರುವ ಬಗ್ಗೆ ಸಂಜನಾ ಆನಂದ್ ಮಾತನಾಡಿದ್ದಾರೆ. ರಾಯಲ್ ಚಿತ್ರದಲ್ಲಿ ಕೊನೆಯದಾಗಿ ನಾಯಕಿಯಾಗಿ ನಟಿಸಿದ್ದೆ. 'ಸೂತ್ರಧಾರ' ಚಿತ್ರದ ಹಾಡೊಂದರಲ್ಲಿ ಮಾತ್ರ ಕಾಣಿಸಿಕೊಂಡಿದ್ದೆ. ಬಹಳ ಖುಷಿಯಾಗುತ್ತಿದೆ. ಜೂನ್ 18ಕ್ಕೆ 'ಎಕ್ಕ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ಅದರ ಪ್ರಚಾರಕ್ಕೆ ಸಿದ್ಧತೆ ನಡೆಯುತಿದೆ. ನಿನ್ನೆ ನನ್ನ ಭಾಗದ ಚಿತ್ರೀಕರಣ ಮುಗೀತು. ಎರಡ್ಮೂರು ದಿನಗಳಲ್ಲಿ ಸಿನಿಮಾ ಕಂಪ್ಲೀಟ್ ಆಗುತ್ತದೆ ಎಂದು ಸಂಜನಾ ಹೇಳಿದ್ದಾರೆ.

ಯುವ ರಾಜ್‌ಕುಮಾರ್ ಅವರ ಜೊತೆ ನಟಿಸುತ್ತಿರುವ 'ಎಕ್ಕ' ಚಿತ್ರದಲ್ಲಿ ಒಳ್ಳೆ ಪಾತ್ರ ಸಿಕ್ಕಿದೆ. ಇಬ್ಬರೂ ನಾಯಕಿಯರಲ್ಲಿ ನಾನು ಒಬ್ಬಳು, ಇಬ್ಬರಿಗೂ ಸಮನಾದ ಸ್ಕ್ರೀನ್ ಸ್ಪೇಸ್ ಸಿಕ್ಕಿದೆ. ಯಾರ ಪಾತ್ರ ಹೆಚ್ಚು ಕಮ್ಮಿ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಪಾತ್ರ ಏನು ಎನ್ನುವುದನ್ನು ತೆರೆಮೇಲೆಯೇ ನೋಡಬೇಕು. ಪಿಆರ್‌ಕೆ ಬ್ಯಾನರ್‌ನಲ್ಲಿ ಕೆಲಸ ಮಾಡಿದ ಖುಷಿಯಿದೆ. ಅಪ್ಪು ಸರ್ ಜೊತೆ ಕೆಲಸ ಮಾಡುವ ಆಸೆ ಇತ್ತು. ಆದರೆ ಪಿಆರ್‌ಕೆ ಸಂಸ್ಥೆಯಲ್ಲಿ ಮಾಡುವಂತಾಗಿದೆ. 'ರಾಯಲ್' ಬಳಿಕ ನಂಬಿಕೆ ಇಟ್ಟು ಜಯಣ್ಣ ಬ್ಯಾನರ್‌ನಲ್ಲಿ ಅವಕಾಶ ಕೊಟ್ಟಿದ್ದಾರೆ. ಕೆಆರ್‌ಜಿ ಟಾಪ್ ಬ್ಯಾನರ್. ಹೀಗೆ ಮೂರು ಬ್ಯಾನರ್‌ಗಳು ಒಟ್ಟಾಗಿರುವ ಚಿತ್ರದಲ್ಲಿ ನಟಿಸುತ್ತಿರುವ ಖುಷಿಯಿದೆ. ಸಿನಿಮಾ ಬಿಡುಗಡೆಗೆ ಕಾಯುತ್ತಿದ್ದೇನೆ ಎಂದಿದ್ದಾರೆ.

'ಹಯಗ್ರೀವ' ಸಿನಿಮಾ ಕೂಡ ಇದೇ ವರ್ಷ ಬಿಡುಗಡೆ ಆಗಬಹುದು ಎನ್ನುತ್ತಿದ್ದಾರೆ. 'ಮುಧೋಳ್' ಸಿನಿಮಾ ಶೂಟಿಂಗ್ ಇನ್ನೆರಡು ದಿನ ಬಾಕಿಯಿದೆ. ವರ್ಷಾಂತ್ಯಕ್ಕೆ ಆ ಸಿನಿಮಾ ಬರಬಹುದು. ಇನ್ನು ಎರಡೂ ಸಿನಿಮಾಗಳ ಬಗ್ಗೆ ಮಾತುಕತೆ ನಡೆಯುತ್ತಿದೆ. ಫೈನಲ್ ಆಗಬೇಕು. ಕೊನೆ ಹಂತದ ಮಾತುಕತೆಯಲ್ಲಿದ್ದೀನಿ ನೋಡಬೇಕು ಎಂದು ಮಾಹಿತಿ ನೀಡಿದ್ದಾರೆ. ಈಗ ಸದ್ಯ ತೆಲುಗು ತೆಲುಗು ಚಿತ್ರದಲ್ಲಿ ನಟಿಸ್ತಿದ್ದೀನಿ. ಹೊಸಬರ ತಂಡ. ಇನ್ನು ಹತ್ತು ದಿನಗಳ ಚಿತ್ರೀಕರಣ ಮಾತ್ರ ಬಾಕಿಯಿದೆ. ತಮಿಳಿನಿಂದ ಕೂಡ ಅವಕಾಶಗಳು ಬರುತ್ತಿವೆ. ಕತೆಗಳನ್ನು ಕೇಳುತ್ತಿದ್ದೇನೆ. ಮುಂದೆ ಅಳೆದು ತೂಗಿ ಪಾತ್ರಗಳನ್ನು ಒಪ್ಪಿಕೊಳ್ಳಬೇಕು ಎಂದುಕೊಂಡಿದ್ದೇನೆ ಅಂತ ಸಂಜನಾ ಆನಂದ್ ಮಾಹಿತಿ ನೀಡಿದ್ದಾರೆ.



# ಡೇರಿಂಗ್ ಬೋಲ್ಡ್ ಅವತಾರದಲ್ಲಿ ರಾಗಿಣಿ!

ರಾಗಿಣಿ ದ್ವಿವೇದಿ ಅವರ ಮುಂದಿನ ಚಿತ್ರ 'ಜಾವಾ'ದಲ್ಲಿ ಹಿಂದೆಂದೂ ಕಾಣದ ಡೇರಿಂಗ್ ಹಾಗೂ ಬೋಲ್ಡ್ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿ ರಾಜ್ ವರ್ಧನ್ ಜೊತೆಗೆ ರಾಗಿಣಿ ದ್ವಿವೇದಿ ನಾಯಕಿಯಾಗಿ ನಟಿಸುತ್ತಿದ್ದು, ಇದು ಬಾರ್ನ್ ಸ್ವಾಲೋ ಕಂಪನಿ ಬ್ಯಾನರ್ ಅಡಿಯಲ್ಲಿ ರಾಜ್ ವರ್ಧನ್ ಅವರ ಚೊಚ್ಚಲ ನಿರ್ಮಾಣದ ಚಿತ್ರವಾಗಿದೆ. ದೇವಾ ಚಕ್ರವರ್ತಿ ನಿರ್ದೇಶನದ, ಜಾವಾ ಕನ್ನಡ, ತೆಲುಗು ಮತ್ತು ತಮಿಳಿನಲ್ಲಿ ನಿರ್ಮಾಣವಾಗುತ್ತಿದ್ದು, ಉತ್ತಮ ಕಥಾಹಂದರದೊಂದಿಗೆ ಮಾಸ್ ಪ್ರಿಯರನ್ನು ಇಷ್ಟಪಡಿಸುವ ನಿರೀಕ್ಷೆಯಿದೆ.

ಜಾವಾದಲ್ಲಿ ರಾಗಿಣಿ ದ್ವಿವೇದಿಯದು ಪ್ರಮುಖ ಪಾತ್ರವಾಗಿದೆ. ಈ ಹಿಂದೆ ನೋಡಿಲ್ಲದ ಬೋಲ್ಡ್ ಅವತಾರದಲ್ಲಿ ಆಕೆ ಕಾಣಿಸಿಕೊಂಡಿದ್ದಾರೆ. ಪ್ರತಿ ಪ್ರೇಮ್‌ನಲ್ಲಿಯೂ ಕಮಾಂಡಿಂಗ್ ಮಾಡುವ ದಿಟ್ಟ ಮಹಿಳಾ ನಾಯಕಿಯಾಗಿದ್ದಾರೆ. ರಾಗಿಣಿ ಕೇವಲ ಈ ಚಿತ್ರದಲ್ಲಿ ನಟಿಸುತ್ತಿಲ್ಲ, ಅವರು R Queen ಆಗಿ ಹೊರಹೊಮ್ಮಿದ್ದಾರೆ ಎಂದು ನಿರ್ದೇಶಕ ದೇವಾ ತಿಳಿಸಿದರು.

ಆಕೆಯ ಜನ್ಮದಿನದಂದೂ ಬಿಡುಗಡೆಯಾದ ಫಸ್ಟ್ ಲುಕ್ ಪೋಸ್ಟರ್‌ನಲ್ಲಿ ಅವರಲ್ಲಿ ಇರುವ ಶಕ್ತಿ ಏನೆಂಬುದು ತೋರಿಸಿದೆ ಎಂದು ಅವರು ಹೇಳಿದರು.

# ಕಂಗನಾಗೆ ಇಲ್ಲ ಬಿಳಿ ಕೂದಲ ಬಗ್ಗೆ ಚಿಂತೆ!

ಕಂಗನಾ ರಣಾವತ್ ತಮ್ಮ ವಯಸ್ಸು ಮತ್ತು ಬಿಳಿ ಕೂದಲಿನ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದರೆ. ವಯಸ್ಸಾಗುವುದು ಸಂತೋಷ ಎಂದು ಹೇಳಿದ್ದಾರೆ. ಬಾಲಿವುಡ್ನಲ್ಲಿ ವಯಸ್ಸಾದ ನಟಿಯರಿಗೆ ಅವಕಾಶ ಕಡಿಮೆ ಎಂಬುದು ಗೊತ್ತು. ಆದರೆ, ರಾಜಕೀಯದಲ್ಲಿ ವಯಸ್ಸು ಗೌರವಕ್ಕೆ ಪಾತ್ರ ಎಂದು ಅವರು ನಂಬುತ್ತಾರೆ.

ಬಾಲಿವುಡ್ ನಟಿ ಕಂಗನಾ ರಣಾವತ್ ನಾಯಕಿಯಾಗಿ ಹಲವು ಚಿತ್ರಗಳಲ್ಲಿ ನಟಿಸುವ ಮೂಲಕ ಎಲ್ಲರನ್ನೂ ಮೆಚ್ಚಿಸಿದ್ದಾರೆ. ಅಲ್ಲದೆ, ಕಂಗನಾ ಅವರ ಹೆಸರು ಯಾವಾಗಲೂ ವಿವಾದಗಳಲ್ಲಿ ಕೇಳಿಬರುತ್ತದೆ. ಚುನಾವಣೆಯಲ್ಲಿ ಗೆದ್ದ ನಂತರ ಕಂಗನಾ ಸಂಸದರಾದರು. ಅವರು ಇತ್ತೀಚೆಗೆ 'ಎಮರ್ಜೆನ್ಸಿ' ಚಿತ್ರದ ಮೂಲಕ ಪ್ರೇಕ್ಷಕರ ಮುಂದೆ ಬಂದರು. ಈ ಸಿನಿಮಾ ಮಿಶ್ರ ಪ್ರತಿಕ್ರಿಯೆ ಪಡೆಯಿತು. ಈ ಚಿತ್ರಕ್ಕಿಂತ ಮೊದಲು 2023 ರಲ್ಲಿ ಬಿಡುಗಡೆಯಾದ ಕಂಗನಾ ರನೌತ್ ಅವರ 'ತೇಜಸ್' ಚಿತ್ರ ಶೋಚನೀಯವಾಗಿ ಸೋತಿತು. ಈಗ ಕಂಗನಾ ವಯಸ್ಸಿನ ಬಗ್ಗೆ ಮಾತನಾಡಿದ್ದಾರೆ.

ಕಂಗನಾಗೆ ದೊಡ್ಡ ಯಶಸ್ಸು ಸಿಗದೆ ಸಾಕಷ್ಟು ಸಮಯ ಕಳೆದಿದೆ. ಏಕೆಂದರೆ 2022ರಲ್ಲಿ ಬಿಡುಗಡೆಯಾದ 'ಧಕಡ್' ಚಿತ್ರ ವಿಫಲವಾಯಿತು. 'ತಲೈವಿ', 'ಪಂಗಾ' ಮತ್ತು 'ಜಡ್ಜ್‌ಮೆಂಟಲ್ ಹೈ ಕ್ಯಾ' ಚಿತ್ರಗಳು ಕೂಡ ಸೋಲಿನ ಸಾಲಿಗೆ ಸೇರಿವೆ. ಆದಾಗ್ಯೂ, ಕಂಗನಾ ರನೌತ್ ರಾಜಕೀಯಕ್ಕೆ ಬಂದಾಗಿನಿಂದ, ಅವರು ನಟನೆಯನ್ನು ತೊರೆಯುತ್ತಾರೆ ಎಂಬ ಊಹಾಪೋಹಗಳು ಕೇಳಿಬರುತ್ತಿವೆ.



ಕಂಗನಾ ಬಿಜೆಪಿ ಟಿಕೆಟ್‌ನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಅವರು ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಸ್ಥಾನದಿಂದ ಗೆದ್ದರು. ಚಲನಚಿತ್ರಗಳ ಜೊತೆಗೆ, ಅವರು ರಾಜಕೀಯ ಕೆಲಸಕ್ಕೂ ಪೂರ್ಣ ಸಮಯವನ್ನು ಮೀಸಲಿಡುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಅವರು ನಟನೆಯನ್ನು ಬಿಡುತ್ತಾರೆಯೇ ಎಂಬ ಅನುಮಾನವನ್ನು ಅಭಿಮಾನಿಗಳು ವ್ಯಕ್ತಪಡಿಸುತ್ತಿದ್ದಾರೆ. ಏತನ್ಮಧ್ಯೆ, ಕಂಗನಾ ಅವರ ಇತ್ತೀಚಿನ ಕಾಮೆಂಟ್‌ಗಳು ವೈರಲ್ ಆಗಿವೆ. ಕಂಗನಾ ಇತ್ತೀಚೆಗೆ ತಮ್ಮ ವಯಸ್ಸಿನ ಬಗ್ಗೆ ಮಾತನಾಡಿದ್ದಾರೆ.

'ನಾನು ವಯಸ್ಸಿನ ಬಗ್ಗೆ ಎಂದಿಗೂ ಯೋಚಿಸಲಿಲ್ಲ, ನನ್ನ ಆಧ್ಯಾತ್ಮಿಕತೆಯಿಂದ ತುಂಬಿದ ಮನಸ್ಸು ಎಂದಿಗೂ ವಯಸ್ಸಿಗೆ ಹೆದರುವುದಿಲ್ಲ, ಚಿತ್ರರಂಗದಲ್ಲಿ ಬಿಳಿ ಕೂದಲಿಗೆ ಹೆದರುವ ಜನರನ್ನು ನಾನು ನೋಡಿದ್ದೇನೆ. ಆದರೆ ರಾಜಕೀಯದಲ್ಲಿ ಹಾಗಲ್ಲ, ವಯಸ್ಸಾಗುವುದು ಕೂಡ ಒಂದು ಸಂತೋಷ. ರಾಜಕೀಯದಲ್ಲಿರುವ ಜನರು ವೃದ್ಧರ ಬಗ್ಗೆ ದಯೆ ತೋರಿಸುತ್ತಾರೆ ಎಂದು ನಾನು ಭಾವಿಸುತ್ತೇನೆ ಎಂದು ಕಂಗನಾ ಹೇಳಿದರು. ಈ ಕಾಮೆಂಟ್‌ಗಳು ವೈರಲ್ ಆಗಿವೆ.

ಕಂಗನಾ ಸದ್ಯ ಯಾವುದೇ ಹೊಸ ಸಿನಿಮಾ ಘೋಷಣೆ ಮಾಡಿಲ್ಲ, ಅವರು ನಟನೆ, ನಿರ್ಮಾಣ ಹಾಗೂ ನಿರ್ದೇಶನ ಮೂರರಲ್ಲೂ ತೊಡಗಿಕೊಂಡಿದ್ದರು. ಅವರು ನಟನೆಯಿಂದ ದೂರ ಆದರೆ ಚಿತ್ರರಂಗಕ್ಕೆ ದೊಡ್ಡ ನಷ್ಟವೇ ಸರಿ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 1.6.2025



# ಕನ್ನಡ ಇಂಡಸ್ಟ್ರಿ ಚಿಕ್ಕದು ಎಂದವನಿಗೆ ಅಲ್ಲೇ ತಿರುಗೇಟು ಕೊಟ್ಟಿದ್ದ ಯಶ್!

ಇತ್ತೀಚೆಗೆ ಚೆನ್ನೈನಲ್ಲಿ ನಡೆದ 'ಥಗ್ ಲೈಫ್' ಸಿನಿಮಾ ಆಡಿಯೋ ಲಾಂಚ್ ಕಾರ್ಯಕ್ರಮದಲ್ಲಿ ಕನ್ನಡ ನಟ ಶಿವರಾಜ್‌ಕುಮಾರ್ ಕೂಡ ಭಾಗಿ ಆಗಿದ್ದರು. ವೇದಿಕೆಯಲ್ಲಿ ಕಮಲ್ ಹಾಸನ್ ಮಾತನಾಡುತ್ತಾ ಡಾ. ರಾಜ್‌ಕುಮಾರ್ ಫ್ಯಾಮಿಲಿ ಜೊತೆಗಿನ ಒಡನಾಟ ನೆನಪಿಸಿಕೊಂಡಿದ್ದರು. ಮಾತಿನ ಕೊನೆಯಲ್ಲಿ ತಮಿಳಿನಿಂದ ಕನ್ನಡ ಹುಟ್ಟಿದ್ದು ಎಂದು ಹೇಳಿ ವಿವಾದ ಮೈಮೇಲೆ ಎಳೆದುಕೊಂಡಿದ್ದಾರೆ.

ಕಮಲ್ ಹಾಸನ್ ಹೇಳಿಕೆ ಬಗ್ಗೆ ಪರ ವಿರೋಧ ಚರ್ಚೆ ನಡೀತಿದೆ. ಅವರು ಕ್ಷಮೆ ಕೇಳಬೇಕು ಎಂದು ಕನ್ನಡ ಪರ ಸಂಘಟನೆಗಳು ಪಟ್ಟು ಹಿಡಿದಿವೆ. ರಾಜ್ಯದ ಕೆಲವೆಡೆ ಪ್ರತಿಭಟನೆ ಕೂಡ ನಡೆದಿದೆ. ಕಮಲ್ ಈ ಮಾತು ಹೇಳುವಾಗ ಶಿವಣ್ಣ ಅಲ್ಲೇ ಇದ್ದರು. ಯಾಕೆ ಅಲ್ಲೇ ಸರಿ ಮಾಡಲಿಲ್ಲ ಎಂದು ಕೆಲವರು ಚಕಾರ ಎತ್ತಿದ್ದಾರೆ. ಕನ್ನಡದ ಬಗ್ಗೆ ಕಮಲ್ ಹಾಸನ್ ಅವರಿಗೂ ಪ್ರೀತಿಯಿದೆ, ಯಾಕೆ ಅದನ್ನ ದೊಡ್ಡ ವಿಷಯ ಮಾಡ್ತೀರಾ? ಎಲ್ಲಾ ಅವ್ರೇ ಸರಿಪಡಿಕೊಳ್ಳುತ್ತಾರೆ ಎಂದು ಶಿವಣ್ಣ ಈಗಾಗಲೇ ಪ್ರತಿಕ್ರಿಯಿಸಿದ್ದಾರೆ.

ಶಿವಣ್ಣ ಅವರನ್ನು ಟ್ರೋಲ್ ಮಾಡುವವರಿಗೆ ಅಭಿಮಾನಿಗಳು ತಿರುಗೇಟು ಕೊಡುತ್ತಿದ್ದಾರೆ. ಅವರ ಕನ್ನಡಾಭಿಮಾನದ ಬಗ್ಗೆ ಯಾರು ಪ್ರಶ್ನಿಸಬೇಡಿ ಎಂದು ಸೋಶಿಯಲ್ ಮೀಡಿಯಾದಲ್ಲಿ ಕಾಮೆಂಟ್ ಮಾಡುತ್ತಿದ್ದಾರೆ. ಇದೆಲ್ಲದರ ನಡುವೆ ಈ ಹಿಂದೆ ತೆಲುಗು ನಿರ್ಮಾಪಕ ಕನ್ನಡ ಚಿತ್ರರಂಗದ ಚಿಕ್ಕದು ಎಂದು ಮಾತನಾಡಿದಾಗ ಯಶ್ ಅಲ್ಲೇ ಅದಕ್ಕೆ ತಿರುಗೇಟು ಕೊಟ್ಟಿದ್ದ ವೀಡಿಯೋವನ್ನು ಕೆಲವರು ವೈರಲ್ ಮಾಡುತ್ತಿದ್ದಾರೆ.

ಯಶ್ ನಟನೆಯ 'ಕೆಜಿಎಫ್'ಸರಣಿ ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸದ್ದು ಮಾಡಿದ್ದು ಗೊತ್ತೇಯಿದೆ. ಹೈದರಾಬಾದ್ನಲ್ಲಿ ಕೆಜಿಎಫ್-2 ಚಿತ್ರದ ಈವೆಂಟ್ ನಡೆದಿತ್ತು. ಈ ವೇಳೆ ತೆಲುಗಿನ ಖ್ಯಾತ ನಿರ್ಮಾಪಕ ದಿಲ್ ರಾಜು ಮಾತನಾಡಿ ಯಶ್ ಹಾಗೂ 'ಕೆಜಿಎಫ್' ಚಿತ್ರವನ್ನು ಕೊಂಡಾಡಿದ್ದರು. ಒಂದು ಕಾಲಲದಲ್ಲಿ ಭಾರತೀಯ ಸಿನಿಮಾ ಅಂದರೆ ಬಾಲಿವುಡ್ ಚಿತ್ರಗಳ ಬಗ್ಗೆ ಮಾತನಾಡುತ್ತಿದ್ದರು. ಬಳಿಕ ತೆಲುಗು ಸಿನಿಮಾಗಳ ಬಗ್ಗೆ ದೊಡ್ಡದಾಗಿ ಹೇಳುತ್ತಿದ್ದರು. ತಮಿಳಿನಲ್ಲಿ ರಜನಿಕಾಂತ್ ಸೇರಿ ಕೆಲ ನಟ ಸಿನಿಮಾಗಳನ್ನು ಹಾಡಿ ಹೊಗಳುತ್ತಿದ್ದರು. ಮಲಯಾಳಂನಲ್ಲಿ ವಿಭಿನ್ನ ಸಿನಿಮಾ ಮಾಡ್ತಾರೆ ಎನ್ನುತ್ತಿದ್ದರು. ಕನ್ನಡದ ವಿಷಯಕ್ಕೆ ಬಂದರೆ ಇಂಡಸ್ಟ್ರಿ ಚಿಕ್ಕದು, ಅವ್ರ ಮ್ಯಾಕ್ಸಿಮಮ್ ಬಜೆಟ್ 5 ಕೋಟಿ ರೂ. ಅಂತ ನಾವೆಲ್ಲಾ ಕೇಳುತ್ತಿದ್ದೆವು. ಆದರೆ 'ಕೆಜಿಎಫ್' ಚಿತ್ರಕ್ಕೆ ಕನ್ನಡದಲ್ಲಿ ದೊಡ್ಡ ಸಿನಿಮಾ ಕಲೆಕ್ಷನ್‌ಗೆ ಎರಡರಷ್ಟು ಬಂಡವಾಳ ಹಾಕುತ್ತಿದ್ದಾರೆ ಎಂದಾಗ ಅಚ್ಚರಿಯಾಗಿತ್ತು. ಆದರೆ ಯಶ್ ಹಾಗೂ ಪ್ರಶಾಂತ್ ನೀಲ್ ಟೀಂ 'ಕೆಜಿಎಫ್' ಸಿನಿಮಾ ಮಾಡಿ ಇಡೀ ಭಾರತೀಯ ಚಿತ್ರರಂಗವೇ ಸ್ಯಾಂಡಲ್‌ವುಡ್ ಕಡೆ ತಿರುಗಿ ನೋಡುವಂತೆ ಮಾಡಿದ್ರು ಎಂದಿದ್ದರು.

ದಿಲ್ ರಾಜು ಮಾತನಾಡಿದ ಬಳಿಕ ನಟ ಯಶ್ ವೇದಿಕೆ ಏರಿ ಮಾತನಾಡಿದ್ದರು. ಈ ವೇಳೆ ಕನ್ನಡ ಚಿತ್ರರಂಗ ಚಿಕ್ಕದು ಅಂತ ನಾವು ಅಂದುಕೊಂಡಿದ್ದೆವು ಎಂದಿದ್ದ ದಿಲ್ ರಾಜುಗೆ ನೇರವಾಗಿ ಕೌಂಟರ್ ಕೊಟ್ಟಿದ್ದರು. ತೆಲುಗು ಸಿನಿಮಾಗಳನ್ನು ಅಲ್ಲಿನ ಪ್ರೇಕ್ಷಕರನ್ನು ಕೊಂಡಾಡುತ್ತಲೇ ನಮ್ಮ ಕನ್ನಡ ಸಿನಿಮಾ ಹೆಗ್ಗಳಿಕೆ ಬಗ್ಗೆ ಮಾತನಾಡಿದ್ದರು. ದಿಲ್ ರಾಜು ಅವರು ಕೂಡ ನಮ್ಮ ಇಂಡಸ್ಟ್ರಿ ಬಗ್ಗೆ ಮಾತನಾಡಿದ್ರು. ಆದರೆ ನಮ್ಮ ಕಲಾವಿದರು, ತಂತ್ರಜ್ಞರು ಸಾಕಷ್ಟು ಪರಿಶ್ರಮಪಡುತ್ತಿದ್ದಾರೆ. ನಮ್ಮ ಕನ್ನಡ ಸಿನಿಮಾಗಳು 50 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿವೆ. ಅದು ಪರಭಾಷೆಯ ಕೆಲವರಿಗೆ ಗೊತ್ತಿಲ್ಲ, ಅದಕ್ಕೆ ಕಾರಣ ಏನು ಎನ್ನುವುದು ಗೊತ್ತಿಲ್ಲ ಎಂದು ಯಶ್ ಸ್ಪಷ್ಟನೆ ಕೊಟ್ಟಿದ್ದರು. ☯

# ಮಹಿಳೆಗೆ 92 ಲಕ್ಷ ರೂ. ವಂಚಿಸಿದ ಆರೋಪ; ನಿರ್ಮಾಪಕ ಸೂರಪ್ಪ ಬಾಬು ವಿರುದ್ಧ ಕೇಸ್

ಶಿವರಾಜ್‌ಕುಮಾರ್, ಗಣೇಶ್ ಜೊತೆ ಸಿನಿಮಾ ಮಾಡುವುದಾಗಿ ನಿರ್ಮಾಪಕ ಸೂರಪ್ಪ ಬಾಬು ಅವರು ಹೇಳಿಕೊಂಡಿದ್ದರು. ಈ ಸಿನಿಮಾದ ನಿರ್ಮಾಣಕ್ಕಾಗಿ ಮಹಿಳೆಯೊಬ್ಬರಿಂದ ಬರೋಬ್ಬರಿ 92 ಲಕ್ಷ ರೂಪಾಯಿ ಸಾಲ ಪಡೆದುಕೊಂಡಿದ್ದರು. ಆದರೆ ಅವರು ಆ ಸಿನಿಮಾ ಮಾಡುತ್ತಿಲ್ಲ ಎಂಬುದು ನಂತರ ತಿಳಿದುಬಂತು. ಆಗ ಮಹಿಳೆ ಸಾಲ ವಾಪಸ್ ಕೇಳಿದರು. ಕನ್ನಡ ಚಿತ್ರರಂಗದ ಖ್ಯಾತ ನಿರ್ಮಾಪಕ ಸೂರಪ್ಪ ಬಾಬು ವಿರುದ್ಧ ವಂಚನೆ ಆರೋಪ ಕೇಳಿಬಂದಿದೆ, ಮಹಿಳೆಯೊಬ್ಬರಿಂದ ಹಣ ಪಡೆದು, ಹಿಂದಿರುಗಿಸದ ಕಾರಣ ಸೂರಪ್ಪ ಬಾಬು ವಿರುದ್ಧ ದೂರು ನೀಡಲಾಗಿದೆ. ದೂರಿಗೆ ಸಂಬಂಧಪಟ್ಟಂತೆ ಬೆಂಗಳೂರಿನ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಲಾಗಿದೆ. ಶಿವರಾಜ್‌ಕುಮಾರ್, ಗಣೇಶ್ ಜೊತೆ ಸಿನಿಮಾ ಮಾಡುವುದಾಗಿ ನಂಬಿಸಿ,



ಮಹಿಳೆಯಿಂದ ಸೂರಪ್ಪ ಬಾಬು ಹಣ ಪಡೆದಿದ್ದರು ಎನ್ನಲಾಗಿದೆ. ಆದರೆ ನಂತರ ಸಾಲ ವಾಪಸ್ ಕೇಳಿದಾಗ ಮಹಿಳೆಗೆ ಬೆದರಿಕೆ ಹಾಕಿದರು ಎಂಬ ಆರೋಪ ಎದುರಾಗಿದೆ.

ಪುನೀತ್ ರಾಜ್‌ಕುಮಾರ್ ನಟನೆಯ 'ಪೃಥ್ವಿ', ಕಿಚ್ಚ ಸುದೀಪ್ ನಟನೆಯ ' ಕೋಟಿಗೊಬ್ಬ 3' ಮುಂತಾದ ಸಿನಿಮಾಗಳನ್ನು ನಿರ್ಮಾಣ ಮಾಡುವ ಮೂಲಕ ಸೂರಪ್ಪ ಬಾಬು ಅವರು ಗುರುತಿಸಿಕೊಂಡಿದ್ದಾರೆ. ಈಗ ಅವರ ಮೇಲೆ ವಂಚನೆ ಆರೋಪ ಕೇಳಿಬಂದಿದೆ. ಸಿನಿಮಾ ನಿರ್ಮಾಣಕ್ಕಾಗಿ ಪರಿಚಿತ ಮಹಿಳೆಯಿಂದ ಹಣ ಪಡೆದು ವಂಚಿಸಿರುವ ಆರೋಪ ಅವರ ಮೇಲಿದೆ. 2023ರಲ್ಲಿ ಮಹಿಳೆಗೆ ನಿರ್ಮಾಪಕ ಸೂರಪ್ಪ ಬಾಬು ಪರಿಚಯವಾಗಿತ್ತು. ಶಿವರಾಜ್ ಕುಮಾರ್, ಗಣೇಶ್ ಜೊತೆ ತಾವು ಸಿನಿಮಾ ಮಾಡುತ್ತಿರುವುದಾಗಿ ಸೂರಪ್ಪ ಬಾಬು ನಂಬಿಸಿದ್ದರು. ಈ ಸಿನಿಮಾದ ನಿರ್ಮಾಣಕ್ಕಾಗಿ ಸಾಲ ಬೇಕು ಎಂದು ಮಹಿಳೆ ಬಳಿ ಅವರು ಕೇಳಿದ್ದರು. ಸಿನಿಮಾ ನಿರ್ಮಾಣಕ್ಕಾಗಿ ಆ ಮಹಿಳೆಯು ಹಂತ ಹಂತವಾಗಿ 92 ಲಕ್ಷ ರೂಪಾಯಿಗಳನ್ನು ನೀಡಿದರು.

ಮಹಿಳೆಯಿಂದ ಹಣ ಪಡೆದು ಕೆಲವು ದಿನಗಳು ಕಳೆದ ನಂತರ ಸೂರಪ್ಪ ಬಾಬು ಸಂಪರ್ಕಕ್ಕೆ ಸಿಗಲಿಲ್ಲ. ಈ ಬಗ್ಗೆ ಹೆಚ್ಚಿನ ವಿಚಾರಣೆ ನಡೆಸಿದಾಗ ಶಿವರಾಜ್‌ಕುಮಾರ್, ಗಣೇಶ್ ಜೊತೆ ಸೂರಪ್ಪ ಬಾಬು ಸಿನಿಮಾ ಮಾಡುತ್ತಿಲ್ಲ ಎಂಬುದು ಮಹಿಳೆಗೆ ಗೊತ್ತಾಯಿತು. ಬಳಿಕ ತಮ್ಮ ಹಣ ವಾಪಸ್ ನೀಡುವಂತೆ ಮಹಿಳೆ ಪಟ್ಟುಹಿಡಿದರು. ಅಲ್ಲಿಂದ ಕಿರಿಕ್ ಆರಂಭ ಆಯಿತು.

ಬರೋಬ್ಬರಿ 92 ಲಕ್ಷ ರೂಪಾಯಿ ಸಾಲ ನೀಡಿದ್ದ ಮಹಿಳೆಯು ಹಣ ವಾಪಸ್ ಕೇಳಿದಾಗ ಸೂರಪ್ಪ ಬಾಬು ಅವರು ಕೇವಲ 25 ಲಕ್ಷ ರೂಪಾಯಿ ಹಿಂದಿರುಗಿಸಿದರು. ಆದರೆ ಇನ್ನುಳಿದ ಹಣವನ್ನು ವಾಪಸ್ ಕೇಳಿದಾಗ ಮಹಿಳೆಗೆ ಬೆದರಿಕೆ ಹಾಕಿದರು ಎಂದು ಆರೋಪಿಸಲಾಗಿದೆ. ಆದ್ದರಿಂದ ನಿರ್ಮಾಪಕ ಸೂರಪ್ಪ ಬಾಬು ವಿರುದ್ಧ ಮಹಿಳೆ ದೂರು ದಾಖಲಿಸಿದ್ದಾರೆ. ಮಹಿಳೆಯ ದೂರು ಆಧರಿಸಿ ಅಮೃತಹಳ್ಳಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಿದ್ದಾರೆ. ☯



# ಪಾನ್ ಇಂಡಿಯಾಗೆ ರುಕ್ಮಿಣಿ ವಸಂತ್!

'ಕತೆ ನೀಡುವ ಸವಾಲು, ನಿರ್ದೇಶಕ ರೂಪಿಸುವ ಪಾತ್ರ ನನ್ನವರೆಗೂ ಬಂದಾಗ ಅದಕ್ಕೆ ಜೀವ ತುಂಬಬೇಕು ಇದು ನನ್ನ ಕನಸು.' 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾಗೆ ಎಂಟ್ರಿ ಕೊಟ್ಟ ಸಂದರ್ಭ ರುಕ್ಮಿಣಿ ವಸಂತ್ ಹೇಳಿದ ಮಾತಿದು.

ಅವರು ಈ ಕನಸಿನ ಹಿಂದೆ ಬಿದ್ದು ಬಹಳ ವರ್ಷಗಳಾಗಿವೆ. ದಿನೇ ದಿನೇ ಅವರ ರೀಚ್ ವಿಸ್ತರಿಸುತ್ತಲೇ ಇದೆ. 'ಬೀರಬಲ್ಲ' ಸಿನಿಮಾದಿಂದ ಶುರುವಾದ ಅವರ ಕೆರಿರ್ ಇದೀಗ ಮಣಿರತ್ನಂ ಸಿನಿಮಾವರೆಗೂ ತಲುಪಿದೆ. ಆ ನಿಟ್ಟಿನಲ್ಲಿ ಕನ್ನಡ ನೆಲದ ಈ ಪ್ರತಿಭಾವಂತ ನಟಿ ತನ್ನ ಕನಸಿನ ಜರ್ನಿಯಲ್ಲಿ ಕಂಡಿದ್ದಾರೆ ಎಂದೇ ಹೇಳಬಹುದು. ಇವರ ನಟನೆಯ 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾಗಳು ಕನ್ನಡದಲ್ಲಿ ಜಭೇರಿ ಬಾರಿಸುವ ಹೊತ್ತಿಗೆ ಇವರು ಕನ್ನಡಿಗರ ಪಾಲಿಗೆ 'ಪುಟ್ಟಿ'ಯೇ ಆಗಿಹೋದರು. ಕನ್ನಡದಲ್ಲಿ ಗಳಿಸಿದ ಯಶಸ್ಸಿನಿಂದಾಗಿ ಇವರನ್ನು ತೆಲುಗು ಮತ್ತು ತಮಿಳು ಚಿತ್ರರಂಗಕ್ಕೆ ಗಮನಿಸುವುದಕ್ಕೆ ಶುರು ಮಾಡಿತು. ಸದ್ದಿಲ್ಲದೆ ಪ್ರಶಾಂತ್ ನೀಲ್ ಹಾಗೂ ಜೂ. ಎನ್‌ಟಿಆರ್ ಕಾಂಬಿನೇಶನ್‌ನ 'ಡ್ರ್ಯಾಗನ್' ಚಿತ್ರಕ್ಕೆ ನಾಕಿ ಆದರು. ತೆಲುಗಿನ 'ಅಪ್ಪುಡೊ ಇಪ್ಪುಡೊ ಎಪ್ಪುಡೊ' ಚಿತ್ರಕ್ಕೂ ನಾಯಕಿ ಆಗಿದ್ದಾರೆ. ತಮಿಳಿನಲ್ಲಿ ವಿಜಯ್ ಸೇತುಪತಿ ಜೊತೆ 'ಏಸ್' ಹಾಗೂ ಶಿವ ಕಾರ್ತಿಕೇಯನ್ ಜೊತೆ 'ಮದರಾಸಿ' ಚಿತ್ರಗಳಲ್ಲಿ ನಾಯಕಿ ಆಗಿ ನಟಿಸಿದ್ದಾರೆ. 'ಕಿಂಗ್‌ಡಮ್' ಚಿತ್ರದ ನಂತರ ಸೆಟ್ಟೇರಲಿರುವ ವಿಜಯ್ ದೇವರಕೊಂಡ ಚಿತ್ರಕ್ಕ ರುಕ್ಮಿಣಿ ವಸಂತ್ ಅವರೇ ನಾಯಕಿ ಎನ್ನುವುದು ಟಾಲಿವುಡ್ ಸುದ್ದಿ.

ವಿಶೇಷ ಎನ್ನುವಂತೆ ಇದೀಗ ಮಣಿರತ್ನಂ ನಿರ್ದೇಶನದ ಚಿತ್ರದಲ್ಲಿಯೂ ರುಕ್ಮಿಣಿ ವಸಂತ್ ನಟಿಸಲಿದ್ದಾರೆ ಎನ್ನುವ ಸುದ್ದಿ ಬಂದಿದೆ. ಈ ಚಿತ್ರಕ್ಕೆ ತೆಲುಗಿನ ನವೀನ್ ಪೊಲಿಶೆಟ್ಟಿ ಹೀರೋ ಎನ್ನಲಾಗುತ್ತಿದೆ. 'ಥಗ್ ಲೈಫ್' ಚಿತ್ರದ ನಂತರ ಬರಲಿರುವ ಮಣಿರತ್ನಂ ನಿರ್ದೇಶನದ ಚಿತ್ರ ಇದಾಗಿದೆ.

Vol. 40 No. 52 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com